Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


| | |
|---|---|
| भाग—IX | अनुभाग I |
| PART IX | SECTION I |
| ಭಾಗ IX | ವಿಭಾಗ I |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ।

| | | | |
|---|---|---|---|
| **सं—1** | **नई दिल्ली, गुरुवार, एप्रिल 29, 1993** | **वैशाख 9, 1915 (शक)** | **खन्ड—15** |
| **No. 1** | New Delhi, Thursday, April 29, 1993 | Vaishaka 9, 1915 (Saka) | **Vol. 15** |
| ಸಂಖ್ಯೆ ೧ | ನವದೆಹಲಿ, ಗುರುವಾರ, ಏಪ್ರಿಲ್ ೨೯, ೧೯೯೩ | ವೈಶಾಖ ೯, ೧೯೧೫ (ಶಕ) | ಸಂಪುಟ ೧೫ |


## Ministry of Law, Justice & Company Affairs

(Legislative Department)

New Delhi, March 22, 1993.

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, ಮಾರ್ಚ್ 22, 1993.

The translation in Kannada of the following Acts, namely—(1) The Consumer (Protection) Act, 1986 (2) The Negotiable Instruments Act, 1881 and (3) The Urban Land (Ceiling and Regulation) Act, 1976 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ಬಳಕೆದಾರ (ಸಂರಕ್ಷಣಾ) ಅಧಿನಿಯಮ, 1986 (2) ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ಮತ್ತು (3) ನಗರ ಭೂಮಿ (ಪರಮಾವಧಿ ಮತ್ತು ವಿನಿಯಮನ) ಅಧಿನಿಯಮ, 1976 —ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881

**[1881 ರ 26]**

[ಡಿಸೆಂಬರ್ 9, 1881]

ಪ್ರಾಮಿಸರಿ ನೋಟುಗಳಿಗೆ, ವಿನಿಮಯ ಪತ್ರಗಳಿಗೆ ಮತ್ತು ಚೆಕ್ಕುಗಳಿಗೆ ಸಂಬಂಧಿಸಿದ ಕಾನೂನನ್ನು ಪರಿಭಾಷಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ,

ಪೀಠಿಕೆ.– ಪ್ರಾಮಿಸರಿ ನೋಟುಗಳಿಗೆ, ವಿನಿಮಯ ಪತ್ರಗಳಿಗೆ ಮತ್ತು ಚೆಕ್ಕುಗಳಿಗೆ ಸಂಬಂಧಿಸಿದ ಕಾನೂನನ್ನು ಪರಿಭಾಷಿಸುವುದು ಮತ್ತು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

## ಅಧ್ಯಾಯ –

## ಪ್ರಾರಂಭಿಕ

**1. ಸಂಕ್ಷಿಪ್ತಹೆಸರು, ಸ್ಥಳೀಯ ವ್ಯಾಪ್ತಿ, ಹುಂಡಿ, ಇತ್ಯಾದಿಗಳಿಗೆ ಸಂಬಂಧಿಸಿದ ಪದ್ಧತಿಗಳ ಉಳಿಸುವಿಕೆ, ಪ್ರಾರಂಭ.–** ಈ ಅಧಿನಿಯಮವನ್ನು ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 ಎಂದು ಕರೆಯತಕ್ಕದ್ದು.

ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ; ಆದರೆ ಇದರಲ್ಲಿರುವುದು ಯಾವುದೂ ಭಾರತೀಯ ಕರೆನ್ಸಿ ನೋಟುಗಳ ಅಧಿನಿಯಮ, 1871 (1871ರ 3ನೇ ಅಧಿನಿಯಮ)ರ 21ನೇ ಪ್ರಕರಣವನ್ನು, ಅಥವಾ ಪೌರ್ವಾತ್ಯ ಭಾಷೆಯಲ್ಲಿರುವ ಯಾವುದೇ ಲಿಖಿತಕ್ಕೆ ಸಂಬಂಧಿಸಿದ ಯಾವುದೇ ಸ್ಥಳೀಯ ಪದ್ಧತಿಯನ್ನು ಬಾಧಿಸುವುದಿಲ್ಲ. ಪರಂತು ಆ ಪಕ್ಷಕಾರರ ವಿಧಿ ಸಮ್ಮತ ಸಂಬಂಧಗಳು ಈ ಅಧಿನಿಯಮಕ್ಕೆ ಒಳಪಡತಕ್ಕದ್ದೆಂದು ಸೂಚಿಸುವ ಲಿಖಿತದಲ್ಲಿಯ ಯಾವುದೇ ಶಬ್ದಗಳ ಮೂಲಕ ಅಂಥ ಪದ್ಧತಿಗಳನ್ನು ಹೊರತುಪಡಿಸಬಹುದಾಗಿದೆ; ಮತ್ತು ಇದು 1882ರ ಮಾರ್ಚ್ ಮೊದಲನೆಯ ದಿನದಂದು ಜಾರಿಗೆ ಬರತಕ್ಕದ್ದು.

2. [ನಿರಸಿತ]

3. ಅರ್ಥ ವಿವರಣೆ ಖಂಡ.– **"ಬ್ಯಾಂಕರ್"**; ಈ ಅಧಿನಿಯಮದಲ್ಲಿ –

"ಬ್ಯಾಂಕರ್" ಎಂಬುದು ಬ್ಯಾಂಕರನಾಗಿ ಕಾರ್ಯ ನಿರ್ವಹಿಸುವ ಯಾವನೇ ವ್ಯಕ್ತಿಯನ್ನು ಮತ್ತು ಯಾವುದೇ ಅಂಚೆ ಕಾರ್ಯಾಲಯ ಉಳಿತಾಯ ಬ್ಯಾಂಕನ್ನು ಒಳಗೊಳ್ಳುತ್ತದೆ.

## ಅಧ್ಯಾಯ –II

## ನೋಟುಗಳು, ಬಿಲ್ಲುಗಳು ಮತ್ತು ಚೆಕ್ಕುಗಳ ವಿಷಯದಲ್ಲಿ

4. **"ಪ್ರಾಮಿಸರಿ ನೋಟು" .–** "ಪ್ರಾಮಿಸರಿ ನೋಟು" ಎಂದರೆ, ಒಂದು ನಿರ್ದಿಷ್ಟ ಹಣದ ಮೊಬಲಗನ್ನು ಒಬ್ಬ ನಿಶ್ಚಿತ ವ್ಯಕ್ತಿಗೆ ಅಥವಾ ಅವನ ಆದೇಶಾನುಸಾರ ಅಥವಾ ಲಿಖಿತದ ವಾಹಕನಿಗೆ ಸಂದಾಯ ಮಾಡಲು ಅದನ್ನು ಬರೆದವನು ಸಹಿ ಹಾಕಿದ , ಬೇಷರತ್ತಾದ ಪರಿವಚನವನ್ನೊಳಗೊಂಡ (ಬ್ಯಾಂಕ್ ನೋಟು ಅಥವಾ ಕರೆನ್ಸಿ ನೋಟು ಅಲ್ಲದ) ಬರಹದಲ್ಲಿರುವ ಒಂದು ಲಿಖಿತ.

### ದೃಷ್ಟಾಂತಗಳು

'ಕ' ಎಂಬುವವನು ಕೆಳಕಂಡ ನಿಬಂಧನೆಗಳುಳ್ಳ ಲಿಖಿತಗಳಿಗೆ ಸಹಿ ಹಾಕುತ್ತಾನೆ.–

(ಎ) "ನಾನು 'ಖ'ನಿಗೆ ಅಥವಾ ಅವನ ಆದೇಶಾನುಸಾರ 500 ರೂಪಾಯಿಗಳನ್ನು ಕೊಡಲು ವಾಗ್ದಾನ ಮಾಡುತ್ತೇನೆ.

(ಬಿ) "ಸ್ವೀಕರಿಸಿದ ಮೌಲ್ಯಕ್ಕಾಗಿ ತಗಾದೆಯ ಮೇಲೆ ಸಂದಾಯ ಮಾಡಲು 1,000 ರೂಪಾಯಿಗಳಿಗೆ ನಾನು 'ಖ'ನಿಗೆ ಋಣಿಯಾಗಿದ್ದೇನೆಂದು ಒಪ್ಪಿರುತ್ತೇನೆ."

(ಸಿ) "ಶ್ರೀ 'ಖ'ನಾನು ನಿನಗೆ 1,000 ರೂಪಾಯಿಗಳಿಗೆ ಋಣಿ"

(ಡಿ) ನಾನು 'ಖ'ನಿಗೆ 500 ರೂಪಾಯಿಗಳನ್ನು ಮತ್ತು ಅವನಿಗೆ ಕೊಡತಕ್ಕ ಇತರ ಎಲ್ಲ ಹಣವನ್ನು ಸಂದಾಯ ಮಾಡಲು ವಾಗ್ದಾನ ಮಾಡುತ್ತೇನೆ.

(ಇ) "ಖ" ನು ನನಗೆ ಕೊಡಬೇಕಾಗಿರಬಹುದಾದ ಯಾವುದೇ ಹಣವನ್ನು ಮೊದಲು ಅದರಿಂದ ರಜಾ ಮಾಡಿಕೊಂಡು ನಾನು ಅವನಿಗೆ 500 ರೂಪಾಯಿಗಳನ್ನು ಸಂದಾಯ ಮಾಡಲು ವಾಗ್ದಾನ ಮಾಡುತ್ತೇನೆ.

(ಎಫ್) "ಗ"ಳ ಜೊತೆಗೆ ನನ್ನ ಮದುವೆಯಾದ 7 ದಿನಗಳ ತರುವಾಯ 'ಖ'ನಿಗೆ 500 ರೂಪಾಯಿ ಕೊಡಲು ನಾನು ವಾಗ್ದಾನ ಮಾಡುತ್ತೇನೆ."

(ಜಿ) “ಘ' ನ ಮರಣಾನಂತರ 'ಖ'ನಿಗೆ 500 ರೂಪಾಯಿಗಳನ್ನು ಕೊಡಲು ನಾನು ವಾಗ್ದಾನ ಮಾಡುತ್ತೇನೆ; ಪರಂತು ಆ ಹಣವನ್ನು ಕೊಡಲು ಸಾಕಾಗುವಷ್ಟನ್ನು 'ಘ' ನನಗೆ ಬಿಟ್ಟು ಹೋದರೆ ಮಾತ್ರ.”

(ಎಚ್) ' ' ನಿಗೆ 500 ರೂಪಾಯಿಗಳನ್ನು ಕೊಡಲು ಮತ್ತು ನನ್ನ ಕರಿಯ ಕುದುರೆಯನ್ನು ಮುಂದಿನ ಜನವರಿ 1 ರಂದು ಅವನಿಗೆ ಒಪ್ಪಿಸಲು ನಾನು ವಾಗ್ದಾನ ಮಾಡುತ್ತೇನೆ.

ಅನುಕ್ರಮವಾಗಿ () ಮತ್ತು ( ) ಎಂದು ಗುರುತಿಸಿದ ಲಿಖಿತಗಳು ಪ್ರಾಮಿಸರಿ ನೋಟುಗಳಾಗಿವೆ.

ಅನುಕ್ರಮವಾಗಿ (), (), (), (), (), () ಮತ್ತು () ಎಂದು ಗುರುತಿಸಿದ ಲಿಖಿತಗಳು ಪ್ರಾಮಿಸರಿ ನೋಟುಗಳಲ್ಲ.

5. **“ವಿನಿಮಯ ಪತ್ರ”.–** “ವಿನಿನಮಯ ಪತ್ರ” ಎಂಬುದು ಒಬ್ಬ ನಿಶ್ಚಿತ ವ್ಯಕ್ತಿಯು ಮತ್ತೊಬ್ಬ ನಿಶ್ಚಿತ ವ್ಯಕ್ತಿಗೆ ಅಥವಾ ಅವನ ಆದೇಶದ ಮೇರೆಗೆ ಅಥವಾ ಆ ಲಿಖಿತದ ವಾಹಕನಿಗೆ ಮಾತ್ರ ನಿಶ್ಚಿತ ಹಣದ ಮೊಬಲಗನ್ನು ಸಂದಾಯ ಮಾಡಲು ಬೇಷರತ್ತಾಗೆ ನಿರ್ದೇಶಿಸುವ ಆದೇಶವನ್ನೊಳಗೊಂಡು, ಬರೆದವನು ಸಹಿ ಹಾಕಿರುವ ಒಂದು ಲಿಖಿತ.

ಮನುಷ್ಯನ ಸಾಮಾನ್ಯ ನಿರೀಕ್ಷಣೆಗೆ ಅನುಸಾರವಾಗಿ, ಒಂದು ನಿರ್ದಿಷ್ಟ ಪ್ರಸಂಗವು ಸಂಭವಿಸುವುದು ನಿಶ್ಚಿತವಾಗಿದ್ದು, ಅದು ಸಂಭವಿಸುವ ಕಾಲವು ಅನಿಶ್ಚಿತವಾಗಿದ್ದಾಗ್ಯೂ, ಅದು ಸಂಭವಿಸಿದ ತರುವಾಯ ಒಂದು ನಿಶ್ಚಿತ ಅವಧಿಯು ಗತಿಸಿದ ಮೇಲೆ ಮೊಬಲಗು ಅಥವಾ ಅದರ ಯಾವುದೇ ಕಂತು ಸಂದಾಯವಾಗಬೇಕಾದ ಕಾಲವು ವ್ಯಕ್ತ ಮಾಡಲ್ಪಟ್ಟ ಕಾರಣದಿಂದ ಒಂದು ವಾಗ್ದಾನವು ಅಥವಾ ಸಂದಾಯದ ಆದೇಶವು ಈ ಪ್ರಕರಣದ ಮತ್ತು 4ನೇ ಪ್ರಕರಣದ ಅರ್ಥದಲ್ಲಿ “ಷರತ್ತಿಗೊಳಪಟ್ಟಿದ್ದು” ಆಗುವುದಿಲ್ಲ.

ಸಂದೇಯವಿರುವ ಮೊಬಲಗು, ಅದು ಮುಂಬರುವ ಬಡ್ಡಿಯನ್ನು ಒಳಗೊಳ್ಳುತ್ತಿದ್ದರೂ, ಅಥವಾ ಒಮದು ಸೂಚಿತ ವಿನಿಮಯ ದರದ ಮೇರೆಗೆ ಸಂದೇಯವಾಗಿದ್ದರೂ ಅಥವಾ ಒಂದು ವಿನಿಮಯ ಕ್ರಮಕ್ಕನುಸಾರವಾಗಿದ್ದರೂ, ಮತ್ತು ಒಂದು ಕಂತಿನ ಸಂದಾಯವು ತಪ್ಪಿದಾಗ ಸಂದಾಯವಾಗದ ಬಾಕಿ ಹಣವು ಪಾವತಿಯಾಗತಕ್ಕದ್ದೆಂದು ಲಿಖಿತವು ಉಪಬಂಧಿಸುತ್ತಿದ್ದಾಗ್ಯೂ, ಈ ಪ್ರಕರಣದ ಮತ್ತು 4ನೇ ಪ್ರಕರಣದ ಅರ್ಥದಲ್ಲಿ “ನಿಶ್ಚಿತವಾದುದು” ಆಗಿರಬಹುದು.

ಈ ವ್ಯಕ್ತಿಗೆ ನಿದೇಶ ಕೊಡಲಾಗಿದೆ ಅಥವಾ ಸಂದಾಯ ಮಾಡಬೇಕಾಗಿದೆ ಎಂಬುದು ಯಾವ ವ್ಯಕ್ತಿಯ ಬಗ್ಗೆ ಸ್ಪಷ್ಟವಾಗಿದೆಯೋ ಅವನನ್ನು ತಪ್ಪಾಗಿ ಹೆಸರಿಸಿದ್ದಾಗ್ಯೂ ಅಥವಾ ವರ್ಣನೆಯ ಮೂಲಕ ಮಾತ್ರ ಅಭಿಧಾನಿಸಿದ್ದಾಗ್ಯೂ, ಅವನು ಈ ಪ್ರಕರಣದ ಮತ್ತು 4ನೇ ಪ್ರಕರಣದ ಅರ್ಥದಲ್ಲಿ "ನಿಶ್ಚಿತ ವ್ಯಕ್ತಿ" ಆಗಿರಬಹುದು.

**6. ಚೆಕ್ಕುಗಳು.–** ಚೆಕ್ಕು, ನಿರ್ದಿಷ್ಟ ಬ್ಯಾಂಕರನಿಗೆ ಬರೆದ ಮತ್ತು ತಗಾದೆಯ ಮೇಲಲ್ಲದೆ ಸಂದೇಯವೆಂದು ಅಭಿವ್ಯಕ್ತವಾಗುವ ವಿನಿಮಯ ಪತ್ರ;

**7. "ಧನಾದೇಶಕ, ಧನಾದೇಶಿತ".–** ವಿನಿಮಯ ಪತ್ರವನ್ನು ಅಥವಾ ಚೆಕ್ಕನ್ನು ಬರೆದು ಕೊಡುವವನು "ಧನಾದೇಶಕ" ಎಂದು ಕರೆಯಲ್ಪಡುತ್ತಾನೆ; ಆ ಮೂಲಕ ಸಂದಾಯ ಮಾಡಲು ನಿರ್ದೇಶಿಸಲ್ಪಟ್ಟ ವ್ಯಕ್ತಿಯು "ಧನಾದೇಶಿತ" ಎಂದು ಕರೆಯಲ್ಪಡುತ್ತಾನೆ.

**"ಅವಶ್ಯ ಸಂದರ್ಭದ ಧನಾದೇಶಿತ.–** ಒಂದು ಬಿಲ್ಲಿನಲ್ಲಿ ಅಥವಾ ಅದರ ಮೇಲಿನ ಯಾವುದೇ (ಹಿಂಬರಹದಲ್ಲಿ) ಧನಾದೇಶಿತನ ಜೊತೆಗೆ ಮತ್ತೊಬ್ಬ ವ್ಯಕ್ತಿಯ, ಹೆಸರನ್ನು ಅವಶ್ಯವಾದರೆ ಹಣ ಪಡೆಯಲು ಅವನ ಬಳಿ ಹೋಗಲು ಬರೆದಿರುವಾಗ, ಅಂಥ ವ್ಯಕ್ತಿಯು "ಅವಶ್ಯ ಸಂದರ್ಭದ ಧನಾದೇಶಿತ" ಎಂದು ಕರೆಯಲ್ಪಡುತ್ತಾನೆ.

**"ಒಪ್ಪಿಗೆದಾರ".–** ಬಿಲ್ಲಿನ ಧನಾದೇಶಿತನು ಆ ಬಿಲ್ಲಿನ ಮೇಲೆ ಅಥವಾ ಅದರಲ್ಲಿ ಒಂದಕ್ಕಿಂತ ಹೆಚ್ಚು ಭಾಗಗಳಿದ್ದರೆ, ಅಂಥ ಭಾಗಗಳಲ್ಲಿ ಒಂದರ ಮೇಲೆ ತನ್ನ ಅನುಮತಿಯ ಸಹಿ ಹಾಕಿದ ಮತ್ತು ಅದನ್ನು ಧಾರಕನಿಗೆ ಅಥವಾ ಅವನ ಪರವಾಗಿ ಮತ್ತೊಬ್ಬ ವ್ಯಕ್ತಿಗೆ ಒಪ್ಪಿಸಿದ ಅಥವಾ ಅಂಥ ಸಹಿ ಹಾಕಿದ ಬಗ್ಗೆ ನೋಟೀಸು ಕೊಟ್ಟ ತರುವಾಯ ಅವನು "ಒಪ್ಪಿಗೆದಾರ"ನೆಂದು ಕರೆಯಲ್ಪಡುತ್ತಾನೆ.

**"ಪತ್ತಿಗಾಗಿ ಒಪ್ಪಿಗೆದಾರ".–** ಒಂದು ವಿನಿಮಯ ಪತ್ರವು ಒಪ್ಪದಿರುವಿಕೆಗಾಗಿ ಅಥವಾ ಹೆಚ್ಚಿನ ಭದ್ರತೆಗಾಗಿ" ಟಿಪ್ಪಣಿಯಾದಾಗ ಅಥವಾ ಪ್ರಮಾಣನವಾದಾಗ, ಯಾವನೇ ವ್ಯಕ್ತಿಯ ಧನಾದೇಶಕ ಅಥವಾ ಹಿಂಬರಹಗಾರರಲ್ಲಿ ಯಾರಾದರೂ ಒಬ್ಬರ ಪತ್ತಿಗಾಗಿ, ಪ್ರಮಾಣನದ ನಂತರ ಅಂಗೀಕರಿಸಿದರೆ ಅಂಥ ವ್ಯಕ್ತಿಯು "ಪತ್ತಿಗಾಗಿ ಒಪ್ಪಿಗೆದಾರ" ಎಂದು ಕರೆಯಲ್ಪಡುತ್ತಾನೆ.

**"ಸಂದಾಯ ಗ್ರಾಹಿ".–** ಲಿಖಿತದಲ್ಲಿ ಹೆಸರಿಸಿದ ಅಥವಾ ಯಾರ ಆದೇಶದ ಮೇರೆಗೆ ಹಣ ಸಂದಾಯವಾಗಬೇಕೆಂದು ಆ ಲಿಖಿತದಲ್ಲಿ ನಿರ್ದೇಶಿಸಲಾಗಿದೆಯೋ ಆ ವ್ಯಕ್ತಿಯು "ಸಂದಾಯ ಗ್ರಾಹಿ" ಎಂದು ಕರೆಯಲ್ಪಡುತ್ತಾನೆ.

**8.** **"ಧಾರಕ"** .– ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನ "ಧಾರಕ" ಎಂದರೆ ತನ್ನ ಹೆಸರಿನಲ್ಲಿ ಅದರ ಸ್ವಾಧೀನವನ್ನು ಹೊಂದಲು ಮತ್ತು ಅದರ ಮೇಲೆ ಪಕ್ಷಕಾರರಿಂದ ಮೊಬಲಗನ್ನು ಸ್ವೀಕರಿಸಲು ಅಥವಾ ವಸೂಲಿ ಮಾಡಿಕೊಳ್ಳಲು ಹಕ್ಕುಳ್ಳ ಯಾವನೇ ವ್ಯಕ್ತಿ.

ಆ ನೋಟು, ಬಿಲ್ಲು ಅಥವಾ ಚೆಕ್ಕು ಕಳೆದುಹೋಗಿರುವಲ್ಲಿ ಅಥವಾ ನಾಶವಾಗಿರುವಲ್ಲಿ ಅಂಥ ಕಳೆದುಕೊಳ್ಳುವಿಕೆಯ ಅಥವಾ ನಾಶದ ಕಾಲಕ್ಕೆ ಹಾಗೆ ಅದರ ಹಕ್ಕುಳ್ಳ ವ್ಯಕ್ತಿಯೇ ಧಾರಕ.

**9.** **"ಸಮ್ಯಕ್ ಅನುಕ್ರಮ ಧಾರಕ".–** ಸಮ್ಯಕ್ ಅನುಕ್ರಮಧಾರಕ" ಎಂದರೆ ಒಂದು ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನಲ್ಲಿ ಹೇಳಿದ ಮೊಬಲಗು ಸಂದಾಯವಾಗುವುದಕ್ಕೆ ಮುಂಚೆ, ಮತ್ತು ಯಾವ ವ್ಯಕ್ತಿಯಿಂದ, ತನ್ನ ಹಕ್ಕು ಪ್ರಾಪ್ತವಾಗಿದೆಯೋ ಆ ಹಕ್ಕಿನಲ್ಲಿ ಯಾವುದೇ ದೋಷವಿದೆಯೆಂದು ನಂಬಲು ಸಾಕಷ್ಟು ಕಾರಣವಿಲ್ಲದೆ ವಾಹಕನಿಗೆ ಸಂದೇಯವಿರುವ ಸಂದರ್ಭದಲ್ಲಿ ಪ್ರತಿಫಲಕ್ಕಾಗಿ ಅದನ್ನು ಸ್ವಾಧೀನಕ್ಕೆ ಪಡೆದ ಯಾವನೇ ವ್ಯಕ್ತಿ, ಅಥವಾ ಆದೇಶದ ಮೇರೆಗೆ ಸಂದೇಯವಿರುವ ಸಂದರ್ಭದಲ್ಲಿ, ಅದರ ಸಂದಾಯಗ್ರಾಹಿ ಅಥವಾ ಹಿಂಬರಹದಾರ.

**10.** **"ಸಮ್ಯಕ್ ಅನುಕ್ರಮ ಸಂದಾಯ".–** "ಸಮ್ಯಕ್ ಅನುಕ್ರಮ ಸಂದಾಯ" ಎಂದರೆ ಲಿಖಿತದಲ್ಲಿ ಕಾಣಬರುವ ಆಶಯಕ್ಕನುಸಾರವಾಗಿ, ಅದರಲ್ಲಿ ಹೇಳಿದ ಮೊಬಲಗಿನ ಸಂದಾಯವನ್ನು ಸ್ವೀಕರಿಸಲು ತನಗೆ ಹಕ್ಕಿಲ್ಲವೆಂದು ನಂಬಲು ಯುಕ್ತ ಕಾರಣವನ್ನು ಒದಗಿಸದಂಥ ಸನ್ನಿವೇಶಗಳಲ್ಲಿ ಅದರ ಸ್ವಾಧೀನವನ್ನು ಹೊಮದಿರುವ ಯಾವನೇ ವ್ಯಕ್ತಿಗೆ, ಸದ್ಭಾವನೆಯಿಂದ ಮತ್ತು ನಿರ್ಲಕ್ಷ್ಯವಿಲ್ಲದೆ ಮಾಡಿದ ಸಂದಾಯ.

**11.** **"ಅಂತರ್ದೇಶಿಯ ಲಿಖಿತ".–** ಭಾರತದಲ್ಲಿ ಬರೆದ ಅಥವಾ ಮಾಡಿದ ಮತ್ತು ಭಾರತದಲ್ಲಿ ವಾಸಿಸುವ ಯಾವನೇ ವ್ಯಕ್ತಿಗೆ ಸಂದೇಯವಾಗುವಂತೆ ಮಾಡಿದ ಅಥವಾ ಬರೆದ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕನ್ನು ಅಂತರ್ದೇಶಿಯ ಲಿಖಿತವೆಂದು ಭಾವಿಸತಕ್ಕದ್ದು.

**12.** **"ವಿದೇಶಿ ಲಿಖಿತ".–** ಹಾಗೆ ಬರೆದಿರದ, ಮಾಡಿರದ ಅಥವಾ ಸಂದೇಯಗೊಳಿಸಿರದ ಅಂಥ ಯಾವುದೇ ಲಿಖಿತವನ್ನು ವಿದೇಶಿ ಲಿಖಿತವೆಂದು ಭಾವಿಸತಕ್ಕದ್ದು.

**13.** **"ವರ್ಗಾವಣೀಯ ಲಿಖಿತ".–** (1) "ವರ್ಗಾವಣೀಯ ಲಿಖಿತ" ಎಂದರೆ ಆದೇಶಾನುಸಾರವಾಗಲೀ ಅಥವಾ ವಾಹಕನಿಗಾಗಲೀ ಸಂದೇಯವಿರುವ ಪ್ರಾಮಿಸರಿ ನೋಟು, ಅಥವಾ ಚೆಕ್ಕು.

**ವಿವರಣೆ** (i).– ಆದೇಶದ ಮೇರೆಗೆ ಸಂದೇಯವೆಂದು ಅಭಿವ್ಯಕ್ತವಾಗಿರುವ ಅಥವಾ ನಿರ್ದಿಷ್ಟ ವ್ಯಕ್ತಿಗೆ ಸಂದೇಯವೆಂದು ಅಭಿವ್ಯಕ್ತವಾಗಿರುವ ಮತ್ತು ಅದರಲ್ಲಿ ವರ್ಗಾವಣೆಯನ್ನು ನಿಷೇಧಿಸುವ ಅಥವಾ ವರ್ಗಾವಣೆ ಮಾಡಲು ಬಾರದೆಂಬ ಆಶಯಗಳನ್ನು ಸೂಚಿಸುವ ಶಬ್ದಗಳನ್ನು ಹೊಂದಿರದ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಆದೇಶದ ಮೇರೆಗೆ ಸಂದೇಯವಾದುದಾಗಿರುತ್ತದೆ.

**ವಿವರಣೆ** (ii) .– ವಾಹಕನಿಗೆ ಸಂದೇಯವೆಂದು ಅಭಿವ್ಯಕ್ತವಾಗಿರುವ ಅಥವಾ ಅದರ ಮೇಲಿನ ಒಂದೇ ಒಂದು ಅಥವಾ ಕೊನೆಯ ಹಿಂಬರಹವು ಖಾಲಿ ಹಿಂಬರಹವಾಗಿರುವ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ವಾಹಕನಿಗೆ ಸಂದೇಯವಾದುದಾಗಿರುತ್ತದೆ.

**ವಿವರಣೆ** (iii).– ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು, ಮೂಲತಃ ಅಥವಾ ಹಿಂಬರಹದ ಮೂಲಕ, ನಿರ್ದಿಷ್ಟ ವ್ಯಕ್ತಿಯ ಆದೇಶದ ಮೇರೆಗೆ ಸಂದೇಯವೆಂದು ಮತ್ತು ಅವನಿಗೆ ಅಥವಾ ಅವನ ಆದೇಶದ ಮೇರೆಗೆ ಅಲ್ಲ ಎಂದು ಹೇಳಿರುವಲ್ಲಿ ಹಾಗೆ ಹೇಳಿದ್ದಾಗ್ಯೂ ಅವನ ಇಚ್ಚಾನುಸಾರ ಅದು ಅವನಿಗೆ ಅಥವಾ ಅವನ ಆದೇಶದ ಮೇರೆಗೆ ಸಂದೇಯವಿರುತ್ತದೆ.

(2) ಒಂದು ವರ್ಗಾವಣೀಯ ಲಿಖಿತವನ್ನು ಇಬ್ಬರು ಅಥವಾ ಹೆಚ್ಚು ಜನ ಸಂದಾಯ ಗ್ರಾಹಿಗಳಿಗೆ ಸಂಯುಕ್ತವಾಗಿ ಸಂದೇಯವಾಗುವಂತೆ ಮಾಡಬಹುದು, ಅಥವಾ ಅದನ್ನು ಅವರೀರ್ವರಲ್ಲಿ ಒಬ್ಬನಿಗೆ ಅಥವಾ ಅನೇಕ ಸಂದಾಯಗ್ರಾಹಿಗಳಲ್ಲಿ ಒಬ್ಬನಿಗೆ ಅಥವಾ ಕೆಲವರಿಗೆ ಪರ್ಯಾಯವಾಗಿ ಸಂದಾಯವಾಗುವಂತೆ ಮಾಡಬಹುದು.

**14. ವರ್ಗಾವಣೆ.**– ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕನ್ನು ಯಾವನೇ ವ್ಯಕ್ತಿಗೆ ಅವನನ್ನು ಅದರ ಧಾರಕನನ್ನಾಗಿಸುವ ಉದ್ದೇಶದಿಂದ ವರ್ಗಾಯಿಸಿದಾಗ ಆ ಲಿಖಿತವು ವರ್ಗಾವಣೆಯಾಗಿದೆಯೆಂದು ಹೇಳಲಾಗುತ್ತದೆ.

**15. ಹಿಂಬರಹ.**– ಒಂದು ವರ್ಗಾವಣೆಯ ಲಿಖಿತವನ್ನು ಬರೆದು ಕೊಡುವವನು ಅಥವಾ ಧಾರಕನು ಆ ರೀತಿ ಬರೆದು ಕೊಡುವವನಂತಲ್ಲದೆ, ವರ್ಗಾವಣೆಯ ಉದ್ದೇಶಕ್ಕಾಗಿ ಅದರ ಹಿಂಬದಿಯಲ್ಲಿ ಅಥವಾ ಮೇಲ್ಮುಖದಲ್ಲಿ ಅಥವಾ ಅದಕ್ಕೆ ಅನುಬಂಧಿಸಿದ ಒಂದು ಚೀಟಿಯ ಮೇಲೆ ಸಹಿ ಹಾಕಿದಾಗ, ಅಥವಾ ಅದೇ ಉದ್ದೇಶಕ್ಕಾಗಿ, ವರ್ಗಾವಣೆಯ ಲಿಖಿತವಾಗಿ ಪೂರ್ಣಗೊಳಿಸಲು ಉದ್ದೇಶಿಸಿರುವ ಒಂದು ಸ್ಟಾಂಪುಳ್ಳ ಕಾಗದಕ್ಕೆ ಹಾಗೆ ಸಹಿ ಹಾಕಿದಾಗ, ಅವನು ಅದನ್ನು ಹಿಂಬರಹ ಮಾಡಿದನೆಂದು ಹೇಳಲಾಗುತ್ತದೆ ಮತ್ತು ಅವನನ್ನು "ಹಿಂಬರಹಗಾರ"ನೆಂದು ಕರೆಯಲಾಗುತ್ತದೆ.

**16. “ಖಾಲಿ ಮತ್ತು ಪೂರ್ಣ” ಹಿಂಬರಹ.–** (1) ಹಿಂಬರಹಗಾರನು ತನ್ನ ಹೆಸರನ್ನು ಮಾತ್ರ ಸಹಿ ಮಾಡಿದರೆ ಅದನ್ನು “ಖಾಲಿ ಹಿಂಬರಹ” ಎಂದು ಹೇಳಲಾಗುತ್ತದೆ, ಮತ್ತು ಲಿಖಿತದಲ್ಲಿ ಹೇಳಿದ ಮೊಬಲಗನ್ನು ನಿರ್ದಿಷ್ಟ ವ್ಯಕ್ತಿಗೆ ಅಥವಾ ಅವನ ಆದೇಶದ ಮೇರೆಗೆ ಸಂದಾಯ ಮಾಡಬೇಕೆಂಬ ನಿರ್ದೇಶವನ್ನು ಸೇರಿಸಿದರೆ, ಅದನ್ನು “ಪೂರ್ಣ ಹಿಂಬರಹ” ಎಂದು ಹೇಳಲಾಗುತ್ತದೆ ಮತ್ತು ಹಾಗೆ ನಿರ್ದಿಷ್ಟಪಡಿಸಿದ ವ್ಯಕ್ತಿಯನ್ನು ಲಿಖಿತದ “ಹಿಂಬರಹದಾರ” ಎಂದು ಹೇಳಲಾಗುತ್ತದೆ.

“ಹಿಂಬರಹದಾರ”.– (2) ಸಂದಾಯಗ್ರಾಹಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಅವಶ್ಯ ಮಾರ್ಪಾಡುಗಳೊಂದಿಗೆ ಹಿಂಬರಹದಾರನಿಗೂ ಅನ್ವಯಿಸತಕ್ಕದ್ದು.

**17. ಸಂದಗ್ಧಾರ್ಥ ಲಿಖಿತಗಳು.–** ಒಂದು ಲಿಖಿತವನ್ನು ಪ್ರಾಮಿಸರಿ ನೋಟು ಎಂದಾಗಲಿ ಅಥವಾ ವಿನಿಮಯ ಪತ್ರವೆಂದಾಗಲಿ ಅರ್ಥ ಮಾಡಬಹುದಾಗಿದ್ದಲ್ಲಿ, ಧಾರಕನು, ತನ್ನ ಆಯ್ಕೆಯ ಮೇರೆಗೆ, ಅದನ್ನು ಎರಡರಲ್ಲಿ ಯಾವುದಾದರೂ ಒಂದಕ್ಕೆ ಪರಿಗಣಿಸಬಹುದು ಮತ್ತು ಆ ಬಳಿಕ ಆ ಲಿಖಿತವನ್ನು ಅದಕ್ಕನುಗುಣವಾಗಿ ಪರಿಗಣಿಸತಕ್ಕದ್ದು.

**18. ಮೊಬಲಗನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ವಿಭಿನ್ನವಾಗಿ ನಮೂದಿಸಿರುವುದು.–** ಕೊಡಲೊಪ್ಪಿದ ಅಥವಾ ಸಂದಾಯ ಮಾಡಲು ಆದೇಶಿಸಿದ ಮೊಬಲಗನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ವಿಭಿನ್ನವಾಗಿ ನಮೂದಿಸಿದ್ದರೆ ಅಕ್ಷರಗಳಲ್ಲಿ ನಮೂದಿಸಿರುವ ಮೊಬಲಗೇ ಒಪ್ಪಿಕೊಂಡ ಅಥವಾ ಸಂದಾಯ ಮಾಡಬೇಕೆಂದು ಆದೇಶಿಸಿದ ಮೊಬಲಗಾಗಿರತಕ್ಕದ್ದು.

**19. ತಗಾದೆಯ ಮೇಲೆ ಸಂದೇಯವಿರುವ ಲಿಖಿತಗಳು.–** ಸಂದಾಯದ ಕಾಲವನ್ನು ನಿರ್ದಿಷ್ಟಪಡಿಸದಿರುವ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರ ಮತ್ತು ಚೆಕ್ಕು ತಗಾದೆಯ ಮೇಲೆ ಸಂದೇಯವಿರುತ್ತವೆ.

**20. ಸ್ಟಾಂಪುಳ್ಳ ಅಪೂರ್ಣ ಲಿಖಿತಗಳು.–** ಭಾರತದಲ್ಲಿ ಆ ಕಾಲಕ್ಕೆ ಜಾರಿಯಲ್ಲಿರುವ ವರ್ಗಾವಣೆಯ ಲಿಖಿತಗಳಿಗೆ ಸಂಬಂಧಿಸಿದ ಕಾನೂನಿಗನುಸಾರವಾಗಿ ಒಂದು ಸ್ಟಾಂಪುಳ್ಳ ಪತ್ರವನ್ನು ಪೂರ್ತಿ ಖಾಲಿಯಾಗಿ ಅಥವಾ ಅದರ ಮೇಲೆ ವರ್ಗಾವಣೆಯ ಲಿಖಿತವನ್ನು ಅಪೂರ್ಣವಾಗಿ ಬರೆದು, ಸಹಿ ಹಾಕಿ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ಒಪ್ಪಿಸಿದಲ್ಲಿ, ಅವನು, ಆ ಮೂಲಕ ಅದರ ಧಾರಕನಿಗೆ, ಅದರ ಮೇಲೆ ವರ್ಗಾವಣೆಯ ಲಿಖಿತವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಸ್ಟಾಂಪು ವ್ಯಾಪ್ತಿಗೆ ಮೀರದ ಯಾವುದೇ ಮೊಬಲಗಿಗಾಗಿ, ಸಂದರ್ಭಾನುಸಾರ, ಬರೆಯಲು ಅಥವಾ ಪೂರ್ಣಗೊಳಿಸಲು ಅವನಿಗೆ ಮೊದಲ ನೋಟದ ಪ್ರಾಧಿಕಾರವನ್ನು ಕೊಟ್ಟಿರುತ್ತಾನೆ. ಹಾಗೆ ಸಹಿ ಹಾಕುವ ವ್ಯಕ್ತಿಯು, ಅಂಥ

ಲಿಖಿತದ ಮೇಲೆ, ಅದಕ್ಕೆ ತಾನು ಸಹಿ ಹಾಕಿದ ಅಧಿಕಾರದಲ್ಲಿ ಆ ಮೊಬಲಗಿಗಾಗಿ, ಯಾವನೇ ಸಮ್ಯಕ್ ಅನುಕ್ರಮಧಾರಕನಿಗೆ ಹೊಣೆಗಾರನಾಗತಕ್ಕದ್ದು:

ಪರಂತು, ಸಮ್ಯಕ್ ಅನುಕ್ರಮ ಧಾರಕನಲ್ಲದ ಬೇರೆ ವ್ಯಕ್ತಿಯು ಆ ಲಿಖಿತವನ್ನು ಒಪ್ಪಿಸಿದವನಿಂದ ಆ ಬಗ್ಗೆ ಸಂದಾಯ ಮಾಡಲು ಅವನು ಉದ್ದೇಶಿಸಿದ್ದ ಮೊಬಲಗಿಗಿಂತ ಹೆಚ್ಚಾಗಿ ಏನನ್ನೂ ವಸೂಲು ಮಾಡಿಕೊಳ್ಳತಕ್ಕದ್ದಲ್ಲ.

**21. "ನೋಡಿದ ಕೂಡಲೇ", "ಹಾಜರುಪಡಿಸಿದ ತರುವಾಯ", "ನೋಡಿದ ಅನಂತರ".–** ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರದಲ್ಲಿ, "ನೋಡಿದ ಕೂಡಲೇ" ಮತ್ತು "ಹಾಜರುಪಡಿಸಿದ ತರುವಾಯ" ಎಂಬ ಪದಗಳಿಗೆ ತಗಾದೆಯ ಮೇಲೆ ಎಂದು ಅರ್ಥ. "ನೋಡಿದ ಅನಂತರ" ಎಂಬ ಪದಕ್ಕೆ ಪ್ರಾಮಿಸರಿ ನೋಟಿನಲ್ಲಿ ನೋಡುವುದಕ್ಕಾಗಿ ಹಾಜರುಪಡಿಸಿದ ತರುವಾಯ ಮತ್ತು ವಿನಿಮಯ ಪತ್ರದಲ್ಲಿ ಒಪ್ಪಿಗೆಯ ತರುವಾಯ ಅಥವಾ ಒಪ್ಪದಿರುವಿಕೆಗಾಗಿ ಟಿಪ್ಪಣಿಯಾದ ಅಥವಾ ಒಪ್ಪದಿರುವಿಕೆಗಾಗಿ ಪ್ರಮಾಣನಗೊಳಿಸಿದ ತರುವಾಯ ಎಂದರ್ಥ.

**22. "ಅವಧಿ ಪೂರ್ಣತೆ".–** ಪ್ರಾಮಿಸರಿ ನೋಟಿನ ಅಥವಾ ವಿನಿಮಯ ಪತ್ರದ ಅವಧಿ ಪೂರ್ಣತೆಯು ಅದು ಸಂದೇಯವಿರುವ ದಿನಾಂಕವೇ ಆಗಿರುತ್ತದೆ.

**ರಿಯಾಯಿತಿ ದಿನಗಳು.–** ತಗಾದೆಯ ಮೇಲೆ, ನೋಡಿದ ಕೂಡಲೇ ಅಥವಾ ಹಾಜರುಪಡಿಸಿದಾಗ ಸಂದೇಯವೆಂದು ಹೇಳಿರದ ಪ್ರತಿಯೊಂದು ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವೂ ಅದು ಸಂದೇಯವೆಂದು ಹೇಳಿರುವ ದಿನಾಂಕದ ತರುವಾಯದ ಮೂರನೆಯ ದಿನ ಅವಧಿಪೂರ್ಣವಾಗುವುದು.

23. ದಿನಾಂಕದ ಅಥವಾ ನೋಡಿದ ಎಷ್ಟೋ ತಿಂಗಳುಗಳ ಅನಂತರ ಸಂದೇಯವಿರುವ ವಿನಿಮಯ ಪತ್ರದ ಅಥವಾ ನೋಟಿನ ಅವಧಿಪೂರ್ಣತೆಯ ಲೆಕ್ಕಾಚಾರ.– ದಿನಾಂಕದ ಅಥವಾ ನೋಡಿದ ಅನಂತರ ಅಥವಾ ವಿಶಿಷ್ಟ ಪ್ರಸಂಗದ ತರುವಾಯ ನಮೂದಿತ ತಿಂಗಳುಗಳ ಅನಂತರ ಸಂದೇಯವೆಂದು ಮಾಡಲ್ಪಟ್ಟ ಪ್ರಾಮಿಸರಿ ನೋಟಿನ ಅಥವಾ ವಿನಿಮಯ ಪತ್ರದ ಅವಧಿಪೂರ್ಣತೆಯನ್ನು ಲೆಕ್ಕ ಹಾಕುವಲ್ಲಿ, ಲಿಖಿತವು ಹೊಂದಿರುವ ಅಥವಾ ಅದನ್ನು ಒಪ್ಪಿಗೆಗಾಗಿ ಅಥವಾ ನೋಡುವುದಕ್ಕಾಗಿ ಹಾಜರುಪಡಿಸಿದ ಅಥವಾ ಒಪ್ಪದಿರುವಿಕೆಗಾಗಿ ಟಿಪ್ಪಣಿಯಾದ ಅಥವಾ ಒಪ್ಪದಿರುವಿಕೆಗಾಗಿ ಪ್ರಮಾಣನಗೊಳಿಸಿದ ಅಥವಾ ಆ ಪ್ರಸಂಗವು ಸಂಭವಿಸಿದ ದಿನಾಂಕಕ್ಕೆ ಅಥವಾ ಲಿಖಿತವು ನೋಡಿದ ಅನಂತರ ಕೆಲವು ತಿಂಗಳುಗಳ ಅನಂತರ ಸಂದೇಯವೆಂದು ಮಾಡಿರುವ ವಿನಿಮಯಪತ್ರವಾಗಿದ್ದು ಮತ್ತು ಅದನ್ನು ಪತ್ತಿಗಾಗಿ ಒಪ್ಪಿರುವಲ್ಲಿ ಹಾಗೆ ಒಪ್ಪಿದ ದಿನಕ್ಕೆ ಸಂವಾದಿಯಾದ

ಆ ತಿಂಗಳ ದಿನದಂದು ನಮೂದಿತ ಅವಧಿಯು ಕೊನೆಗೊಳ್ಳುವುದೆಂದು ಗ್ರಹಿಸತಕ್ಕದ್ದು. ಅವಧಿಯು ಕೊನೆಗೊಳ್ಳುವ ದಿನಕ್ಕೆ ಸಂವಾದಿಯಾದ ದಿನವು ಆ ತಿಂಗಳಿನಲ್ಲಿರದಿದ್ದರೆ ಅವಧಿಯು ಅಂಥ ತಿಂಗಳ ಕೊನೆಯ ದಿನದಂದು ಕೊನೆಗೊಳ್ಳುವುದೆಂದು ಗ್ರಹಿಸತಕ್ಕದ್ದು.

**ದೃಷ್ಟಾಂತಗಳು**

(ಎ) 1878ರ ಜನವರಿ 28ನೇ ದಿನಾಂಕದ ಒಂದು ವರ್ಗಾವಣೀಯ ಲಿಖಿತವನ್ನು ಆ ದಿನಾಂಕದ ಒಂದು ತಿಂಗಳ ತರುವಾಯ ಸಂದೇಯವೆಂದು ಮಾಡಲಾಗಿದೆ. ಆ ಲಿಖಿತವು 1878ರ ಫೆಬ್ರವರಿ 28ರ ತರುವಾಯ ಮೂರನೆಯ ದಿನ ಅವಧಿಪೂರ್ಣವಾಗುವುದು.

(ಬಿ) 1878ರ ಆಗಸ್ಟ್ 30ನೇ ದಿನಾಂಕದ ವರ್ಗಾವಣೀಯ ಲಿಖಿತವನ್ನು ಆ ದಿನಾಂಕದ ಮೂರು ತಿಂಗಳ ತರುವಾಯ ಸಂದೇಯವೆಂದು ಮಾಡಲಾಗಿದೆ. ಆ ಲಿಖಿತವು 1878ರ ಡಿಸೆಂಬರ್ 3 ರಂದು ಅವಧಿಪೂರ್ಣವಾಗುವುದು.

(ಸಿ) 1878ರ ಆಗಸ್ಟ್ 31ನೇ ದಿನಾಂಕದ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವನ್ನು ಆ ದಿನಾಂಕದ ಮೂರು ತಿಂಗಳುಗಳ ತರುವಾಯ ಸಂದೇಯವೆಂದು ಮಾಡಲಾಗಿದೆ. ಆ ಲಿಖಿತವು 1878ರ ಡಿಸೆಂಬರ್ 3 ರಂದು ಅವಧಿ ಪೂರ್ಣವಾಗುವುದು.

**24. ದಿನಾಂಕದ ಅಥವಾ ನೋಡಿದ ಎಷ್ಟೋ ದಿನಗಳ ತರುವಾಯ ಸಂದೇಯವಿರುವ ವಿನಿಮಯ ಪತ್ರದ ಅಥವಾ ನೋಟಿನ ಅವಧಿಪೂರ್ಣತೆಯ ಲೆಕ್ಕಾಚಾರ.–** ದಿನಾಂಕದ ತರುವಾಯ ಅಥವಾ ನೋಡಿದ ತರುವಾಯ ಅಥವಾ ಒಂದು ನಿಶ್ಚಿತ ಪ್ರಸಂಗದ ತರುವಾಯ ನಿಶ್ಚಿತ ಕೆಲವು ದಿನಗಳ ಅನಂತರ ಸಂದೇಯವೆಂದು ಮಾಡಲ್ಪಟ್ಟಿರುವ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರದ ಅವಧಿ ಪೂರ್ಣವಾಗುವ ದಿನಾಂಕವನ್ನು ಲೆಕ್ಕ ಹಾಕುವಾಗ ಆ ದಿನಾಂಕದ ದಿನವನ್ನು, ಅಥವಾ ಒಪ್ಪಿಗೆಗಾಗಿ ಅಥವಾ ನೋಡುವುದಕ್ಕಾಗಿ ಹಾಜರುಪಡಿಸಿದ ಅಥವಾ ಒಪ್ಪದಿರುವಿಕೆಗಾಗಿ ಪ್ರಮಾಣನ ಮಾಡಿದ ಅಥವಾ ಆ ಪ್ರಸಂಗವು ಸಂಭವಿಸಿದ ದಿನವನ್ನು ಹೊರತುಪಡಿಸತಕ್ಕದ್ದು.

**25. ಅವಧಿಪೂರ್ಣತೆಯ ದಿನವು ರಜಾದಿನವಾಗಿದ್ದಾಗ.–** ಪ್ರಾಮಿಸರಿ ನೋಟು ಅಥವಾ ವಿನಿಮು ಪತ್ರದ ಅವಧಿಪೂರ್ಣಗೊಳ್ಳುವ ದಿನವು ಸಾರ್ವತ್ರಿಕ ರಜಾ ದಿನವಾಗಿರುವಾಗ, ಆ ಲಿಖಿತವು ವ್ಯವಹಾರದ ನಿಕಟತಮ ಹಿಂದಿನ ದಿನವೇ ಸಂದೇಯವಿರುವುದೆಂದು ಭಾವಿಸಲ್ಪಡತಕ್ಕದ್ದು.

**ವಿವರಣೆ.–** "ಸಾರ್ವತ್ರಿಕ ರಜಾ ದಿನ" ಎಂಬುದು ಭಾನುವಾರಗಳು ಮತ್ತು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸಾರ್ವತ್ರಿಕ ರಜಾ ದಿನವೆಂದು ಘೋಷಿಸಿದ ಇತರ ಯಾವುದೇ ರಜಾ ದಿನವನ್ನು ಒಳಗೊಳ್ಳುತ್ತದೆ.

## ಅಧ್ಯಾಯ –III

## ನೋಟುಗಳು, ವಿನಿಮಯ ಪತ್ರಗಳು ಮತ್ತು ಚೆಕ್ಕುಗಳಿಗೆ ಪಕ್ಷಕಾರರು

**26. ಪ್ರಾಮಿಸರಿ ನೋಟು, ಇತ್ಯಾದಿಗಳನ್ನು ರಚಿಸುವ ಸಾಮರ್ಥ್ಯ, ಇತ್ಯಾದಿಗಳು.–** ತಾನು ಒಳಪಡುವ ಕಾನೂನಿನ ಮೇರೆಗೆ ಕರಾರು ಮಾಡಿಕೊಳ್ಳಲು ಸಮರ್ಥನಿರುವ ಪ್ರತಿಯೊಬ್ಬ ವ್ಯಕ್ತಿಯೂ, ಒಂದು ಪ್ರಾಮಿಸರಿ ನೋಟನ್ನು, ವಿನಿಮಯ ಪತ್ರವನ್ನು ಅಥವಾ ಚೆಕ್ಕನ್ನು ಬರೆದುಕೊಡುವ, ಧನಾದೇಶಿಸುವ, ಒಪ್ಪುವ, ಹಿಂಬರೆಯುವ ಮತ್ತು ವರ್ಗಾವಣೆ ಮಾಡುವ ಮೂಲಕ ತನ್ನನ್ನು ಬದ್ಧನನ್ನಾಗಿ ಮಾಡಿಕೊಳ್ಳಬಹುದು ಮತ್ತು ತಾನು ಬದ್ಧನಾಗಬಹುದು.

**ಅಪ್ರಾಪ್ತ ವಯಸ್ಕ.–** ಅಪ್ರಾಪ್ತ ವಯಸ್ಕನು ತನ್ನ ಹೊರತು ಎಲ್ಲ ಪಕ್ಷಕಾರರೂ ಬದ್ಧರಾಗುವಂತೆ ಅಂಥ ಲಿಖಿತಗಳನ್ನು ಧನಾದೇಶಿಸಬಹುದು. ಹಿಂಬರೆಯಬಹುದು, ಕೊಡಬಹುದು ಮತ್ತು ವರ್ಗಾಯಿಸಬಹುದು.

ಇದರಲ್ಲಿರುವುದು ಯಾವುದೂ, ಒಂದು ನಿಗಮವು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಹಾಗೆ ಶಕ್ತವಾಗಿರುವ ಸಂದರ್ಭಗಳ ಹೊರತು, ಇಂಥ ಲಿಖಿತಗಳನ್ನು ಮಾಡಲು, ಹಿಂಬರೆಯಲು ಅಥವಾ ಒಪ್ಪಲು ಅದನ್ನು ಶಕ್ತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**27. ಅಭಿಕರಣ.–** 26ನೇ ಪ್ರಕರಣದಲ್ಲಿ ಹೇಳಿದಂತೆ ತನ್ನನ್ನು ಬದ್ಧನನ್ನಾಗಿ ಮಾಡಿಕೊಳ್ಳಲು ಅಥವಾ ತಾನು ಬದ್ಧನಾಗಲು ಸಮರ್ಥನಾದ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಪರವಾಗಿ ಕಾರ್ಯ ನಿರ್ವಹಿಸುವ ಯಥಾವಿಧಿ ಪ್ರಾಧಿಕೃತನಾದ ಅಭಿಕರ್ತನಿಂದ ಹಾಗೆ ಬದ್ಧನನ್ನಾಗಿಸಿಕೊಳ್ಳಬಹುದು ಅಥವಾ ಬದ್ಧನಾಗಬಹುದು.

ವ್ಯವಹಾರವನ್ನು ನಡೆಸಲು ಮತ್ತು ಋಣಗಳನ್ನು ಸ್ವೀಕರಿಸಲು ಮತ್ತು ತೀರಿಸಲು ಇರುವ ಸಾಮಾನ್ಯ ಅಧಿಕಾರವು ತನ್ನ ಮೂಲಕರ್ತನನ್ನು ಬದ್ಧನಾಗಿಸುವಂತೆ ವಿನಿಮಯ ಪತ್ರಗಳನ್ನು ಒಪ್ಪುವ ಅಥವಾ ಹಿಂಬರೆಯುವ ಶಕ್ತಿಯನ್ನು ಅಭಿಕರ್ತನಿಗೆ ಕೊಡುವುದಿಲ್ಲ.

ವಿನಿಮಯ ಪತ್ರಗಳನ್ನು ಬರೆಯುವ ಪ್ರಾಧಿಕಾರವು ತಾನೇ ಹಿಂಬರೆಯುವ ಅಧಿಕಾರವನ್ನೂ ನೀಡುವುದೆಂಬ ಅರ್ಥವನ್ನು ಕೊಡುವುದಿಲ್ಲ.

**28. ಸಹಿ ಹಾಕುವ ಅಭಿಕರ್ತನ ಹೊಣೆ.–** ತಾನು ಅಭಿಕರ್ತನಾಗಿ ಸಹಿ ಹಾಕುತ್ತಿರುವನೆಂದು ಅಥವಾ ಆ ಮೂಲಕ ವೈಯಕ್ತಿಕ ಜವಾಬ್ದಾರಿಯನ್ನು ಹೊರಲಿಚ್ಛಿಸುವುದಿಲ್ಲವೆಂದು ಅದರ ಮೇಲೆ ಸೂಚಿಸದೇ ಪ್ರಾಮಿಸರಿ ನೋಟಿಗೆ, ವಿನಿಮಯ ಪತ್ರಕ್ಕೆ ಅಥವಾ ಚೆಕ್ಕಿಗೆ ತನ್ನ ಹೆಸರನ್ನು ಸಹಿ ಹಾಕುವ ಅಭಿಕರ್ತನು, ಮೂಲಕರ್ತನೇ ಅದಕ್ಕೆ ಹೊಣೆಗಾರನಾಗುವನೆಂದು ನಂಬಿಸಿ ಅದಕ್ಕೆ ಸಹಿ ಹಾಕಲು ಅವನನ್ನು ಪ್ರೇರೇಪಿಸಿದವರಿಗೆ ಹೊರತಾಗಿ, ಆ ಲಿಖಿತದ ಮೇಲೆ ವೈಯಕ್ತಿಕವಾಗಿ ಹೊಣೆಗಾರನಾಗಿರುತ್ತಾನೆ.

**29. ಸಹಿ ಮಾಡುವ ಕಾನೂನು ಸಮ್ಮತ ಪ್ರತಿನಿಧಿಯ ಹೊಣೆ.–** ಪ್ರಾಮಿಸರಿ ನೋಟಿಗೆ, ವಿನಿಮಯ ಪತ್ರಕ್ಕೆ ಅಥವಾ ಚೆಕ್ಕಿಗೆ ತನ್ನ ಹೆಸರನ್ನು ಸಹಿ ಹಾಕುವ ಮೃತ ವ್ಯಕ್ತಿಯ ಕಾನೂನುಸಮ್ಮತ ಪ್ರತಿನಿಧಿಯು, ಹಾಗೆಂದು ತಾನು ಸ್ವೀಕರಿಸಿದ ಆಸ್ತಿಗಳ ಮಟ್ಟಿಗೆ ತನ್ನ ಹೊಣೆಯನ್ನು ವ್ಯಕ್ತವಾಗಿ ಪರಿಮಿತಗೊಳಿಸಿದ್ದ ಹೊರತು, ಆ ಬಗ್ಗೆ ವೈಯಕ್ತಿಕವಾಗಿ ಹೊಣೆಗಾರನಾಗಿರುತ್ತಾನೆ.

**30. ಧನಾದೇಶಕನ ಹೊಣೆ.–** ವಿನಿಮಯ ಪತ್ರದ ಅಥವಾ ಚೆಕ್ಕುಗಳ ಧನಾದೇಶಕನು, ಅದರ ಧನಾದೇಶಿತನು ಅಥವಾ ಒಪ್ಪಿಗೆದಾರನು ಅದನ್ನು ಅನಾದರಿಸಿದರೆ ಅದರ ಧಾರಕನಿಗೆ ನಷ್ಟ ಪರಿಹಾರವನ್ನು ನೀಡಲು ಬದ್ಧನಾಗಿರುತ್ತಾನೆ. ಆದರೆ ಅನಾದರಿಸಿದ ಬಗ್ಗೆ ಈ ಮುಂದೆ ಉಪಬಂಧಿಸಿದಂತೆ ತಕ್ಕ ನೋಟೀಸನ್ನು ಧನಾದೇಶಕನಿಗೆ ಕೊಟ್ಟಿರಬೇಕು ಅಥವಾ ಅವನು ಅದನ್ನು ಸ್ವೀಕರಿಸಿರಬೇಕು.

**31. ಚೆಕ್ಕಿನ ಧನಾದೇಶಿತನ ಹೊಣೆ.–** ಚೆಕ್ಕಿನ ಧನಾದೇಶಿತನು, ಅಂಥ ಚೆಕ್ಕಿನ ಸಂದಾಯಕ್ಕೆ ಸಮುಚಿತವಾಗಿ ವಿನಿಯೋಗಿಸಬಹುದಾದಂಥ ಧನಾದೇಶಕನ ಸಾಕಷ್ಟು ನಿಧಿಯು ತನ್ನ ವಶದಲ್ಲಿದ್ದರೆ, ಹಾಗೆ ಮಾಡಲು ಕ್ರಮಬದ್ಧವಾಗಿ ಅಗತ್ಯಪಡಿಸಿದಾಗ ಚೆಕ್ಕನ್ನು ಸಂದಾಯ ಮಾಡಲೇಬೇಕು, ಮತ್ತು ಹಾಗೆ ಸಂದಾಯ ಮಾಡಲು ತಪ್ಪಿದರೆ, ಅಂಥ ತಪ್ಪಿನಿಂದ ಧನಾದೇಶಕನಿಗೆ ಆದ ಯಾವುದೇ ನಷ್ಟ ಅಥವಾ ಹಾನಿಗಾಗಿ ಪರಿಹಾರ ಕೊಡಲೇಬೇಕು.

**32. ನೋಟನ್ನು ಬರೆದುಕೊಡುವವನ ಮತ್ತು ಬಿಲ್ಲಿನ ಒಪ್ಪಿಗೆದಾರನ ಹೊಣೆ.–** ತದ್ವಿರುದ್ಧವಾದ ಯಾವುದೇ ಕರಾರು ಇಲ್ಲದಿರುವಲ್ಲಿ ಪ್ರಾಮಿಸರಿ ನೋಟನ್ನು ಬರೆದುಕೊಡುವವನು ಮತ್ತು ಅವಧಿ ಪೂರ್ಣವಾಗುವ ಮುಂಚೆ ವಿನಿಮಯ ಪತ್ರವನ್ನು ಒಪ್ಪುವವನು, ಅದರ ಮೊಬಲಗನ್ನು ಅನುಕ್ರಮವಾಗಿ ನೋಟಿನಲ್ಲಿ ಅಥವಾ ಒಪ್ಪಿಗೆಯಲ್ಲಿ ಕಂಡು ಬರುವ ಆಶಯಕ್ಕನುಸಾರವಾಗಿ ಅದರ ಅವಧಿ ಪೂರ್ಣವಾದೊಡನೆ ಸಂದಾಯ ಮಾಡಲು ಬದ್ಧನಾಗಿರುತ್ತಾನೆ ಮತ್ತು ಅವಧಿ ಪೂರ್ಣವಾದೊಡನೆ

ಅಥವಾ ಆ ತರುವಾಯ ವಿನಿಮಯ ಪತ್ರವನ್ನು ಒಪ್ಪುವವನು ಅದರ ಧಾರಕನಿಗೆ ತಗಾದೆ ಮಾಡಿದ ಕೂಡಲೇ ಅದರ ಮೊಬಲಗನ್ನು ಸಂದಾಯ ಮಾಡಲು ಬದ್ಧನಾಗಿರುತ್ತಾನೆ.

ಮೇಲೆ ಹೇಳಿದಂತೆ ಸಂದಾಯ ಮಾಡಲು ತಪ್ಪಿದಲ್ಲಿ, ಅಂಥ ತಪ್ಪಿನಿಂದಾಗಿ ಆ ನೋಟಿನ ಅಥವಾ ವಿನಿಮಯ ಪತ್ರದ ಯಾವನೇ ಪಕ್ಷಕಾರನಿಗೆ ಉಂಟಾದ ಯಾವುದೇ ನಷ್ಟ ಅಥವಾ ಹಾನಿಗಾಗಿ ಅವನಿಗೆ ಪರಿಹಾರ ಕೊಡಲು ಅಂಥ ಬರೆದು ಕೊಡುವವನು ಅಥವಾ ಅದರ ಒಪ್ಪಿಗೆದಾರನು ಬದ್ಧನಾಗಿರುತ್ತಾನೆ.

**33. ಅವಶ್ಯ ಅಥವಾ ಪತ್ತಿಗಾಗಿ ಅಲ್ಲದ ಸಂದರ್ಭಗಳಲ್ಲಿ ಧನಾದೇಶಿತನು ಮಾತ್ರ ಒಪ್ಪಿಗೆದಾರನಾಗಬಲ್ಲ.–** ವಿನಿಮಯ ಪತ್ರದ ಧನಾದೇಶಿತನನ್ನು ಅಥವಾ ಎಲ್ಲ ಧನಾದೇಶಿತರನ್ನು ಅಥವಾ ಅವರಲ್ಲಿ ಕೆಲವರನ್ನು, ಅಥವಾ ಅವಶ್ಯ ಸಂದರ್ಭದ ಧನಾದೇಶಿತನೆಂದು ಅದರಲ್ಲಿ ಹೆಸರಿಸಲ್ಪಟ್ಟ ವ್ಯಕ್ತಿಯನ್ನು ಅಥವಾ ಪತ್ನಿಗಾಗಿ ಒಪ್ಪಿಗೆದಾರನನ್ನು ಉಳಿದು ಬೇರೆ ಯಾವ ವ್ಯಕ್ತಿಯೂ, ಒಂದು ಒಪ್ಪಿಗೆಯಿಂದ ತನ್ನನ್ನು ಬದ್ಧನನ್ನಾಗಿ ಮಾಡಿಕೊಳ್ಳಲು ಆಗುವುದಿಲ್ಲ.

**34. ಪಾಲುಗಾರರಲ್ಲದ ಕೆಲವು ಧನಾದೇಶಿತರಿಂದ ಒಪ್ಪಿಗೆ.–** ವಿನಿಮಯ ಪತ್ರಕ್ಕೆ ಪಾಲುಗಾರರಲ್ಲದ ಕೆಲವು ಧನಾದೇಶಿತರಿರುವಾಗ, ಅವರಲ್ಲಿ ಪ್ರತಿಯೊಬ್ಬನೂ ತನ್ನ ಮಟ್ಟಿಗೆ ಅದನ್ನು ಒಪ್ಪಬಹುದು; ಆದರೆ ಅವರಲ್ಲಿ ಯಾವೊಬ್ಬನೂ ಮತ್ತೊಬ್ಬನ ಪರವಾಗಿ ಅವನಿಂದ ಅಧಿಕಾರವಿಲ್ಲದೆ ಅದನ್ನು ಒಪ್ಪಲಾಗದು.

**35. ಹಿಂಬರಹಗಾರನ ಹೊಣೆ.–** ತದ್ವಿರುದ್ಧವಾದ ಕರಾರು ಇರದಿದ್ದರೆ, ವರ್ಗಾವಣೀಯ ಲಿಖಿತವನ್ನು ಅದರ ಅವಧಿ ಪೂರ್ಣವಾಗುವುದಕ್ಕೆ ಪೂರ್ವದಲ್ಲಿ ಅದರಲ್ಲಿ ತನ್ನ ಹೊಣೆಗಾರಿಕೆಯನ್ನು ವ್ಯಕ್ತವಾಗಿ ಹೊರತುಪಡಿಸಿದೆ ಅಥವಾ ಅದನ್ನು ಷರತ್ತಿಗೊಳಪಡಿಸದೆ ಅದರ ಮೇಲೆ ಹಿಂಬರಹವನ್ನು ಯಾರಾದರೂ ಮಾಡಿದರೆ ಮತ್ತು ಅದನ್ನು ಒಪ್ಪಿಸಿದರೆ, ಅವನು ಅದರಿಂದಾಗಿ ಧನಾದೇಶಿತ, ಒಪ್ಪಿಗೆದಾರ ಅಥವಾ ಬರೆದು ಕೊಡುವವನಿಂದ ಅನಾದರವಾದ ಸಂದರ್ಭದಲ್ಲಿ, ತರುವಾಯದ ಪ್ರತಿಯೊಬ್ಬ ದಾರಕನಿಗೆ ಅಂಥ ಅನಾದರದಿಂದ ಉಂಟಾದ ನಷ್ಟ ಅಥವಾ ಹಾನಿಗಾಗಿ ನಷ್ಟಪರಿಹಾರ ಕೊಡಲು ಅವನು ಬದ್ಧನಾಗುತ್ತಾನೆ, ಪರಂತು, ಅಂಥ ಹಿಂಬರಹಗಾರನಿಗೆ ಅನಾದರವಾದ ಬಗ್ಗೆ ಈ ಮುಂದೆ ಉಪಬಂಧಿಸಲಾಗಿರುವಂತೆ ತಕ್ಕ ಸೂಚನೆಯನ್ನು ಕೊಟ್ಟಿರಬೇಕು ಅಥವಾ ಅವನು ಪಡೆದಿರಬೇಕು.

********

## ಅಧ್ಯಾಯ –IV
## ವರ್ಗಾವಣೆಯ ವಿಷಯದಲ್ಲಿ

**46. ವಶಾವಣೆ.–** ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನ ಬರೆದುಕೊಡುವಿಕೆಯು, ಒಪ್ಪಿಗೆಯು ಅಥವಾ ಹಿಂಬರಹವು ವಾಸ್ತವಿಕ ಅಥವಾ ಅನ್ವಯಿಕ ವಶಾವಣೆಯಿಂದ ಪೂರ್ಣವಾಗುತ್ತದೆ.

ನಿಕಟ ಸಂಬಂಧದಲ್ಲಿರುವ ಪಕ್ಷಕಾರರ ನಡುವೆ ವಶಾವಣೆಯ ಪರಿಣಾಮಕಾರಿಯಾಗಬೇಕಾದರೆ, ಅದು ಲಿಖಿತವನ್ನು ಬರೆದುಕೊಡುವ, ಒಪ್ಪುವ ಅಥವಾ ಹಿಂಬರಹ ಮಾಡುವ ಪಕ್ಷಕಾರನಿಂದ ಅಥವಾ ಆ ಬಗ್ಗೆ ಅವನಿಂದ ಪ್ರಾಧಿಕೃತನಾದ ವ್ಯಕ್ತಿಯಿಂದ ಮಾಡಲ್ಪಡತಕ್ಕದ್ದು.

ಅಂಥ ಪಕ್ಷಕಾರರ ಮತ್ತು ಸಮ್ಯಕ್ ಅನುಕ್ರಮಧಾರಕನಲ್ಲದ ಯಾವನೇ ಇತರ ಲಿಖಿತದ ಧಾರಕನ ನಡುವೆ, ಲಿಖಿತವನ್ನು ಷರತ್ತಿಗೊಳಪಟ್ಟು ಅಥವಾ ವಿಶೇಷ ಉದ್ದೇಶಕ್ಕಾಗಿ ಮಾತ್ರ ವಶಾವಣೆ ಮಾಡಲಾಗಿದ್ದಿತೇ ವಿನಾ ಅದರಲ್ಲಿರುವ ಸ್ವತ್ತನ್ನು ಸಂಪೂರ್ಣವಾಗಿ ವರ್ಗಾಯಿಸುವ ಉದ್ದೇಶಕ್ಕಾಗಿ ಅಲ್ಲ ಎಂಬುದನ್ನು ತೋರಿಸಬಹುದು.

ವಾಹಕನಿಗೆ ಸಂದೇಯವಿರುವ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಅದನ್ನು ವಶಾವಣೆ ಮಾಡುವುದರ ಮೂಲಕ ವರ್ಗಾವಣೀಯವಿರುತ್ತದೆ.

ಆದೇಶಾನುಸಾರ ಸಂದೇಯವಿರುವ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಧಾರಕನ ದ್ವಾರಾ ಹಿಂಬರಹದ ಮತ್ತು ವಶಾವಣೆಯ ಮೂಲಕ ವರ್ಗಾವಣೀಯವಿರುತ್ತದೆ.

**47. ವಶಾವಣೆಯ ಮೂಲಕ ವರ್ಗಾವಣೆ.–** 58ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ವಾಹಕನಿಗೆ ಸಂದೇಯವಿರುವ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಅದನ್ನು ವಶಾವಣೆ ಮಾಡುವುದರ ಮೂಲಕ ವರ್ಗಾವಣೀಯವಿರುತ್ತದೆ.

**ಅಪವಾದ.–** ನಿಶ್ಚಿತ ಘಟನೆಯು ಆಗದ ವಿನಾ ಪರಿಣಾಮಕಾರಿ ಆಗುವುದಿಲ್ಲವೆಂಬ ಷರತ್ತಿನ ಮೇಲೆ ವಶಾವಣೆ ಮಾಡಲಾದ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಅಂಥ ಘಟನೆಯು ನಡೆದ ವಿನಾ (ಷರತ್ತಿನ ತಿಳಿವಳಿಕೆಯಿರದ, ಮೌಲ್ಯಕ್ಕಾಗಿ ಧಾರಣ ಮಾಡಿರುವವನಿಂದ ವಿನಾ) ವರ್ಗಾವಣೀಯವಾಗುವುದಿಲ್ಲ.

**ದೃಷ್ಟಾಂತಗಳು**

(ಕ) ವಾಹಕನಿಗೆ ಸಂದೇಯವಿರುವ ವರ್ಗಾವಣೀಯ ಲಿಖಿತದ ಧಾರಕನಾದ 'ಕ' ನು 'ಖ'ನ ಪರವಾಗಿ ಇಟ್ಟುಕೊಳ್ಳಲು ಅದನ್ನು 'ಖ'ನ ಅಭಿಕರ್ತನಿಗೆ ವಶಾವಣೆ ಮಾಡುತ್ತಾನೆ. ಲಿಖಿತವನ್ನು ವರ್ಗಾವಣೆ ಮಾಡಲಾಗಿದೆ.

(ಖ) 'ಖ'ನ ಬ್ಯಾಮಕರನೂ ಆಗಿರುವ 'ಕ' ನ ಬ್ಯಾಂಕರನ ಕೈಯಲ್ಲಿರುವ ವಾಹಕನಿಗೆ ಸಂದೇಯವಿರುವ ವರ್ಗಾವಣೀಯ ಲಿಖಿತದ ಧಾರಕನಾದ 'ಕ'ನು ಬ್ಯಾಂಕರನಲ್ಲಿರುವ 'ಖ'ನ ಖಾತೆಗೆ 'ಖ'ನ ಹೆಸರಿನಲ್ಲಿ ಅನದನು ವರ್ಗಾವಣೆ ಮಾಡಿ ಜಮಾ ಮಾಡಲು ಬ್ಯಾಂಕರನಿಗೆ ನಿರ್ದೇಶಿಸುತ್ತಾನೆ. ಬ್ಯಾಂಕರನು ಹಾಗೆ ಮಾಡುತ್ತಾನೆ ಮತ್ತು ತದನುಸಾರವಾಗಿ ಈಗ 'ಖ'ನ ಅಭಿಕರ್ತನಿಗೆ ಆ ಲಿಖಿತವನ್ನು ಸ್ವಾಧೀನದಲ್ಲಿಟ್ಟುಕೊಂಡಿರುತ್ತಾನೆ. ಲಿಖಿತದ ವರ್ಗಾವಣೆಯು ಆಗಿದೆ ಮತ್ತು 'ಖ'ನು ಅದರ ಧಾರಕನಾಗಿರುತ್ತಾನೆ.

**48. ಹಿಂಬರಹ ಮೂಲಕ ವರ್ಗಾವಣೆ.–** 58ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಆದೇಶಾನುಸಾರ ಸಂದೇಯವಿರುವ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಅದರ ಮೇಲೆ ಹಿಂಬರಹ ಮಾಡುವುದರ ಮೂಲಕ ಮತ್ತು ಅದನ್ನು ವಶಾವಣೆ ಮಾಡುವುದರ ಮೂಲಕ ಧಾರಕನಿಂದ ವರ್ಗಾವಣೀಯವಾಗಿರುತ್ತದೆ.

**49. ಖಾಲಿ ಹಿಂಬರಹವನ್ನು ಪೂರ್ಣ ಹಿಂಬರಹವನ್ನಾಗಿ ಪರಿವರ್ತಿಸುವಿಕೆ.–** ಖಾಲಿ ಹಿಂಬರಹ ಮಾಡಿದ ವರ್ಗಾವಣೀಯ ಲಿಖಿತದ ಧಾರಕನು, ತನ್ನ ಹೆಸರಿನಲ್ಲಿ ಸಹಿ ಮಾಡದೆ ಹಿಂಬರಹಗಾರನ ಸಹಿಯ ಮೇಲ್ಭಾಗದಲ್ಲಿ ಹಿಂಬರಹದಾರನೆಂದು ಯಾವನೇ ಇತರ ವ್ಯಕ್ತಿಗೆ ಸಂದಾಯ ಮಾಡಲು ನಿರ್ದೇಶಿಸುತ್ತ ಖಾಲಿ ಹಿಂಬರಹವನ್ನು ಪೂರ್ಣ ಹಿಂಬರಹವನ್ನಾಗಿ ಪರಿವರ್ತಿಸಬಹುದು, ಮತ್ತು ಧಾರಕನು ಅದರಿಂದಾಗಿ ಹಿಂಬರಹಗಾರನ ಜವಾಬ್ದಾರಿಯನ್ನು ಹೊರುವುದಿಲ್ಲ.

**50. ಹಿಂಬರಹದ ಪರಿಣಾಮ.–** ವರ್ಗಾವಣೀಯ ಲಿಖಿತದ ಹಿಂಬರಹವು ಅನಂತರದಲ್ಲಿ ಲಿಖಿತವನ್ನು ವಶಾವಣೆಯನ್ನು ಮಾಡಿದಾಗ ಅದರಲ್ಲಿರುವ ಸ್ವತ್ತಿನ ಮಾಲೀಕತೆಯನ್ನು ಮತ್ತೆ ವರ್ಗಾವಣೆ ಮಾಡುವ ಅಧಿಕಾರದೊಂದಿಗೆ ಹಿಂಬರಹದಾರನಿಗೆ ವರ್ಗಾವಣೆ ಮಾಡುತ್ತದೆ. ಆದರೆ ಹಿಂಬರಹವು ವ್ಯಕ್ತಿಪದಗಳ ಮೂಲಕ ಆ ಅಧಿಕಾರವನ್ನು ನಿರ್ಬಂಧಿಸಬಹುದು ಅಥವಾ ಹೊರತುಪಡಿಸಬಹುದು ಅಥವಾ ಕೇವಲ ಲಿಖಿತದ ಮೇಲೆ ಹಿಂಬರಹ ಮಾಡಲು ಅಥವಾ ಹಿಂಬರಹಗಾರನ ಪರವಾಗಿ ಅಥವಾ ಇತರ ನಿರ್ದಿಷ್ಟ ವ್ಯಕ್ತಿಯ ಪರವಾಗಿ ಅದರಲ್ಲಿ ನಮೂದಿತವಾಗಿರುವುದನ್ನು ಪಡೆಯಲು ಹಿಂಬರಹದಾರನನ್ನು ಒಬ್ಬ ಅಭಿಕರ್ತನನ್ನಾಗಿ ಮಾಡಬಹುದು.

**ದೃಷ್ಟಾಂತಗಳು**

ವಾಹಕನಿಗೆ ಸಂದೇಯವಿರುವ ವಿವಿಧ ವರ್ಗಾವಣೀಯ ಲಿಖಿತಗಳ ಮೇಲೆ 'ಖ'ನು ಕೆಳಕಂಡ ಹಿಂಬರಹಗಳಿಗೆ ಸಹಿ ಹಾಕುತ್ತಾನೆ.–

(ಎ) "ಇದರಲ್ಲಿ ನಮೂದಿಸಿರುವುದನ್ನು 'ಗ'ನಿಗೆ ಮಾತ್ರ ಸಂದಾಯ ಮಾಡಿ"

(ಬಿ) 'ನನ್ನ ಉಪಯೋಗಕ್ಕಾಗಿ 'ಗ'ನಿಗೆ ಸಂದಾಯ ಮಾಡಿ",

(ಸಿ) "ಗ'ನಿಗೆ ಅಥವಾ "ಬಿ'ನ ಖಾತೆಗೆ ಆದೇಶಾನುಸಾರ ಸಂದಾಯ ಮಾಡಿ",

(ಡಿ) "ಇದರಲ್ಲಿರುವುದನ್ನು "ಸಿ'ನಿಗೆ ಜಮಾ ಮಾಡಿ".

ಈ ಹಿಂಬರಹಗಳು "ಗ'ನು ಮತ್ತೆ ವರ್ಗಾವಣೆ ಮಾಡುವ ಅಧಿಕಾರವನ್ನು ಹೊರತು ಪಡಿಸುತ್ತವೆ.

() "ಗ'ನಿಗೆ ಸಂದಾಯ ಮಾಡಿ"

() "ಓರಿಯೆಂಟಲ್ ಬ್ಯಾಂಕಿನಲ್ಲಿ 'ಗ'ನ ಖಾತೆಗೆ ಇದರ ಮೌಲ್ಯವನ್ನು ಜಮಾ ಮಾಡಿ"

() “ಹಿಂಬರಹಗಾರನಿಗೆ ಮತ್ತು ಇತರರಿಗೆ ‘ಗ’ನಿಂದ ಬರೆದು ಕೊಡಲಾದ ನಿರ್ದಿಷ್ಟ ಹಸ್ತಾಂತರಣ ಪತ್ರದಲ್ಲಿನ ಪ್ರತಿಫಲದ ಭಾಗವಾಗಿ ಇದರಲ್ಲಿ ನಮೂದಿಸಿರುವುದನ್ನು ‘ಗ’ನಿಗೆ ಸಂದಾಯ ಮಾಡಿ”.

ಈ ಹಿಂಬರಹಗಳು ‘ಗ’ನು ಮತ್ತೆ ವರ್ಗಾವಣೆ ಮಾಡುವ ಅಧಿಕಾರವನ್ನು ಹೊರತು ಪಡಿಸುವುದಿಲ್ಲ.

**51. ಯಾರು ವರ್ಗಾಯಿಸಬಹುದು.–** ವರ್ಗಾವಣೀಯ ಲಿಖಿತದ ಏಕಮಾತ್ರ ಬರೆದುಕೊಡುವವನು ‘ಧನಾದೇಶಕ’ ನು ಧನಗ್ರಾಹಿ ಅಥವಾ ಹಿಂಬರಹದಾರನು ಅಥವಾ ಸಂಯುಕ್ತವಾಗಿ ಬರೆದುಕೊಡುವವರು. ಧನಾದೇಶಕರು, ಧನಗ್ರಾಹಿಗಳು ಅಥವಾ ಹಿಂಬರಹದಾರರಲ್ಲಿ ಎಲ್ಲರೂ ಅಂಥ ಲಿಖಿತದ ವರ್ಗಾವಣೀಯತೆಯನ್ನು 50ನೇ ಪ್ರಕರಣದಲ್ಲಿ ಹೇಳಲಾಗಿರುವಂತೆ ನಿರ್ಬಂಧಿಸಿರದಿದ್ದರೆ ಅಥವಾ ಹೊರತುಪಡಿಸಿರದಿದ್ದರೆ ಅದರ ಮೇಲೆ ಹಿಂಬರಹ ಮಾಡಬಹುದು ಮತ್ತು ಅದನ್ನೇ ವರ್ಗಾವಣೆ ಮಾಡಬಹುದು.

**ವಿವರಣೆ.–** ಲಿಖಿತದ ಕಾನೂನುಬದ್ಧ ಸ್ವಾಧೀನವುಳ್ಳವನಾಗಿದ್ದ, ಹೊರತು ಅಥವಾ ಅದರ ಧಾರಕನಾಗಿದ್ದ ಹೊರತು, ಈ ಪ್ರಕರಣದಲ್ಲಿರುವುದು ಯಾವುದೂ ಅದನ್ನು ಬರೆದುಕೊಡುವವನನ್ನು ಅಥವಾ ಧನಾದೇಶಕನನ್ನು ಹಿಂಬರಹ ಮಾಡಲು ಅಥವಾ ವರ್ಗಾವಣೆ ಮಾಡಲು ಸಮರ್ಥಗೊಳಿಸುವುದಿಲ್ಲ, ಅಥವಾ ಧನಗ್ರಾಹಿಯನ್ನು ಅಥವಾ ಹಿಂಬರಹದಾರರನ್ನು ಅವರು ಅದರ ಧಾರಕನಾಗಿದ್ದ ಹೊರತು ಹಿಂಬರಹ ಮಾಡಲು ಅಥವಾ ವರ್ಗಾವಣೆ ಮಾಡಲು ಸಮರ್ಥಗೊಳಿಸುವುದಿಲ್ಲ.

**ದೃಷ್ಟಾಂತ**

‘ಕ’ನಿಗೆ ಅಥವಾ ಆದೇಶಾನುಸಾರ ಸಂದೇಯವಿರುವ ವಿನಿಮಯ ಪತ್ರವನ್ನು ಬರೆಯಲಾಗಿದೆ. ಅದನ್ನು ‘ ’ ನಿಗೆ ಹಿಂಬರಹ ಮಾಡುತ್ತಾನೆ. ಆ ಹಿಂಬರಹವು “ಆದೇಶಾನುಸಾರ” ಎಂಬ ಪದಗಳನ್ನು ಅಥವಾ ತತ್ಸಮಾನವಾದ ಯಾವುದೇ ಪದಗಳನ್ನು ಹೊಂದಿರುವುದಿಲ್ಲ. ‘ ’ ನು ಲಿಖಿತವನ್ನು ವರ್ಗಾಯಿಸಬಹುದು.

**52. ತನ್ನ ಹೊಣೆಯನ್ನು ಹೊರತುಪಡಿಸುವ ಅಥವಾ ಅದನ್ನು ಷರತ್ತಿಗೊಳಪಡಿಸುವ ಹಿಂಬರಹಗಾರ.–** ವರ್ಗಾವಣೀಯ ಲಿಖಿತದ ಹಿಂಬರಹಗಾರನು ಹಿಂಬರಹದಲ್ಲಿ ವ್ಯಕ್ತಪೆಗಳ ಮೂಲಕ ಅದರ ಮೇಲಿರುವ ತನ್ನ ಹೊಣೆಯನ್ನು ಹೊರತುಪಡಿಸಿಕೊಳ್ಳಬಹುದು ಅಥವಾ ಅಂಥ ಹೊಣೆಯು ಅಥವಾ ಅದರ ಮೇಲೆ ಸಂದೇಯವಿರುವ ಮೊಬಲಗನ್ನು ಪಡೆಯುವ ಹಿಂಬರಹದಾರನ ಅಧಿಕಾರವು ನಿರ್ದಿಷ್ಟ ಘಟನೆಯು ಸಂಭವಿಸುವುದರ ಮೇಲೆ, ಅಂಥದು ಎಂದೂ ಸಂಭವಿಸದಿದ್ದಾಗ್ಯೂ ಅವಲಂಬಿತವಾಗುವಂತೆ ಮಾಡಬಹುದು.

ಹಿಂಬರಹಗಾರನು ತನ್ನ ಹೊಣೆಯನ್ನು ಹಾಗೆ ಹೊರತುಪಡಿಸಿಕೊಂಡಾಗ, ಮತ್ತು ಬಳಿಕ ಆ ಲಿಖಿತ ಧಾರಕನಾದಾಗ, ಎಲ್ಲ ಮಧ್ಯವರ್ತಿ ಹಿಂಬರಹಗಾರರು ಅವನಿಗೆ ಹೊಣೆಗಾರರಾಗುತ್ತಾರೆ.

**ದೃಷ್ಟಾಂತಗಳು**

(ಎ) ವರ್ಗಾವಣೀಯ ಲಿಖಿತದ ಹಿಂಬರಹಗಳು **"ಹೊಣೆರಹಿತ"** ಎಂಬ ಶಬ್ದಗಳನ್ನು ಸೇರಿಸಿ ತನ್ನ ಹೆಸರಿನಲ್ಲಿ ಸಹಿ ಮಾಡುತ್ತಾನೆ.

ಈ ಹಿಂಬರಹದ ಮೇಲೆ ಅವನು ಯಾವ ಹೊಣೆಗೂ ಗುರಿಯಾಗುವುದಿಲ್ಲ.

(ಬಿ) 'ಎ'ನು ವರ್ಗಾವಣೀಯ ಲಿಖಿತದ ಧನಗ್ರಾಹಿ ಮತ್ತು ಧಾರಕನಾಗಿದ್ದಾನೆ. ಅವನು **"ಹೊಣೆರಹಿತ ಹಿಂಬರಹದ"** ಮೂಲಕ ವೈಯಕ್ತಿಕ ಹೊಣೆಯನ್ನು ಹೊರತುಪಡಿಸಿಕೊಂಡು "ಬಿ"ನಿಗೆ ಆ ಲಿಖಿತವನ್ನು ವರ್ಗಾಯಿಸುತ್ತಾನೆ ಮತ್ತು "ಬಿ"ನು "ಸಿ"ನಿಗೆ ಹಿಂಬರಹ ಮಾಡುತ್ತಾನೆ; ಅವನು ಅದನ್ನು "ಎ"ನಿಗೆ ಹಿಂಬರಹ ಮಾಡುತ್ತಾನೆ. "ಎ"ನು ತನ್ನ ಪೂರ್ವಕ ಹಕ್ಕುಗಳಲ್ಲಿ ಪುನಃ ಸ್ಥಾಪಿತನಾಗುವುದು ಮಾತ್ರವಲ್ಲದೆ ಅವನು "ಬಿ" ಮತ್ತು "ಸಿ"ಗಳ ಪ್ರತಿಯಾಗಿ ಹಿಂಬರಹದಾರನ ಹಕ್ಕುಗಳನ್ನು ಹೊಂದುತ್ತಾನೆ.

**53. ಸಮ್ಯಕ್ ಅನುಕ್ರಮಧಾರಕನಿಂದ ಹಕ್ಕು ಪಡೆಯುವ ಧಾರಕ.–** ಸಮ್ಯಕ್ ಅನುಕ್ರಮ ಧಾರಕನಿಂದ ಹಕ್ಕು ಪಡೆಯುವ ವರ್ಗಾವಣೀಯ ಲಿಖಿತದ ಧಾರಕನು ಅದರ ಮೇಲೆ ಸಮ್ಯಕ್ ಅನುಕ್ರಮ ಧಾರಕನ ಅಧಿಕಾರಗಳನ್ನೇ ಹೊಂದಿರುತ್ತಾನೆ.

**54. ಖಾಲಿ ಹಿಂಬರಹ ಮಾಡಿದ ಲಿಖಿತ.–** ಅಡ್ಡಗೆರೆ ಹಾಕಿದ ಚೆಕ್ಕುಗಳ ಬಗ್ಗೆ ಈ ಮುಂದೆ ಇರುವ ಉಪಬಂಧಗಳಿಗೊಳಪಟ್ಟು ಖಾಲಿ ಹಿಂಬರಹ ಮಾಡಲಾದ ವರ್ಗಾವಣೀಯ ಲಿಖಿತವು ಮೂಲತಃ ಆದೇಶಾನುಸಾರ ಸಂದೇಯವಿದ್ದಾಗ್ಯೂ ಅದರ ವಾಹಕನಿಗೆ ಸಂದೇಯವಿರುತ್ತದೆ.

**55. ಖಾಲಿ ಹಿಂಬರಹವನ್ನು ಪೂರ್ಣ ಹಿಂಬರಹವನ್ನಾಗಿ ಪರಿವರ್ತಿಸುವಿಕೆ.–** ವರ್ಗಾವಣೀಯ ಲಿಖಿತವು ಖಾಲಿ ಹಿಂಬರಹ ಮಾಡಲಾದ ಬಳಿಕ, ಪೂರ್ಣವಾಗಿ ಹಿಂಬರಹ ಮಾಡಲ್ಪಟ್ಟರೆ ಅದನ್ನು ಯಾರಿಗೆ ಪೂರ್ಣ ಹಿಂಬರಹ ಮಾಡಲಾಗಿದೆಯೋ ಆ ವ್ಯಕ್ತಿ ಅಥವಾ ಅಂಥ ವ್ಯಕ್ತಿಯ ಮೂಲಕ ಹಕ್ಕು ಪಡೆದವನ ವಿನಾ ಬೇರೆ ಯಾರೂ ಪೂರ್ಣ ಹಿಂಬರಹಗಾರನಿಂದ ಅದರ ಮೊಬಲಗನ್ನು ಕ್ಲೇಮು ಮಾಡಲಾಗದು.

**56. ಸಂದೇಯವಿರುವ ಮೊಬಲಗಿನ ಭಾಗಕ್ಕಾಗಿ ಹಿಂಬರಹ.–** ಲಿಖಿತದ ಮೇಲೆ ಸಂದೇಯವೆಂದು ಕಂಡು ಬರುವ ಮೊಬಲಗಿನ ಭಾಗಕ್ಕಾಗಿ ಮಾತ್ರ ವರ್ಗಾವಣೆಯೆಂದು ಬರಹದ ತಾತ್ಪರ್ಯವಾದರೆ, ವರ್ಗಾವಣೆಯ ಲಿಖಿತದ ಮೇಲಿರುವ ವರ್ಗಾವಣೆಯ ಉದ್ದೇಶವಿರುವ ಅಂಥ ಯಾವುದೇ ಬರಹವು ಕಾನೂನು ಮಾನ್ಯವಲ್ಲ; ಆದರೆ ಮೊಬಲಗು ಭಾಗಶಃ ಸಂದಾಯವಾಗಿದ್ದರೆ ಆ ಬಗ್ಗೆ ಲಿಖಿತದ ಮೇಲೆ ಒಂದು ಟಿಪ್ಪಣಿಯನ್ನು ಹಿಂಬರಹ ಮಾಡಬಹುದು; ಆ ಬಳಿಕ ಅದನ್ನು ಉಳಿದುದಕ್ಕಾಗಿ ವರ್ಗಾವಣೆ ಮಾಡಬಹುದು.

**57. ಮೃತನಿಂದ ಹಿಂಬರಹ ಮಾಡಲಾದ ಲಿಖಿತವನ್ನು ವಶಾವಣೆಯ ಮೂಲಕ ಮಾತ್ರವೇ ಕಾನೂನುಸಮ್ಮತ ಪ್ರತಿನಿಧಿಯು ವರ್ಗಾವಣೆ ಮಾಡಲಾರ.–** ಆದೇಶಾನುಸಾರ ಸಂದೇಯವಿರುವ ಮತ್ತು ಮೃತನು ಹಿಂಬರಹ ಮಾಡಿದ ಆದರೆ ವಶಾವಣೆ ಮಾಡಿರದ ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕನ್ನು ಮೃತ ವ್ಯಕ್ತಿಯ ಕಾನೂನುಸಮ್ಮತ ಪ್ರತಿನಿಧಿಯು ವಶಾವಣೆಯ ಮೂಲಕ ಮಾತ್ರವೇ ವರ್ಗಾವಣೆ ಮಾಡಲಾಗುವುದಿಲ್ಲ.

**58. ಕಾನೂನುಬದ್ಧವಲ್ಲದ ಮಾರ್ಗಗಳಿಂದ ಪಡೆದುಕೊಂಡ ಅಥವಾ ಕಾನೂನುಬದ್ಧವಲ್ಲದ ಪ್ರತಿಫಲಕ್ಕಾಗಿ ಪಡೆದುಕೊಂಡ ಲಿಖಿತ.–** ವರ್ಗಾವಣೀಯ ಲಿಖಿತವು ಕಳೆದುಹೋಗಿರುವಾಗ ಅಥವಾ ಅದನ್ನು ಅಪರಾಧದ ಅಥವಾ ಮೋಸದ ಮೂಲಕ ಅಥವಾ ಕಾನೂನುಬದ್ಧವಲ್ಲದ ಪ್ರತಿಫಲಕ್ಕಾಗಿ ಬರೆದು ಕೊಡುವವನಿಂದ, ಒಪ್ಪಿಗೆದಾರನಿಂದ ಅಥವಾ ಧಾರಕನಿಂದ ಪಡೆದು ಕೊಂಡಿರುವಲ್ಲಿ,

ಲಿಖಿತವನ್ನು ಹಾಗೆ ದೊರಕಿಸಿಕೊಂಡ ಅಥವಾ ಪಡೆದ ವ್ಯಕ್ತಿಯ ಮೂಲಕ ಕ್ಲೇಮು ಮಾಡುವ ಯಾವ ಸ್ವಾಧೀನಕಾರನು ಅಥವಾ ಹಿಂಬರಹದಾರನು ಅಂಥ ಬರೆದುಕೊಡುವವನಿಂದ, ಒಪ್ಪಿದಾರನಿಂದ ಅಥವಾ ಧಾರಕನಿಂದ ಅಥವಾ ಅಂಥ ಧಾರಕನ ಹಿಂದಿನ ಯಾವನೇ ಪಕ್ಷಕಾರನಿಂದ, ಅಂಥ ಸ್ವಾಧೀನಕಾರನು ಅಥವಾ ಹಿಂಬರಹದಾರನು ಅಥವಾ ಅವನು ಯಾವ ವ್ಯಕ್ತಿಯ ಮೂಲಕ ಕ್ಲೇಮು ಮಾಡುತ್ತಾನೋ ಅವನು ಅದರ ಸಮ್ಯಕ್ ಅನುಕ್ರಮಧಾರಕನಾಗಿದ್ದ ಹೊರತು, ಅದರ ಮೇಲೆ ಸಂದೇಯವಿರುವ ಮೊಬಲಗನ್ನು ಪಡೆಯಲು ಹಕ್ಕುಳ್ಳವನಾಗುವುದಿಲ್ಲ.

**59. ಅನಾದರವಾದ ಅಥವಾ ಅವಧಿ ಮೀರಿದ ಅನಂತರ ಅರ್ಜಿತವಾದ ಲಿಖಿತ.–** ಒಪ್ಪದೆ ಇರುವುದರಿಂದ ಅಥವಾ ಸಂದಾಯ ಮಾಡದೆ ಇರುವುದರಿಂದ ಅನಾದರವಾದ ಅನಂತರ ಅದರ ತಿಳಿವಳಿಕೆಯೊಂದಿಗೆ ಅಥವಾ ಅವಧಿ ಪೂರ್ಣವಾದ ಅನಂತರ ಅರ್ಜಿತವಾದ ವರ್ಗಾವಣೀಯ ಲಿಖಿತದ ಧಾರಕನು ಇತರ ಪಕ್ಷಕಾರರ ಪ್ರತಿಯಾಗಿ ಅದರ ಮೇಲೆ ಅವನಿಗೆ ವರ್ಗಾವಣೆ ಮಾಡಿದವನ ಅಧಿಕಾರಗಳನ್ನು ಮಾತ್ರ ಹೊಂದಿರುತ್ತಾನೆ.

**ಸೌಕರ್ಯ ಪತ್ರ ಅಥವಾ ವಿನಿಮಯ ಪತ್ರ.–** ಪರಂತು, ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರದ ಯಾವನೇ ಪಕ್ಷಕಾರನು ಅವುಗಳ ಮೇಲೆ ಹಣ ಎತ್ತುವುದು ಸಾಧ್ಯವಾಗಲೆಂಬ ಉದ್ದೇಶದಿಂದ ಪ್ರತಿಫಲವಿಲ್ಲದೆ ಬರೆದುಕೊಟ್ಟ, ಧನಾದೇಶಿಸಿದ ಅಥವಾ ಒಪ್ಪಿಗೆ ಪಡೆದ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವು ಅವಧಿ ಪೂರ್ಣವಾದ ಅನಂತರ, ಸದ್ಭಾವನೆಯಿಂದ ಮತ್ತು ಪ್ರತಿಫಲಕ್ಕಾಗಿ ಅದರ ಧಾರಕನಾಗುವ ಯಾವನೇ ವ್ಯಕ್ತಿಯು ಪ್ರಾಮಿಸರಿ ನೋಟಿನ ಅಥವಾ ವಿನಿಮಯ ಪತ್ರದ ಮೊಬಲಗನ್ನು ಹಿಂದಿನ ಯಾವನೇ ಪಕ್ಷಕಾರನಿಂದ ವಸೂಲು ಮಾಡಿಕೊಳ್ಳಬಹುದು.

**ದೃಷ್ಟಾಂತ**

ವಿನಿಮಯ ಪತ್ರದ ಒಪ್ಪಿಗೆದಾರನು, ಅದನ್ನು ಒಪ್ಪುವಾಗ, ವಿನಿಮಯ ಪತ್ರದ ಸಂದಾಯಕ್ಕೆ ಪಾರ್ಶ್ವಿಕ ಭದ್ರತೆಯಾಗಿ ಕೆಲವು ಸಾಮಾನುಗಳನ್ನು ಧನಾದೇಶಕನ ಬಳಿ ಇಟ್ಟು ವಿನಿಮಯ ಪತ್ರವು ಅವಧಿಪೂರ್ಣವಾದಾಗ ಸಂದಾಯವಾಗದಿದ್ದಲ್ಲಿ ಅವುಗಳನ್ನು ಮಾರಾಟ ಮಾಡಲು ಮತ್ತು ಅವುಗಳ ಉತ್ಪನ್ನದಿಂದ ವಿನಿಮಯ ಪತ್ರದ ಹಣವನ್ನು ತೀರಿಸಲು ಧನಾದೇಶಕನಿಗೆ ಅಧಿಕಾರ ನೀಡಿದ್ದನ್ನು, ವಿನಿಮಯ ಪತ್ರವು ಅವಧಿಪೂರ್ಣವಾದಾಗ ಸಂದಾಯವಾಗದೆ ಉಳಿದುದರಿಂದ ಧನಾದೇಶಕನು ಸಾಮಾನುಗಳನ್ನು ಮಾರಾಟ ಮಾಡಿದನು ಮತ್ತು ಅದರ ಉತ್ಪನ್ನವನ್ನು ತನ್ನಲ್ಲಿಟ್ಟುಕೊಂಡನು, ಆದರೆ

ವಿನಿಮಯ ಪತ್ರವನ್ನು 'ಕ' ನಿಗೆ ಹಿಂಬರಹ ಮಾಡಿದನು 'ಕ'ನ ಹಕ್ಕು ಧನಾದೇಶಕನ ಹಕ್ಕು ಒಳಪಡುವ ಆಕ್ಷೇಪಣೆಗೆ ಒಳಪಡುತ್ತದೆ.

**60. ಲಿಖಿತವು ಸಂದಾಯವಾಗುವವರೆಗೆ ಅಥವಾ ಸಮಾಧಾನವಾಗುವವರೆಗೆ ವರ್ಗಾವಣೀಯ.–** ವರ್ಗಾವಣೀಯ ಲಿಖಿತವು ಅದನ್ನು ಬರೆದು ಕೊಡುವವನಿಂದ, ಧನಾದೇಶಿಕನಿಂದ ಅಥವಾ ಒಪ್ಪಿಗೆದಾರನಿಂದ ಅದರ ಅವಧಿ ಪೂರ್ಣವಾಗುವ ಸಮಯಕ್ಕೆ ಅಥವಾ ಆ ಬಳಿಕ ಅದು ಸಂದಾಯವಾಗುವರೆಗೆ ಅಥವಾ ಸಮಾಧಾನವಾಗುವರೆಗೆ ಬರೆದು ಕೊಡುವವನಿಂದ, ಧನಾದೇಶಿತನಿಂದ ಅಥವಾ ಅವಧಿ ಪೂರ್ಣವಾದ ಅನಂತರದ) ಒಪ್ಪಿಗೆದಾರನಿಂದ ಬಿಟ್ಟು ವರ್ಗಾವಣೆ ಮಾಡಲ್ಪಡಬಹುದು ಆದರೆ ಸಂದಾಯ ಅಥವಾ ಸಮಾಧಾನವಾದ ನಂತರವಲ್ಲ.

## ಅಧ್ಯಾಯ – V

## ಹಾಜರುಪಡಿಸುವ ವಿಷಯದಲ್ಲಿ

**61. ಒಪ್ಪಿಗೆಗಾಗಿ ಹಾಜರು ಪಡಿಸುವುದು.–** ನೋಡಿದ ಅನಂತರ ಸಂದೇಯವಿರುವ ವಿನಿಮಯ ಪತ್ರದಲ್ಲಿ ಅದನ್ನು ಹಾಜರುಪಡಿಸುವ ಬಗ್ಗೆ ಕಾಲ ಅಥವಾ ಸ್ಥಳವನ್ನು ನಿರ್ದಿಷ್ಟಪಡಿಸದೆ ಇದ್ದರೆ ಅದನ್ನು ಒಪ್ಪಬೇಕೆಂದು ತಗಾದೆ ಮಾಡಲು ಹಕ್ಕುಳ್ಳ ವ್ಯಕ್ತಿಯು, ಯುಕ್ತ ಶೋಧನೆ ಮಾಡಿದ ಬಳಿಕ ಅದರ ಧನಾದೇಶಿತನು ದೊರೆತರೆ, ಅದನ್ನು ಧನಾದೇಶಿಸಿದ ಸಮಯದಿಂದ ಯುಕ್ತ ಕಾಲದೊಳಗಾಗಿ ಮತ್ತು ವ್ಯವಹಾರ ನಡೆಯುವ ದಿನದಂದು ವ್ಯವಹಾರದ ಸಮಯದಲ್ಲಿ ಅವನಿಗೆ ಒಪ್ಪಿಗೆಗಾಗಿ ಹಾಜರುಪಡಿಸತಕ್ಕದ್ದು. ಹಾಗೆ ಹಾಜರುಪಡಿಸಲು ತಪ್ಪಿದರೆ, ಅದಕ್ಕೆ ಸಂಬಂಧಿಸಿದ ಯಾವ ಪಕ್ಷಕಾರನೂ ಅದರ ಮೇಲೆ ಹಾಗೆ ತಪ್ಪುವ ವ್ಯಕ್ತಿಗೆ ಹೊಣೆಗಾರನಾಗುವುದಿಲ್ಲ.

ಧನಾದೇಶಿತನು ಯುಕ್ತ ಶೋಧನೆಯ ಅನಂತರ ದೊರೆಯದಿದ್ದರೆ, ವಿನಿಮಯ ಪತ್ರವು ಅನಾದರಿತವಾಗುತ್ತದೆ.

ವಿನಿಮಯ ಪತ್ರವು ಧನಾದೇಶಿತನಿಗೆ ನಿರ್ದಿಷ್ಟ ಸ್ಥಾನಕ್ಕೆ ನಿರ್ದೇಶಿಸಲಾಗಿದ್ದರೆ, ಅದನ್ನು ಆ ಸ್ಥಾನದಲ್ಲಿಯೇ ಹಾಜರುಪಡಿಸಬೇಕು; ಮತ್ತು ಅದನ್ನು ಹಾಜರುಪಡಿಸಲು ನಿರ್ದಿಷ್ಟಪಡಿಸಲಾಗಿರುವ ದಿನದಂದು ಯುಕ್ತ ಶೋಧನೆಯ ಅನಂತರ ಅವನು ದೊರೆಯದಿದ್ದರೆ, ವಿನಿಮಯ ಪತ್ರವು ಅನಾದರಿತವಾಗುವುದು.

ಹಾಗೆ ಹಾಜರುಪಡಿಸುವುದು ಒಪ್ಪಂದದ ಅಥವಾ ರೂಢಿಯ ಮೂಲಕ ಪ್ರಾಧಿಕೃತವಾಗಿರುವಲ್ಲಿ ನೋಂದಾಯಿತ ಪತ್ರದ ಮೂಲಕ ಅಂಚೆ ಕಾರ್ಯಾಲಯ ದ್ವಾರಾ ಹಾಜರುಪಡಿಸಿದರೆ ಸಾಕು;

**62. ಪ್ರಾಮಿಸರಿ ನೋಟನ್ನು ನೋಡಲು ಹಾಜರುಪಡಿಸುವುದು.–** ನೋಡಿದ ಅನಂತರ ನಿಶ್ಚಿತ ಕಾಲಾವಧಿಯ ಬಳಿಕ ಸಂದೇಯವಿರುವ ಪ್ರಾಮಿಸರಿ ನೋಡನ್ನು ಸಂದಾಯವನ್ನು ತಗಾದೆ ಮಾಡಲು ಹಕ್ಕುಳ್ಳ ವ್ಯಕ್ತಿಯು, ಯುಕ್ತ ಅವಧಿಯೊಳಗೆ ಮತ್ತು ವ್ಯವಹಾರದ ದಿನದಂದು ವ್ಯವಹಾರದ ಸಮಯದಲ್ಲಿ ಅದನ್ನು ಬರೆದು ಕೊಟ್ಟವನಿಗೆ (ಅವನು ಯುಕ್ತ ಶೋಧನೆಯ ಅನಂತರ ದೊರಕಿದರೆ) ನೋಡುವುದಕ್ಕಾಗಿ ಹಾಜರುಪಡಿಸತಕ್ಕದ್ದು. ಹಾಗೆ ಹಾಜರುಪಡಿಸಲು ತಪ್ಪಿದರೆ, ಅದಕ್ಕೆ ಸಂಬಂಧಿಸಿದ ಯಾವ ಪಕ್ಷಕಾರನೂ ಅದರ ಮೇಲೆ ಹಾಗೆ ತಪ್ಪುವ ವ್ಯಕ್ತಿಗೆ ಹೊಣೆಗಾರನಾಗುವುದಿಲ್ಲ.

**63. ಧನಾದೇಶಿತನಿಗೆ ಯೋಚಿಸುವುದಕ್ಕಾಗಿ ಕಾಲ.–** ತನ್ನ ಒಪ್ಪಿಗೆಗಾಗಿ ಹಾಜರುಪಡಿಸಲಾದ ವಿನಿಮಯ ಪತ್ರದ ಧನಾದೇಶಿತನು ಹಾಗೆ ಅಗತ್ಯಪಡಿಸಿದರೆ, ಧಾರಕನು ಧನಾದೇಶಿತನಿಗೆ ಅದನ್ನು ಅವನು ಒಪ್ಪಬಹುದೆ ಅಥವಾ ಇಲ್ಲವೆ ಎಂಬುದನ್ನು ಕುರಿತು ಪರ್ಯಾಲೋಚಿಸುವುದಕ್ಕಾಗಿ ನಲವತ್ತೆಂಟು ಗಂಟೆಗಳ (ಸಾರ್ವಜನಿಕ ರಜಾ ದಿನಗಳನ್ನುಳಿದು) ಕಾಲಾವಕಾಶವನ್ನು ಕೊಡತಕ್ಕದ್ದು.

**64. ಸಂದಾಯಕ್ಕಾಗಿ ಹಾಜರುಪಡಿಸುವುದು.–** ಪ್ರಾಮಿಸರಿ ನೋಟು, ವಿನಿಮಯ ಪತ್ರ ಮತ್ತು ಚೆಕ್ಕುಗಳನ್ನು ಅನುಕ್ರಮವಾಗಿ ಬರೆದು ಕೊಟ್ಟವನಿಗೆ, ಒಪ್ಪಿಗೆದಾರನಿಗೆ ಅಥವಾ ಧನಾದೇಶಿತನಿಗೆ ಧಾರಕನ ಪರವಾಗಿ ಅಥವಾ ಧಾರಕನು ಅವುಗಳ ಸಂದಾಯಕ್ಕಾಗಿ ಈ ಮುಂದೆ ಉಪಬಂಧಿಸಿರುವಂತೆ ಹಾಜರುಪಡಿಸತಕ್ಕದ್ದು, ಹಾಗೆ ಹಾಜರುಪಡಿಸಲು ತಪ್ಪಿದರೆ ಅದಕ್ಕೆ ಸಂಬಂಧಿಸಿದ ಇತರ ಪಕ್ಷಕಾರರು ಅಂಥ ಧಾರಕನಿಗೆ ಅದರ ಮೇಲೆ ಹೊಣೆಗಾರರಾಗುವುದಿಲ್ಲ.

ಹಾಗೆ ಹಾಜರುಪಡಿಸುವುದು ಒಪ್ಪಂದದ ಅಥವಾ ರೂಢಿಯ ಮೂಲಕ ಪ್ರಾಧಿಕೃತವಾಗಿರುವಲ್ಲಿ, ನೋಂದಾಯಿತ ಪತ್ರದ ಮೂಲಕ ಅಂಚೆ ಕಾರ್ಯಾಲಯದ ದ್ವಾರಾ ಹಾಜರುಪಡಿಸಿದರೆ ಸಾಕು.

ಅಪರಾದ ಪ್ರಾಮಿಸರಿ ನೋಟು ತಗಾದೆ ಮಾಡಿದಾಗ ಸಂದೇಯವಿರುವಲ್ಲಿ ಮತ್ತು ಅದು ನಿರ್ದಿಷ್ಟ ಸ್ಥಳದಲ್ಲಿ ಸಂದೇಯವಿಲ್ಲದಿರುವಲ್ಲಿ, ಬರೆದು ಕೊಟ್ಟವನನ್ನು ಭಾದಿತರನ್ನಾಗಿ ಮಾಡುವುದಕ್ಕಾಗಿ ಯಾವ ಹಾಜರುಪಡಿಸುವಿಕೆಯು ಅವಶ್ಯಕವಲ್ಲ.

**65. ಹಾಜರುಪಡಿಸುವ ಸಮಯ.–**ಸಂದಾಯಕ್ಕಾಗಿ ಹಾಜರುಪಡುವಿಕೆಯನ್ನು ರೂಢಿಗತವಾದ ವ್ಯವಹಾರದ ಸಮಯದಲ್ಲಿಯೇ ಮಾಡಬೇಕು ಮತ್ತು ಅದು ಬ್ಯಾಂಕರ್‌ನಲ್ಲಿ ಮಾಡಬೇಕಾಗಿರುವಲ್ಲಿ ಬ್ಯಾಂಕಿಂಗ್ ಸಮಯದೊಳಗಾಗಿಯೇ ಮಾಡಬೇಕು.

**66. ದಿನಾಂಕದ ಅನಂತರ ಅಥವಾ ನೋಡಿದ ಅನಂತರ ಸಂದೇಯವಿರುವ ಲಿಖಿತವನ್ನು ಸಂದಾಯಕ್ಕಾಗಿ ಹಾಜರುಪಡಿಸುವುದು.–** ದಿನಾಂಕದ ಅಥವಾ ನೋಡಿದ ಅನಂತರ ನಿರ್ದಿಷ್ಟ ಕಾಲಾವಧಿಯಲ್ಲಿ ಸಂದೇಯವಿರುವ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವನ್ನು ಅವಧಿಪೂರ್ಣವಾದ ಸಮಯದಲ್ಲಿ ಸಂದಾಯಕ್ಕಾಗಿ ಹಾಜರುಪಡಿಸತಕ್ಕದ್ದು.

**67. ಕಂತುಗಳ ಮೂಲಕ ಸಂದೇಯವಿರುವ ಪ್ರಾಮಿಸರಿ ನೋಟನ್ನು ಸಂದಾಯಕ್ಕಾಗಿ ಹಾಜರುಪಡಿಸುವುದು.–** ಕಂತುಗಳ ಮೇಲೆ ಸಂದೇಯವಿರುವ ಪ್ರಾಮಿಸರಿ ನೋಟನ್ನು, ಪ್ರತಿಯೊಂದು ಕಂತಿಗಾಗಿ ಗೊತ್ತುಪಡಿಸಿದ ದಿನಾಂಕದ ಅನಂತರದ ಮೂರನೇ ದಿನ ಸಂದಾಯಕ್ಕಾಗಿ ಹಾಜರುಪಡಿಸತಕ್ಕದ್ದು. ಹಾಗೆ ಹಾಜರುಪಡಿಸಿದಾಗ ಸಂದಾಯ ಮಾಡದೆ ಇರುವಿಕೆಯು ಪ್ರಾಮಿಸರಿ ನೋಟು ಅವಧಿ ಪೂರ್ಣವಾದಾಗ ಸಂದಾಯ ಮಾಡದೇ ಇರುವಿಕೆಯಂತಹ ಪರಿಣಾಮವನ್ನೇ ಉಳ್ಳದ್ದಾಗಿರುತ್ತದೆ.

**68. ಬೇರೆ ಸ್ಥಳಗಳಲ್ಲದೆ ನಿರ್ದಿಷ್ಟ ಸ್ಥಳದಲ್ಲಿಯ ಸಂದೇಯವಿರುವ ಲಿಖಿತವನ್ನು ಸಂದಾಯಕ್ಕಾಗಿ ಹಾಜರುಪಡಿಸುವುದು.–** ಬೇರೆ ಸ್ಥಳಗಳಲ್ಲಲ್ಲದೇ ನಿರ್ದಿಷ್ಟ ಸ್ಥಳದಲ್ಲಿ ಸಂದೇಯವಿರುವಂತೆ ಬರೆಯಲಾದ, ಧನಾದೇಶಿಸಲಾದ ಅಥವಾ ಒಪ್ಪಲಾದ ಪ್ರಾಮಿಸರಿ ನೋಟನ್ನು, ವಿನಿಮಯ ಪತ್ರವನ್ನು ಅಥವಾ ಚೆಕ್ಕನ್ನು, ಅದರ ಯಾವನೇ ಪಕ್ಷಕಾರನನ್ನು ಭಾದಿತನನ್ನಾಗಿ ಮಾಡಲು ಸಂದಾಯಕ್ಕಾಗಿ ಅದೇ ಸ್ಥಳದಲ್ಲಿಯೇ ಹಾಜರುಪಡಿಸತಕ್ಕದ್ದು.

**69. ನಿರ್ದಿಷ್ಟ ಸ್ಥಳದಲ್ಲಿ ಸಂದೇಯವಿರುವ ಲಿಖಿತ.–** ನಿರ್ದಿಷ್ಟ ಸ್ಥಳದಲ್ಲಿ ಸಂದೇಯವಿರುವಂತೆ ಬರೆಯಲಾದ ಧನಾದೇಶಿಸಲಾದ ಅಥವಾ ಒಪ್ಪಲಾದ ಪ್ರಾಮಿಸರಿ ನೋಟನ್ನು ಅಥವಾ ವಿನಿಮಯ ಪತ್ರವನ್ನು, ಅದನ್ನು ಬರೆದುಕೊಟ್ಟವನನ್ನು ಅಥವಾ ಧನಾದೇಶಕನನ್ನು ಭಾದಿತನನ್ನಾಗಿ ಮಾಡಲು, ಸಂದಾಯಕ್ಕಾಗಿ ಅದೇ ಸ್ಥಳದಲ್ಲಿಯೇ ಹಾಜರುಪಡಿಸತಕ್ಕದ್ದು.

**70. ಪ್ರತ್ಯೇಕ ಸ್ಥಳವನ್ನು ನಿರ್ದಿಷ್ಟ ಪಡಿಸದಿರುವಲ್ಲಿ ಹಾಜರುಪಡಿಸುವಿಕೆ.–** 68 ಮತ್ತು 69ನೇ ಪ್ರಕರಣಗಳಲ್ಲಿ ಹೇಳಲಾದಂತೆ ಸಂದೇಯವೆಂದು ಮಾಡದೇ ಇರುವ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವನ್ನು, ಸಂದರ್ಭಾನುಸಾರವಾಗಿ ಅದನ್ನು ಬರೆದುಕೊಡುವವನ, ಧನಾದೇಶಿತನ ಅಥವಾ ಒಪ್ಪಿಗೆದಾರನ ವ್ಯವಹಾರ ಸ್ಥಳದಲ್ಲಿ (ಯಾವುದಾದರೂ ಇದ್ದರೆ) ಅಥವಾ ವಾಡಿಕೆಯ ನಿವಾಸ ಸ್ಥಳದಲ್ಲಿ ಸಂದಾಯಕ್ಕಾಗಿ ಹಾಜರುಪಡಿಸತಕ್ಕದ್ದು.

**71. ಬರೆದುಕೊಡುವವನು, ಮುಂತಾದವರಿಗೆ ವ್ಯವಹಾರ ಅಥವಾ ನಿವಾಸದ ಯಾವುದೇ ಗೊತ್ತಾದ ಸ್ಥಳವು ಇರದಿದ್ದಲ್ಲಿ ಹಾಜರುಪಡುವಿಕೆ.–** ವರ್ಗಾವಣೆಯ ಲಿಖಿತವನ್ನು ಬರೆದುಕೊಡುವವನಿಗೆ, ಧನಾದೇಶಿತನಿಗೆ ಅಥವಾ ಒಪ್ಪಿಗೆದಾರನಿಗೆ ಯಾವುದೇ ಗೊತ್ತಾದ ವ್ಯವಹಾರ ಸ್ಥಳ ಅಥವಾ ನಿಯತ ನಿವಾಸ ಸ್ಥಳವಿರದಿದ್ದರೆ, ಮತ್ತು ಒಪ್ಪಿಗೆಗಾಗಿ ಅಥವಾ ಸಂದಾಯಕ್ಕಾಗಿ ಯಾವ ಸ್ಥಳವನ್ನೂ ಲಿಖಿತದಲ್ಲಿ ನಿರ್ದಿಷ್ಟಪಡಿಸಿರದಲ್ಲಿ, ಅಂಥ ಹಾಜರುಪಡಿಸುವಿಕೆಯನ್ನು ಅವನು ಎಲ್ಲಿ ಸಿಕ್ಕುತ್ತಾನೆಯೋ ಅಲ್ಲಿಯೇ ಖುದ್ದಾಗಿ ಮಾಡಬಹುದು.

**72. ಧನಾದೇಶಕನನ್ನು ಭಾದಿತಗೊಳಿಸುವುದಕ್ಕಾಗಿ ಚೆಕ್ಕನ್ನು ಹಾಜರುಪಡಿಸುವುದು.–** 84ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಧನಾದೇಶಕನನ್ನು ಮತ್ತು ಬ್ಯಾಂಕರನ ನಡುವಣ ಸಂಬಂಧವು ಧನಾದೇಶಕನಿಗೆ ಪ್ರತಿಕೂಲವಾಗುವಂತೆ ಬದಲಾವಣೆಯಾಗುವುದಕ್ಕೆ ಪೂರ್ವದಲ್ಲಿಯೇ, ಚೆಕ್ಕನ್ನು ಯಾವ ಬ್ಯಾಂಕಿನ ಮೇಲೆ ಬರೆಯಲಾಗಿದೆಯೋ ಆ ಬ್ಯಾಂಕಿಗೆ ಅದನ್ನು ಹಾಜರುಪಡಿಸತಕ್ಕದ್ದು.

**73. ಯಾವನೇ ಬೇರೆ ವ್ಯಕ್ತಿಯನ್ನು ಭಾದಿತಗೊಳಿಸುವುದಕ್ಕಾಗಿ ಚೆಕ್ಕನ್ನು ಹಾಜರುಪಡಿಸುವುದು.–** ಧನಾದೇಶಕನನ್ನುಳಿದು ಬೇರೆ ಯಾವನೇ ವ್ಯಕ್ತಿಯನ್ನು ಭಾದಿತಗೊಳಿಸುವುದಕ್ಕಾಗಿ ಅಂಥ ವ್ಯಕ್ತಿಯಿಂದ ಚೆಕ್ಕು ವಶಾವಣೆಯಾದ ಅನಂತರ ಯುಕ್ತ ಸಮಯದೊಳಗಾಗಿ ಅದನ್ನು ಹಾಜರುಪಡಿಸತಕ್ಕದ್ದು.

**74. ತಗಾದೆ ಮಾಡಿದಾಗ ಸಂದೇಯವಿರುವ ಲಿಖಿತವನ್ನು ಹಾಜರುಪಡಿಸುವುದು.–** 31ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ತಗಾದೆ ಮಾಡಿದಾಗ ಸಂದೇಯವಿರುವ ವರ್ಗಾವಣೀಯ ಲಿಖಿತವನ್ನು ಧಾರಕನು ಪಡೆದ ಅನಂತರ ಯುಕ್ತ ಸಮಯದೊಳಗಾಗಿ ಸಂದಾಯಕ್ಕೆ ಹಾಜರುಪಡಿಸತಕ್ಕದ್ದು.

**75. ಅಭಿಕರ್ತ, ಮೃತನ ಕಾನೂನು ಸಮ್ಮತ ಪ್ರತಿನಿಧಿ ಅಥವಾ ದಿವಾಳಿಯಾದವನ ಸಮನುದೇಶಿತನಿಂದ ಅಥವಾ ಅವನಿಗೆ ಹಾಜರುಪಡಿಸುವಿಕೆ.–** ಸಂದರ್ಭಾನುಸಾರ ಧನಾದೇಶಿತನು, ಬರೆದುಕೊಟ್ಟವನ ಅಥವಾ ಒಪ್ಪಿಗೆದಾರನ ಸಮ್ಯಕ್ ಪ್ರಾಧಿಕೃತ ಅಭಿಕರ್ತನಿಗೆ, ಅಥವಾ ಧನಾದೇಶಿತನು ಅಥವಾ ಬರೆದುಕೊಟ್ಟವನು ಅಥವಾ ಒಪ್ಪಿಗೆದಾರನು ಮೃತ ಪಟ್ಟಿರುವಲ್ಲಿ, ಅವನ ಕಾನೂನು ಸಮ್ಮತ ಪ್ರತಿನಿಧಿಗೆ ಅಥವಾ ಅವನು ದಿವಾಳಿಯೆಂದು ಘೋಷಿಸಲಾಗಿರುವಲ್ಲಿ, ಅವನ ಸಮನುದೇಶಿತನಿಗೆ ಒಪ್ಪಿಗೆಗಾಗಿ ಅಥವಾ ಸಂದಾಯಕ್ಕಾಗಿ ಹಾಜರುಪಡಿಸಬಹುದು.

**75ಕ. ಒಪ್ಪಿಗಾಗಿ ಅಥವಾ ಸಂದಾಯಕ್ಕಾಗಿ ಹಾಜರುಪಡಿಸುವಿಕೆಯಲ್ಲಿ ವಿಳಂಬಕ್ಕೆ ಕಾರಣ.–** ಒಪ್ಪಿಗಾಗೆ ಅಥವಾ ಸಂದಾಯಕ್ಕಾಗಿ ಹಾಜರುಪಡಿಸುವಲ್ಲಿಯ ವಿಳಂಭವನ್ನು ಅದು ಧಾರಕನ ನಿಯಂತ್ರಣಾತೀತ ಪರಿಸ್ಥಿತಿಗಳಿಂದುಂಟಾಗಿದ್ದರೆ, ಮತ್ತು ಅವನ ತಪ್ಪು, ಅಪವರ್ತನೆ ಅಥವಾ ನಿರ್ಲಕ್ಷ್ಯದ ಕಾರಣದಿಂದಾಗಿರದಿದ್ದರೆ, ಆ ವಿಳಂಬವನ್ನು ಮನ್ನಿಸಲಾಗುವುದು. ವಿಳಂಬದ ಕಾರಣವು ಇಲ್ಲವಾದಾಗ, ಯುಕ್ತಕಾಲದೊಳಗಾಗಿ ಹಾಜರುಪಡಿಸತಕ್ಕದ್ದು.

**76. ಹಾಜರುಪಡಿಸುವುದು ಯಾವಾಗ ಅನಾವಶ್ಯಕ.–** ಈ ಕೆಳಕಂಡ ಸಂದರ್ಭಗಳ ಪೈಕಿ ಯಾವುದರಲ್ಲಿಯೂ ಸಂದಾಯಕ್ಕಾಗಿ ಹಾಜರುಪಡಿಸುವುದರ ಅವಶ್ಯಕತೆ ಇಲ್ಲ, ಮತ್ತು ಹಾಜರುಪಡಿಸಲು ನಿಯತವಾದ ದಿನದಂದು ಲಿಖಿತವು ಅನಾದರಿತವಾಗುತ್ತದೆ.

(ಎ) ಬರೆದುಕೊಡುವವನು, ಧನಾದೇಶಿತನು ಅಥವಾ ಒಪ್ಪಿಗೆದಾರನು ಉದ್ದೇಶಪೂರ್ವಕವಾಗಿ ಹಾಜರುಪಡಿಸುವಿಕೆಯನ್ನು ಪ್ರತಿರೋಧಿಸಿದರೆ; ಅಥವಾ

ಲಿಖಿತವು ಅವನ ವ್ಯವಹಾರ ಸ್ಥಳದಲ್ಲಿ ಸಂದಾಯವಿದ್ದು, ಅವನು ಅಂಥ ಸ್ಥಳವನ್ನು ವ್ಯವಹಾರದ ದಿನದಂದು ವ್ಯವಹಾರದ ಸಾಮಾನ್ಯ ಕಾಲದಲ್ಲಿ ಮುಚ್ಚಿದರೆ; ಅಥವಾ

ಲಿಖಿತವು ಬೇರೊಂದು ನಿರ್ದಿಷ್ಟ ಸ್ಥಳದಲ್ಲಿ ಸಂದಾಯವಿದ್ದು, ಅವನು ಅಥವಾ ಅದನ್ನು ಸಂದಾಯ ಮಾಡಲು ಪ್ರಾಧಿಕೃತನಾದ ಯಾವನೇ ವ್ಯಕ್ತಿಯು ಅಂಥ ಸ್ಥಳದಲ್ಲಿ ವ್ಯವಹಾರದ ಸಾಮಾನ್ಯ ಕಾಲದಲ್ಲಿ ಹಾಜರಾಗಿರದಿದ್ದರೆ; ಅಥವಾ

ಲಿಖಿತವು ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ಸಂದೇಯವಿರದಿದ್ದು, ತಕ್ಕ ಶೋಧನೆಯನ್ನು ನಡೆಸಿದ ಅನಂತರವೂ ಅವನು ದೊರೆಯದಿದ್ದರೆ;

(ಬಿ) ಆ ಬಗ್ಗೆ ಭಾದಿತನಾಗಬೇಕಾದ ಯಾವನೇ ಪಕ್ಷಕಾರನ ವಿರುದ್ಧವಾಗಿ ಹಾಜರುಪಡಿಸದಿರದಿದ್ದಾಗ್ಯೂ ಅವನು ಸಂದಾಯ ಮಾಡಲು ವಚನಬದ್ಧನಾಗಿದ್ದರೆ;

(ಸಿ) ಯಾವನೇ ಪಕ್ಷಕಾರನ ವಿರುದ್ಧವಾಗಿ, ಅವನು ಅವಧಿಪೂರ್ಣವಾದ ಅನಂತರ ಲಿಖಿತವು ಹಾಜರುಪಡಿಸಿಲ್ಲವೆಂಬ ತಿಳಿವಳಿಕೆ ಇದ್ದು,

ಲಿಖಿತದ ಮೇಲೆ ಸಂದೇಯವಿರುವ ಮೊಬಲಗಿಗಾಗಿ ಭಾಗಶಃ ಸಂದಾಯ ಮಾಡಿದರೆ;

ಅಥವಾ ಅದರ ಮೇಲೆ ಸಂದೇಯವಿರುವ ಮೊಬಲಗನ್ನು ಪೂರ್ಣವಾಗಿ ಅಥವಾ ಭಾಗಶಃ ಸಂದಾಯ ಮಾಡಲು ವಾಗ್ದಾನ ಮಾಡಿದರೆ;

ಅಥವಾ ಸಂದಾಯಕ್ಕಾಗಿ ಹಾಜರುಪಡಿಸುವಲ್ಲಿಯ ಯಾವುದೇ ತಪ್ಪುವಿಕೆಯಿಂದ ಲಾಭ ಪಡೆಯುವ ತನ್ನ ಹಾನಿಯಾಗುವುದಿಲ್ಲವಾದರೆ,

(ಡಿ) ಧನಾದೇಶಿತನ ವಿರುದ್ಧವಾಗಿ ಹಾಗೆ ಹಾಜರುಪಡಿಸದೇ ಇರುವುದರಿಂದ ಧನಾದೇಶಿತನಿಗೆ ಹಾನಿಯಾಗುವುದಿಲ್ಲವಾದರೆ,

**77. ಸಂದಾಯಕ್ಕಾಗಿ ಹಾಜರುಪಡಿಸಲಾಗಿರುವ ವಿನಿಮಯ ಪತ್ರವನ್ನು ಕುರಿತು ನಿರ್ಲಕ್ಷ್ಯ ಪೂರ್ವಕವಾಗಿ ವರ್ತಿಸುವ ಬಗ್ಗೆ ಬ್ಯಾಂಕರನ ಹೊಣೆ.–** ಯಾವೊಂದು ನಿರ್ದಿಷ್ಟ ಬ್ಯಾಂಕಿನ ಮೇಲೆ ಸಂದೇಯವಿರುವ ಒಪ್ಪಿಗೆಯಾದ ವಿನಿಮು ಪತ್ರವನ್ನು ಅಲ್ಲಿ ತಕ್ಕ ರೀತಿಯಲ್ಲಿ ಸಂದಾಯಕ್ಕಾಗಿ ಹಾಜರುಪಡಿಸಿದಾಗ ಮತ್ತು ಅದು ಅನಾದರಿತವಾದಾಗ, ಬ್ಯಾಂಕರನು ಧಾರಕನಿಗೆ ನಷ್ಟವನ್ನುಂಟು ಮಾಡುವಂತೆ ವಿನಿಮು ಪತ್ರವನ್ನು ನಿರ್ಲಕ್ಷ್ಯ ಪೂರ್ವಕ ಅನುಚಿತವಾಗಿ ಇಟ್ಟುಕೊಂಡರೆ, ಹಾಗೆ ವರ್ತಿಸಿದರೆ ಅಥವಾ ಅದನ್ನು ವಾಪಸು ಮಾಡಿದರೆ ಅವನು ಅಂಥ ನಷ್ಟಕ್ಕಾಗಿ ಧಾರಕನಿಗೆ ನಷ್ಟ ಭರ್ತಿ ಮಾಡಿಕೊಡತಕ್ಕದ್ದು.

## ಅಧ್ಯಾಯ –VI

## ಸಂದಾಯ ಮತ್ತು ಬಡ್ಡಿಯ ವಿಷಯದಲ್ಲಿ

**78. ಸಂದಾಯವನ್ನು ಯಾರಿಗೆ ಮಾಡತಕ್ಕದ್ದು.–** 82ನೇ ಪ್ರಕರಣದ (ಸಿ)ಖಂಡದ ಉಪಬಂಧಗಳಿಗೊಳಪಟ್ಟು, ಬರೆದುಕೊಟ್ಟವನನ್ನು ಅಥವಾ ಒಪ್ಪಿಗೆದಾರನನ್ನು ಮುಕ್ತಗೊಳಿಸುವುದರ ಸಲುವಾಗಿ, ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನ ಮೇಲೆ ಸಂದೇಯವಿರುವ ಮೊಬಲಗಿನ ಸಂದಾಯವನ್ನು ಲಿಖಿತದ ಧಾರಕನಿಗೆ ಮಾಡತಕ್ಕದ್ದು.

**79. ದರವು ನಿರ್ದಿಷ್ಟವಾಗಿರುವಾಗ ಬಡ್ಡಿ.–** ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರದ ಮೇಲೆ ನಿರ್ದಿಷ್ಟದರದ ಮೇರೆಗೆ ಬಡ್ಡಿಯು ಸಂದೇಯವೆಂದು ವ್ಯಕ್ತವಾಗಿರುವಾಗ ಅದರ ಮೇಲೆ ಸಂದೇಯವಿರುವ ಮೂಲ ಧನದ ಮೊಬಲಗಿನ ಮೇಲೆ ಬಡ್ಡಿಯನ್ನು ನಿರ್ದಿಷ್ಟ ದರದ ಮೇರೆಗೆ ಲಿಖಿತದ ದಿನಾಂಕದಿಂದ, ಅಂಥ ಮೊಬಲಗು ಕೊಡಲಾಗುವ ಅಥವಾ ವಸೂಲಾಗುವವರೆಗೆ ಅಥವಾ ಅಂಥ ಮೊಬಲಗನ್ನು ವಸೂಲು ಮಾಕಡಿಕೊಳ್ಳುವುದರ ಸಲುವಾಗಿ ದಾವೆ ಹೂಡಿದ ಅನಂತರ ನ್ಯಾಯಾಲಯವು ನಿರ್ದೇಶಿಸುವಂಥ ದಿನಾಂಕದವರೆಗೆ ಲೆಕ್ಕಹಾಕತಕ್ಕದ್ದು.

**80. ದರವನ್ನು ನಿರ್ದಿಷ್ಟಪಡಿಸದಿರುವಾಗ ಬಡ್ಡಿ.–** ಲಿಖಿತದಲ್ಲಿ ಬಡ್ಡಿಯ ಯಾವ ದರವನ್ನೂ ನಿರ್ದಿಷ್ಟಪಡಿಸದಿರುವಾಗ, ಲಿಖಿತದ ಯಾರೇ ಪಕ್ಷಕಾರರಲ್ಲಿ ಬಡ್ಡಿಯ ಸಂಬಂಧದಲ್ಲಿ ಏನೇ ಒಪ್ಪಂದವಿದ್ದಾಗ್ಯೂ ಅದರ ಮೇಲೆ ಸಂದೇಯವಿರುವ ಮೊಬಲಗಿನ ಮೇಲೆ ಬಡ್ಡಿಯನ್ನು ಭಾದಿತ ಪಕ್ಷಕಾರನು ಸಂದಾಯ ಮಾಡಲೇಬೇಕಾಗಿದ್ದ ದಿನಾಂಕದಿಂದ, ಅದರ ಮೇಲೆ ಸಂದೇಯವಿರುವ ಅಂಥ ಮೊಬಲಗು ಕೊಡಲಾಗುವ ಅಥವಾ ವಸೂಲಾಗುವವರೆಗೆ ಅಥವಾ ಅಂಥ ಮೊಬಲಗನ್ನು ವಸೂಲು ಮಾಡಿಕೊಳ್ಳುವುದರ ಸಲುವಾಗಿ ದಾವೆ ಹೂಡಿದ ಅನಂತರ ನ್ಯಾಯಾಲಯವು ನಿರ್ದೇಶಿಸುವಂಥ ದಿನಾಂಕದವರೆಗೆ ಪ್ರತಿವರ್ಷ ಶೇಕಡಾ ೧೮ರ ಮೇರೆಗೆ ಲೆಕ್ಕಹಾಕತಕ್ಕದ್ದು.

**ವಿವರಣೆ.–** ಬಾದಿತ ಪಕ್ಷದಾರನು ಸಂದಾಯ ಮಾಡದಿರುವುದರಿಂದಾಗಿ ಅನಾದರಿತವಾದ ಲಿಖಿತದ ಹಿಂಬರಹಗಾರನಾಗಿರುವಲ್ಲಿ, ಅವನು ಅನಾದರದ ನೋಟೀಸನ್ನು ಪಡೆದ ಸಮಯದಿಂದ ಮಾತ್ರ ಬಡ್ಡಿಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುತ್ತಾನೆ.

**81. ಸಂದಾಯ ಮಾಡಿದ ಮೇಲೆ ಲಿಖಿತದ ವಶಾವಣೆ ಅಥವಾ ಅದು ಕಳೆದುಹೋದ ಸಂದರ್ಭದಲ್ಲಿ ನಷ್ಟಪೂರ್ತಿ.**–ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನ ಮೇಲೆ ಸಂದೇಯವಿರುವ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಮತ್ತು ಸಂದಾಯ ಮಾಡಬೇಕೆಂದು ಧಾರಕನಿಂದ ಕೇಳಲ್ಪಟ್ಟ ಯಾವನೇ ವ್ಯಕ್ತಿಯು ತಾನು ಸಂದಾಯ ಮಾಡುವುದಕ್ಕೆ ಪೂರ್ವದಲ್ಲಿ ಆ ಲಿಖಿತವನ್ನು ನೋಡಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಸಂದಾಯ ಮಾಡಿದ ಅನಂತರ ಅದರ ವಶಾವಣೆಯನ್ನು ಹೊಂದಲು ಅಥವಾ ಲಿಖಿತವು ಕಳೆದು ಹೋಗಿರುವಲ್ಲಿ ಅಥವಾ ಅದನ್ನು ಹಾಜರುಪಡಿಸಲು ಆಗದೇ ಇರುವಲ್ಲಿ ಅದರ ಮೇಲೆ ತನ್ನ ವಿರುದ್ಧವಾಗಿರುವ ಮುಂದಿನ ಯಾವುದೇ ಕ್ಲೇಮಿನ ಬಗ್ಗೆ ನಷ್ಟಭರ್ತಿ ಹೊಂದಲು ಹಕ್ಕುಳ್ಳವನಾಗುತ್ತಾನೆ.

## ಅಧ್ಯಾಯ –VII

## ಪ್ರಾಮಿಸರಿ ನೋಟುಗಳ, ವಿನಿಮಯ ಪತ್ರಗಳ ಮತ್ತು ಚೆಕ್ಕುಗಳ ಮೇಲಿನ ಹೊಣೆಗಾರಿಕೆಯಿಂದ ಮುಕ್ತವಾಗುವ ವಿಷಯದಲ್ಲಿ

**82. ಹೊಣೆಗಾರಿಕೆಯಿಂದ ಮುಕ್ತಿ.–** ಅನುಕ್ರಮವಾಗಿ ವರ್ಗಾವಣೀಯ ಲಿಖಿತವನ್ನು ಬರೆದುಕೊಟ್ಟವನು, ಅದರ ಒಪ್ಪಿಗೆದಾರನು, ಅಥವಾ ಹಿಂಬರಹಗಾರನು ಅದರ ಮೇಲಿನ ತನ್ನ ಹೊಣೆಯಿಂದ–

**ರದ್ದುಪಡಿಸುವಿಕೆಯ ಮೂಲಕ.–** (ಕ) ಒಪ್ಪಿಗೆದಾರನ ಅಥವಾ ಹಿಂಬರಹಗಾರನ ಹೆಸರನ್ನು ಅವನನ್ನು ಮುಕ್ತಗೊಳಿಸುವ ಉದ್ದೇಶದಿಂದ ರದ್ದುಪಡಿಸುವ ಅದರ ಧಾರಕನ ಮತ್ತು ಅಂಥ ಧಾರಕನ ಮೂಲಕ ಕ್ಲೇಮು ಮಾಡುವ ಎಲ್ಲ ಪಕ್ಷಕಾರರ ಪ್ರತಿಯಾಗಿ;

**ವಿಮೋಚನೆಯ ಮೂಲಕ.–** (ಬಿ) ಅಂಥ ಬರೆದುಕೊಟ್ಟವನನ್ನು, ಒಪ್ಪಿಗೆದಾರನನ್ನು ಅಥವಾ ಹಿಂಬರಹಗಾರನನ್ನು ಅನ್ಯಥಾ ಮುಕ್ತಗೊಳಿಸುವ ಅದರ ಧಾರಕನಿಗೆ, ಮತ್ತು ಅಂಥ ಮುಕ್ತಿಯ ತಿಳುವಳಿಕೆಯ ಅನಂತರ ಅಂಥ ಧಾರಕನ ಮೂಲಕ ಹಕ್ಕು ಪಡೆಯುವ ಎಲ್ಲ ಪಕ್ಷಕಾರರ ಪ್ರತಿಯಾಗಿ;

ಸಂದಾಯದ ಮೂಲಕ.– () ಲಿಖಿತವು ವಾಹಕನಿಗೆ ಸಂದೇಯವಿದ್ದರೆ, ಅಥವಾ ಖಾಲಿ ಹಿಂಬರಹ ಮಾಡಲ್ಪಟ್ಟಿದ್ದರೆ ಮತ್ತು ಅಂಥ ಬರೆದುಕೊಟ್ಟವನು, ಒಪ್ಪಿಗೆದಾರನು ಅಥವಾ

ಹಿಂಬರಹಗಾರನು ಅದರ ಮೇಲೆ ಸಂದೇಯವಿರುವ ಮೊಬಲಗನ್ನು ಸಮ್ಯಕ್ ಅನುಕ್ರಮದಲ್ಲಿ ಸಂದಾಯ ಮಾಡಿದರೆ, ಅದರ ಎಲ್ಲ ಪಕ್ಷಕಾರರ ಪ್ರತಿಯಾಗಿ ಮುಕ್ತನಾಗುತ್ತಾನೆ.

**83. ಧನಾದೇಶಿತನಿಗೆ ಒಪ್ಪಿಗೆಗಾಗಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚು ಕಾಲಾವಕಾಶ ಕೊಡುವುದರ ಮೂಲಕ ಮುಕ್ತಿ.–** ವಿನಿಮಯ ಪತ್ರದ ಧಾರಕನು ಧನಾದೇಶಿತನಿಗೆ ಅವನು ಅದನ್ನು ಒಪ್ಪಿಬಹುದೇ ಅಥವಾ ಇಲ್ಲವೇ ಎಂಬ ಬಗ್ಗೆ ಪರ್ಯಾಲೋಚಿಸಲು ಸಾರ್ವಜನಿಕ ರಜಾ ದಿನಗಳನ್ನುಳಿದು ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚು ಕಾಲಾವಕಾಶವನ್ನು ಕೊಟ್ಟರೆ ಇಂಥ ಅವಕಾಶಕ್ಕೆ ಸಮ್ಮತಿಸದ ಎಲ್ಲ ಹಿಂದಿನ ಪಕ್ಷಕಾರರು ಅಂಥ ಧಾರಕನ ಬಗ್ಗೆ ಇರುವ ಹೊಣೆಗಾರಿಕೆಯಿಂದ ಮುಕ್ತರಾಗುತ್ತಾರೆ.

**84. ಸಮ್ಯಕ್ ರೀತಿಯಲ್ಲಿ ಚೆಕ್ಕನ್ನು ಹಾಜರು ಪಡಿಸದೇ ಇರುವಾಗ ಮತ್ತು ಅದರಿಂದ ಧನಾದೇಶಿತನಿಗೆ ಹಾನಿಯುಂಟಾಗಿರುವಾಗ.–** (1) ಚೆಕ್ಕನ್ನು ಕೊಟ್ಟ ಮೇಲೆ ಯುಕ್ತ ಕಾಲದೊಳಗಾಗಿ ಅದನ್ನು ಸಂದಾಯಕ್ಕಾಗಿ ಹಾಜರುಪಡಿಸದೇ ಇರುವಲ್ಲಿ, ಮತ್ತು ಧನಾದೇಶಕನು ಅಥವಾ ಯಾವನ ಲೆಕ್ಕದ ಮೇಲೆ ಅದನ್ನು ಧನಾದೇಶಿಸಲಾಗಿದೆಯೋ ಆ ವ್ಯಕ್ತಿಯು, ಅವನ ಮತ್ತು ಬ್ಯಾಂಕರನ ನಡುವೆ ಅದನ್ನು ಹಾಜರುಪಡಿಸಲೇಬೇಕಾದ ಸಮಯದಲ್ಲಿ ಚೆಕ್ಕಿನ ಮೊಬಲಗಿನ ಸಂದಾಯವನ್ನು ಪಡೆಯಲು ಹಕ್ಕುಳ್ಳವನಾಗಿದ್ದಲ್ಲಿ ಮತ್ತು ವಿಳಂಬದಿಂದಾಗಿ ವಾಸ್ತವಿಕವಾಗಿ ಹಾನಿಗೀಡಾಗಿದ್ದರೆ, ಅವನು ಅಂಥ ಹಾನಿಯ ಮಟ್ಟಿಗೆ, ಎಂದರೆ, ಅಂಥ ಧನಾದೇಶಕನು ಅಥವಾ ಆ ವ್ಯಕ್ತಿಯು ಅಂಥ ಚೆಕ್ಕಿನ ಮೊಬಲಗು ಸಂದಾಯ ಮಾಡಲಾಗಿದ್ದರೆ ಆ ಮೊಬಲಗಿಗೆ ಮೀರಿದ ಹಣಕ್ಕಾಗಿ ಬ್ಯಾಂಕರನ ಸಾಲಿಗನಾಗಿರುತ್ತಿದ್ದ ಮಟ್ಟಿಗೆ ಮುಕ್ತನಾಗುತ್ತಾನೆ.

(2) ಯುಕ್ತ ಕಾಲವನ್ನು ನಿರ್ಧರಿಸುವಲ್ಲಿ, ಲಿಖಿತದ ಸ್ವರೂಪ, ವ್ಯಾಪಾರ ಮತ್ತು ಬ್ಯಾಮಕರರ ರೂಢಿ, ಮತ್ತು ಆಯಾ ಸಂದರ್ಭದ ಸಂಗತಿಗಳಿಗೆ ಗಮನ ಕೊಡತಕ್ಕದ್ದು.

(3) ಯಾವ ಚೆಕ್ಕಿನ ಧನಾದೇಶಕನು ಅಥವಾ ವ್ಯಕ್ತಿಯು ಹಾಗೆ ಮುಕ್ತನಾಗಿರುತ್ತಾನೋ ಅಂಥ ಚೆಕ್ಕಿನ ಧಾರಕನು ಮತ್ತು ಅವನಿಂದ ಆ ಮೊಬಲಗನ್ನು ವಸೂಲು ಮಾಡಿಕೊಳ್ಳಲು ಹಕ್ಕುಳ್ಳವನಾಗುತ್ತಾನೆ.

**ದೃಷ್ಟಾಂತಗಳು**

(ಎ) ಕ ನು, 13,000ರೂಪಾಯಿಗಳ ಚೆಕ್ಕನ್ನು ಧನಾದೇಶಿಸುತ್ತಾನೆ, ಮತ್ತು ಚೆಕ್ಕು ಹಾಜರುಪಡಿಸಬೇಕಾಗಿರುವ ಸಮಯದಲ್ಲಿ ಆ ಹಣವನ್ನು ಸಂದಾಯ ಮಾಡಲು ಬ್ಯಾಂಕಿನಲ್ಲಿ ಅವನ ಹಣವಿದೆ, ಚೆಕ್ಕು ಹಾಜರುಪಡಿಸುವುದಕ್ಕೆ ಮುಂಚೆ ಬ್ಯಾಂಕು ದಿವಾಳಿಯಾಗುತ್ತದೆ. ಧನಾದೇಶಕನು ಮುಕ್ತನಾಗುತ್ತಾನೆ; ಆದರೆ ಧಾರಕನು ಚೆಕ್ಕಿನ ಮೊಬಲಗಿಗಾಗಿ ಬ್ಯಾಂಕಿನ ವಿರುದ್ಧ ದಾವೆಯನ್ನು ರುಜುವಾತು ಪಡಿಸಬಹುದು.

(ಬಿ) ಕ ನು, ಅಂಬಾಲದಲ್ಲಿ ಕಲಕತ್ತೆಯ ಒಂದು ಬ್ಯಾಂಕಿಗೆ ಧನಾದೇಶಿಸುತ್ತಾನೆ. ಚೆಕ್ಕನ್ನು ಸಾಮಾನ್ಯ ಕ್ರಮದಲ್ಲಿ ಹಾಜರುಪಡಿಸುವುದಕ್ಕೆ ಮುಂಚೆ ಬ್ಯಾಂಕ್ ದಿವಾಳಿಯಾಗುತ್ತದೆ, ಕ ನು ಮುಕ್ತನಾಗುವುದಿಲ್ಲ. ಏಕೆಂದರೆ ಅವನು ಚೆಕ್ಕನ್ನು ಹಾಜರುಪಡಿಸುವಲ್ಲಿ ಉಂಟಾದ ಯಾವುದೇ ವಿಳಂಬದಿಂದಾಗಿ ಯಾವ ಹಾನಿಗೂ ಈಡಾಗಿಲ್ಲ.

**85. ಆದೇಶದ ಮೇರೆಗೆ ಸಂದೇಯವಿರುವ ಚೆಕ್ಕು.–** (1) ಆದೇಶಾನುಸಾರ ಸಂದೇಯವಿರುವ ಚೆಕ್ಕು ಧನಗ್ರಾಹಿಯಾದ ಅಥವಾ ಅವನ ಪರವಾಗಿ ಹಿಂಬರಹ ಮಾಡಲಾಗಿದೆ ಎಂದು ತಾತ್ಪರ್ಯವಾಗುತ್ತಿರುವಲ್ಲಿ ಸಮ್ಯಕ್ ಅನುಕ್ರಮ ಸಂದಾಯದಿಂದ ಧನಾದೇಶಿತನು ಮುಕ್ತನಾಗುತ್ತಾನೆ.

(2) ಚೆಕ್ಕು ವಾಹಕನಿಗೆ ಸಂದೇಯವೆಂದು ಮೂಲತಃ ವ್ಯಕ್ತವಾಗಿರುವಲ್ಲಿ, ಅದರ ಮೇಲೆ ಕಂಡು ಬರುವ ಹಿಂಬರಹವು ಪೂರ್ಣವಾದುದಾಗಿರಲಿ ಅಥವಾ ಖಲಿಯಾದುದಾಗಿರಲಿ ಅದನ್ನು ಗಮನಿಸದೆ, ಮತ್ತು ಅಂಥ ಯಾವುದೇ ಹಿಂಬರಹವು ಮತ್ತೆ ವರ್ಗಾವಣೆ ಮಾಡುವುದನ್ನು ನಿರ್ಬಂಧಿಸುತ್ತಿದ್ದಾಗ್ಯೂ ಅಥವಾ ನಿಷೇಧಿಸದಿದ್ದಾಗ್ಯೂ ಅದರ ವಾಹಕನಿಗೆ ಸಮ್ಯಕ್ ಅನುಕ್ರಮ ಸಂದಾಯದಿಂದ ಧನಾದೇಶಿತನು ಮುಕ್ತನಾಗುತ್ತಾನೆ.

**85ಕ. ಬ್ಯಾಂಕಿನ ಒಂದು ಶಾಖೆಯಿಂದ ಇನ್ನೊಂದು ಶಾಖೆಯ ಮೇಲೆ ಧನಾದೇಶಿಸಲಾಗಿರುವ ಆದೇಶಾನುಸಾರ ಸಂದೇಯವಿರುವ ಡ್ರಾಫ್ಟುಗಳು.–** ಯಾವುದೇ ಡ್ರಾಫ್ಟು ಎಂದರೆ, ತಗಾದೆ ಹೂಡಿದಾಗ ಆದೇಶಾನುಸಾರ ಸಂದೇಯವಿರುವ ಹಣದ ಮೊಬಲಗಿಗಾಗಿ ಬ್ಯಾಂಕಿನ ಒಂದು ಕಾರ್ಯಾಲಯದಿಂದ ಇನ್ನೊಂದು ಕಾರ್ಯಾಲಯದ ಹೆಸರಿನಲ್ಲಿ ಧನಾದೇಶಿಸಲಾಗುವ ಹಣದ ಸಂದಾಯಕ್ಕಾಗಿ ಮಾಡುವ

ಆದೇಶ. ಅದು ಧನಗ್ರಾಹಿಯಿಂದ ಅಥವಾ ಅವನ ಪರವಾಗಿ ಹಿಂಬರಹ ಮಾಡಿಲಾಗಿದೆ ಎಂದು ತಾತ್ಪರ್ಯವಾಗುವಲ್ಲಿ ಬ್ಯಾಂಕು ಸಮ್ಯಕ್ ಅನುಕ್ರಮ ಸಂದಾಯದಿಂದ ಮುಕ್ತವಾಗುತ್ತದೆ.

**86. ಅನುಮತಿಸದ ಪಕ್ಷಕಾರರು ಸೋಪಾಧಿಕ ಅಥವಾ ಸೀಮಿತ ಒಪ್ಪಿಗೆಯಿಂದ ಮುಕ್ತರಾಗುತಾರೆ.–** ವಿನಿಮಯ ಪತ್ರದ ಧಾರಕನು, ಸೋಪಾಧಿಕ ಒಪ್ಪಿಗೆಗೆ ಅಥವಾ ವಿನಿಮಯ ಪತ್ರದಲ್ಲಿ ಹೇಳಲಾದ ಮೊಬಲಗಿನಲ್ಲಿನ ಭಾಗಕ್ಕೆ ಸೀಮಿತವಾದುದಕ್ಕೆ ಸಮ್ಮತಿಸಿರುವಲ್ಲಿ ಅಥವಾ ಅದು ಸಂದಾಯಕ್ಕೆ ಬೇರೆ ಸ್ಥಳ ಅಥವಾ ಕಾಲವನ್ನು ಪ್ರತಿಸ್ಥಾಪಿಸಿದರೆ, ಅಥವಾ ಅದು ಧನಾದೇಶಿತರು ಪಾಲುಗಾರರಾಗಿದ್ದು ಎಲ್ಲ ಧನಾದೇಶಿತರು ಅದಕ್ಕೆ ಸಹಿ ಮಾಡಿರದಂಥದಾಗಿರುವಲ್ಲಿ ಅಂಥ ಒಪ್ಪಿಗೆಗೆ ಸಮ್ಮತಿಯನ್ನು ಕೊಡದಿರುವ ಎಲ್ಲ ಹಿಂದಿನ ಪಕ್ಷಕಾರರು, ಧಾರಕನಿಂದ ನೋಟೀಸು ಕೊಡಲಾಗಿದ್ದು ಅವರು ಅಂಥ ಒಪ್ಪಿಗೆಗೆ ಸಮ್ಮತಿಯನ್ನು ಕೊಟ್ಟಿದ್ದ ಹೊರತು, ಧಾರಕನು ಮತ್ತು ಅವನ ಪರವಾಗಿ ಕ್ಲೇಮು ಮಾಡುವವರ ಪ್ರತಿಯಾಗಿ ಮುಕ್ತರಾಗುತ್ತಾರೆ.

**ವಿವರಣೆ**– ಒಪ್ಪುವಿಕೆಯು,–

(ಎ) ಅದರಲ್ಲಿ ನಮೂದಿಸಿದ ಘಟನೆಯು ಸಂಭವಿಸುವುದರ ಮೇಲೆ ಸಂದಾಯವು ಅವಲಂಬಿತವಾಗುವುದೆಂದು ಘೋಷಿಸಲಾದ ಷರತ್ತುಗಳಿಗೊಳಪಟ್ಟಿರುವಲ್ಲಿ;

(ಬಿ) ಸಂದಾಯ ಮಾಡಬೇಕೆಂದು ಆದೇಶಿಸಲಾದ ಮೊಬಲಗಿನ ಭಾಗದ ಸಂದಾಯಕ್ಕೆ ಮಾತ್ರ ಹೊಣೆ ಹೊತ್ತಿರುವಲ್ಲಿ;

(ಸಿ) ಆದೇಶದಲ್ಲಿ ಯಾವುದೇ ಸಂದಾಯದ ಸ್ಥಳವನ್ನು ನಿರ್ದಿಷ್ಟಪಡಿಸದೇ ಇರುವಲ್ಲಿ, ನಿರ್ದಿಷ್ಟ ಸ್ಥಳದಲ್ಲಿ ಸಂದಾಯ ಮಾಡಲು ಮತ್ತು ಅನ್ಯಥಾ ಅಥವಾ ಬೇರೆಡೆ ಅಲ್ಲ, ಎಂದು ಹೊಣೆ ಹೊತ್ತಿರುವಲ್ಲಿ; ಅಥವಾ ಆದೇಶದಲ್ಲಿ ಸಂದಾಯದ ಸ್ಥಳವನ್ನು ನಿರ್ದಿಷ್ಟಪಡಿಸಿರುವಲ್ಲಿ, ಬೇರೊಂದು ಸ್ಥಳದಲ್ಲಿ ಸಂದಾಯ ಮಾಡಲು ಮತ್ತು ಅನ್ಯಥಾ ಅಥವಾ ಬೇರೆಡೆ ಅಲ್ಲವೆಂದು ಹೊಣೆ ಹೊತ್ತಿರುವಲ್ಲಿ;

(ಡಿ) ಆದೇಶದ ಮೇರೆಗೆ ಕಾನೂನು ಸಮ್ಮತವಾಗಿ ಸಂದೇಯವಿರುವ ಕಾಲದಲ್ಲಿಯಲ್ಲದೇ ಬೇರೆ ಕಾಲದಲ್ಲಿ ಸಂದಾಯ ಮಾಡಲು ಹೊಣೆ ಹೊತ್ತಿರುವಲ್ಲಿ

– ಸೋಪಾಧಿಕವಾಗಿರುತ್ತದೆ.

**87. ಮುಖ್ಯ ಬದಲಾವಣೆಯ ಪರಿಣಾಮ.–** ವರ್ಗಾವಣೀಯ ಲಿಖಿತದ ಮುಖ್ಯ ಬದಲಾವಣೆಯನ್ನು, ಮೂಲ ಪಕ್ಷಕಾರರ ಏಕೋದ್ದೇಶವನ್ನು ನಿರ್ವಹಿಸುವುದಕ್ಕಾಗಿ ಮಾಡಿದ ಹೊರತು, ಅಂಥ ಬದಲಾವಣೆಯನ್ನು ಮಾಡುವ ಸಮಯದಲ್ಲಿ ಪಕ್ಷಕಾರನಾಗಿರುವ ಮತ್ತು ಅದಕ್ಕೆ ಸಮ್ಮತಿಸದಿರುವ ಯಾವೊಬ್ಬ ವ್ಯಕ್ತಿಯ ವಿರುದ್ಧ ಆ ಬದಲಾವಣೆಯ ಲಿಖಿತವನ್ನು ಶೂನ್ಯಗೊಳಿಸುತ್ತದೆ.

ಹಿಂಬರಹದಾರನಿಂದ ಬದಲಾವಣೆ.– ಮತ್ತು ಅಂಥ ಯಾವುದೇ ಬದಲಾವಣೆಯನ್ನು ಹಿಂಬರಹದಾರನು ಮಾಡಿದ್ದರೆ, ಅವರ ಪ್ರತಿಫಲದ ಸಂಬಂಧದಲ್ಲಿ ಅವನ ಹಿಂಬರಹಗಾರನನ್ನು ತನ್ನ ಬಗ್ಗೆ ಇರುವ ಎಲ್ಲ ಹೊಣೆಯಿಂದ ಅದು ಮುಕ್ತಗೊಳಿಸುತ್ತದೆ.

ಈ ಪ್ರಕರಣದ ಉಪಬಂಧಗಳು 20,49,80 ಮತ್ತು 125ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟಿರುತ್ತವೆ.

**88. ಹಿಂದಿನ ಬದಲಾವಣೆ ಏನೇ ಇದ್ದರೂ ಒಪ್ಪಿಗೆದಾರನು ಅಥವಾ ಹಿಂಬರಹಗಾರನು ಬದ್ಧನು.–** ವರ್ಗಾವಣೀಯ ಲಿಖಿತದ ಒಪ್ಪಿಗೆದಾರನು ಅಥವಾ ಹಿಬರಹಗಾರನು, ಲಿಖಿತದಲ್ಲಿ ಹಿಂದಿನ ಬದಲಾವಣೆ ಏನೇ ಇದ್ದರೂ ತನ್ನ ಒಪ್ಪುವಿಕೆಗೆ ಅಥವಾ ಹಿಂಬರಹಕ್ಕೆ ಬದ್ಧನಾಗಿರುತ್ತಾನೆ.

**89. ಬದಲಾವಣೆಯು ಕಂಡು ಬಾರದಿರುವ ಲಿಖಿತದ ಸಂದಾಯ.–** ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಮುಖ್ಯತಃ ಬದಲಾಯಿಸಲಾಗಿದ್ದು, ಅದು ಹಾಗೆ ಬದಲಾಯಿಸಿದಂತೆ ಕಂಡು ಬಂದರೆ ಇರುವಲ್ಲಿ,

ಅಥವಾ ಚೆಕ್ಕನ್ನು ಸಂದಾಯಕ್ಕಾಗಿ ಹಾಜರುಪಡಿಸಿದಾಗ ಅದರ ಮೇಲೆ ಅಡ್ಡಗೆರೆ ಹಾಕಿರುವಂತೆ ಕಾಣಬರದಿದ್ದಲ್ಲಿ ಅಥವಾ ಅಡ್ಡಗೆರೆ ಹಾಕಲಾಗಿದ್ದು ಅದು ಅಳಿಸಿಹೋದಂತೆ ಕಾಣದಿರುವಲ್ಲಿ,

ಸಂದಾಯ ಮಾಡಲು ಹೊಣೆಗಾರನಾಗಿರುವ ವ್ಯಕ್ತಿ ಅಥವಾ ಬ್ಯಾಂಕರನಿಂದ ಅದರ ಸಂದಾಯವು ಮತ್ತು ಅದನ್ನು ಅದರ ವ್ಯಕ್ತ ಆಶಯದ ಪ್ರಕಾರ ಸಂದಾಯ ಮಾಡುವಿಕೆಯು ಮತ್ತು

ಅನ್ಯಥಾ ಸಮ್ಯಕ್ ಕ್ರಮದ ಸಂದಾಯ ಮಾಡುವಿಕೆಯು ಅದರ ಮೇಲಿರುವ ಎಲ್ಲ ಹೊಣೆಗಳಿಂದ ಅಂಥ ವ್ಯಕ್ತಿಯನ್ನು ಅಥವಾ ಬ್ಯಂಕರನನ್ನು ಮುಕ್ತಗೊಳಿಸತಕ್ಕದ್ದು; ಮತ್ತು ಲಿಖಿತವು ಬದಲಾವಣೆ ಹೊಂದಿದೆ ಎಂಬ ಅಥವಾ ಚೆಕ್ಕಿನ ಮೇಲೆ ಅಡ್ಡಗೆರೆ ಹಾಕಿದೆ ಎಂಬ ಕಾರಣದ ಮೇಲೆ ಅಂಥ ಸಂದಾಯವು ಪ್ರಶ್ನಿಸಲ್ಪಡತಕ್ಕುದಲ್ಲ.

**90. ಒಪ್ಪಿಗೆದಾರನ ಕೈಯಲ್ಲಿರುವ ವಿನಿಮಯ ಪತ್ರದ ಮೇಲೆ ಕ್ರಮ ಕೈಗೊಳ್ಳುವ ಅಧಿಕಾರಗಳ ಕೊನೆಗೊಳ್ಳುವಿಕೆ.–** ವರ್ಗಾವಣೆ ಮಾಡಲಾಗಿರುವ ವಿನಿಮಯ ಪತ್ರವು ಒಪ್ಪಿಗೆದಾರನಿಂದ ಅವಧಿ ಪೂರ್ಣವಾಗುವ ಸಮಯದಲ್ಲಿ ಅಥವಾ ಅನಂತರ ತನ್ನ ಸ್ವಂತ ಅಧಿಕಾರದಲ್ಲಿಯೇ ಹೊಂದಲ್ಪಟ್ಟಿದ್ದರೆ ಅದರ ಮೇಲೆ ಕ್ರಮ ಕೈಗೊಳ್ಳುವ ಎಲ್ಲ ಅಧಿಕಾರಗಳು ಕೊನೆಗೊಳ್ಳುತ್ತವೆ.

## ಅಧ್ಯಾಯ –VIII

## ಅನಾದರದ ನೋಟೀಸಿನ ವಿಷಯದಲ್ಲಿ

**91. ಒಪ್ಪದೇ ಇರುವಿಕೆಯಿಂದಾಗಿ ಅನಾದರ.–** ಧನಾದೇಶಿತನು ಅಥವಾ ಪಾಲುಗಾರರಲ್ಲದ ಹಲವು ಧನಾದೇಶಿತರಲ್ಲಿ ಒಬ್ಬನು ವಿನಿಮಯ ಪತ್ರವನ್ನು ಒಪ್ಪಲು ತಕ್ಕ ರೀತಿಯಲ್ಲಿ ಅಗತ್ಯಪಡಿಸಲಾಗಿರುವಾಗ, ಅದನ್ನು ಒಪ್ಪಲು ತಪ್ಪಿದರೆ, ಅಥವಾ ಹಾಜರುಪಡಿಸುವಿಕೆಯು ಮನ್ನಾ ಆಗಿದ್ದು ಆ ವಿನಿಮಯ ಪತ್ರವನ್ನು ಒಪ್ಪದಿರುವಲ್ಲಿ, ಆ ವಿನಿಮಯ ಪತ್ರವು ಒಪ್ಪದೇ ಇರುವಿಕೆಯ ಮೂಲಕ ಅನಾದರಿತವಾಗಿದೆ ಎಂದು ಹೇಳಲಾಗುತ್ತದೆ.

ಧನಾದೇಶಿತನು ಕರಾರು ಮಾಡಿಕೊಳ್ಳಲು ಅಕ್ಷಮ್ಯನಾಗಿರುವಲ್ಲಿ, ಅಥವಾ ಒಪ್ಪುವಿಕೆಯು ಸೋಪಾಧಿಕವಾಗಿರುವಲ್ಲಿ, ವಿನಿಮಯ ಪತ್ರವು ಅನಾದರಿತವಾಗಿದೆ ಎಂದು ಪರಿಗಣಿಸಲ್ಪಡಬಹುದು.

**92. ಸಂದಾಯ ಮಾಡದಿರುವುದರ ಮೂಲಕ ಅನಾದರ.–** ಪ್ರಾಮಿಸರಿ ನೋಟನ್ನು ಬರೆದುಕೊಡುವವನು, ವಿನಿಮಯ ಪತ್ರದ ಒಪ್ಪಿಗೆದಾರನು, ಅಥವಾ ಚೆಕ್ಕಿನ ಧನಾದೇಶಿತನು ಅದನ್ನು ಸಂದಾಯ ಮಾಡಲು ತಕ್ಕ ರೀತಿಯಲ್ಲಿ ಅಗತ್ಯಪಡಿಸಿರುವಾಗ ಸಂದಾಯ ಮಾಡಲು ತಪ್ಪಿದಲ್ಲಿ, ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕು ಸಂದಾಯ ಮಾಡದಿರುವುದರಿಂದ ಅನಾದರಿತವಾಗಿದೆ ಎಂದು ಹೇಳಲಾಗುತ್ತದೆ.

**93. ಯಾರಿಂದ ಮತ್ತು ಯಾರಿಗೆ ನೋಟೀಸು ಕೊಡಲ್ಪಡತಕ್ಕದ್ದು.–** ಒಪ್ಪದಿರುವಿಕೆ ಅಥವಾ ಸಂದಾಯ ಅಥವಾ ಮಾಡದಿರುವಿಕೆಯಿಂದಾಗಿ ಪ್ರಾಮಿಸರಿ ನೋಟು ವಿನಿಮಯ ಪತ್ರ ಅಥವಾ ಚೆಕ್ಕು ಅನಾದರಿತವಾದಾಗ ಅದರ ಧಾರಕನು ಅಥವಾ ಅದರ ಮೇಲೆ ಹೊಣೆಗಾರನಾಗಿರುವ ಯಾವನೇ ಪಕ್ಷಕಾರನು, ಧಾರಕನು ಯಾರನ್ನು ಅದರ ಮೇಲೆ ಬೇರೆ ಬೇರೆಯಾಗಿ ಹೊಣೆಗಾರನನ್ನಾಗಿ ಮಾಡಲು ಉದ್ದೇಶಿಸಿದ್ದಾನೋ ಅಂಥ ಎಲ್ಲ ಬೇರೆ ಬೇರೆ ಪಕ್ಷಕಾರರಲ್ಲಿ ಒಬ್ಬನಿಗೆ ಅಂಥ ಲಿಖಿತವು ಹಾಗೆ ಅನಾದರಿತವಾಗಿದೆ ಎಂದು ನೋಟೀಸು ಕೊಡತಕ್ಕದ್ದು.

ಈ ಪ್ರಕರಣದಲ್ಲಿರುವುದು ಯಾವುದೂ, ಅನಾದರಿತ ಪ್ರಾಮಿಸರಿ ನೋಟನ್ನು ಬರೆದುಕೊಟ್ಟವನಿಗೆ ಅಥವಾ ಅನಾದರಿತ ವಿನಿಮಯ ಪತ್ರ ಅಥವಾ ಚೆಕ್ಕಿನ ಧನಾದೇಶಿತನಿಗೆ ಅಥವಾ ಒಪ್ಪಿಗೆದಾರನಿಗೆ ನೋಟೀಸು ಕೊಡುವುದನ್ನು ಅವಶ್ಯಕವನ್ನಾಗಿ ಮಾಡುವುದಿಲ್ಲ.

**94. ನೋಟೀಸು ಕೊಡಬಹುದಾದ ರೀತಿ.–** ಅನಾದರದ ನೋಟೀಸನ್ನು, ಅದನ್ನು ಯಾವ ವ್ಯಕ್ತಿಗೆ ಕೊಡಲು ಅಗತ್ಯಪಡಿಸಲಾಗಿದೆಯೋ ಆ ವ್ಯಕ್ತಿಯ ಅಧಿಕೃತ ಅಭಿಕರ್ತನಿಗೆ ಅಥವಾ ಅವನು ಮೃತನಾಗಿದ್ದರೆ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ಅಥವಾ ಅವನು ದಿವಾಳಿಯೆಂದು ಘೋಷಿಸಲಾಗಿರುವಲ್ಲಿ ಅವನ ಸಮನುದೇಶಿತನಿಗೆ ಕೊಡಬಹುದು; ನೋಟೀಸು ಮೌಖಿಕವಾಗಿರಬಹುದು ಅಥವಾ ಬರಹದಲ್ಲಿರಬಹುದು; ಅದು ಬರಹದಲ್ಲಿದ್ದರೆ ಅಂಚೆ ಮೂಲಕ ಅದನ್ನು ಕಳಿಸಬಹುದು ಮತ್ತು ಅದು ಯಾವ ನಮೂನೆಯಲ್ಲಾದರೂ ಇರಬಹುದು; ಆದರೆ ಅದನ್ನು ಯಾವ ಪಕ್ಷಕಾರನಿಗೆ ಕೊಡಲಾಗುತ್ತದೆಯೋ ಆ ಪಕ್ಷಕಾರನಿಗೆ ಲಿಖಿತವು ಅನಾದರಿತವಾಗಿದೆಯೆಂಬುದನ್ನು ಮತ್ತು ಯಾವ ರೀತಿಯಲ್ಲಾಗಿದೆಯೆಂಬುದನ್ನು ಮತ್ತು ಆ ಬಗ್ಗೆ ಅವನು ಹೊಣೆಗಾರನಾಗಿ ಪರಿಗಣಿಸಲ್ಪಡುವನೆಂದು ವ್ಯಕ್ತಿ ಪದಗಳಲ್ಲಿ ಅಥವಾ ಯುಕ್ತ ಉದ್ದೇಶ ಸೂಚನೆಯ ಮೂಲಕ ತಿಳಿಸತಕ್ಕದ್ದು ಮತ್ತು ಅದು ಅನಾದರಿತವಾದ ಯುಕ್ತ ಕಾಲದೊಳಗಾಗಿ ಅದನ್ನು ಯಾವ ಪಕ್ಷಕಾರನಿಗೆ ಕೊಡಬೇಕೆಂದು ಉದ್ದೇಶಿಸಲಾಗಿದೆಯೋ ಅವನಿಗೆ ಅವನ ವ್ಯವಹಾರದ ಸ್ಥಳದಲ್ಲಿ ಅಥವಾ (ಅಂಥ ಪಕ್ಷಕಾರನಿಗೆ ವ್ಯವಹಾರ ಸ್ಥಳವಿರದಿದ್ದಲ್ಲಿ) ಅವನ ನಿವಾಸದ ಸ್ಥಳದಲ್ಲಿ ಕೊಡತಕ್ಕದ್ದು.

ಆ ನೋಟೀಸಿನಲ್ಲಿ ತಕ್ಕ ರೀತಿಯಲ್ಲಿ ವಿಳಾಸ ಬರೆಯಲಾಗಿದ್ದು, ಅದನ್ನು ಅಂಚೆ ಮೂಲಕ ಕಳಿಸಲಾಗಿದ್ದರೆ, ಮತ್ತು ಅದು ತಲುಪದಿದ್ದರೆ ಅಂಥ ತಲುಪದಿರುವಿಕೆಯು ಆ ನೋಟೀಸನ್ನು ಕಾನೂನು ಮಾನ್ಯವಲ್ಲದುದನ್ನಾಗಿ ಮಾಡುವುದಿಲ್ಲ.

**95. ಅನಾದರದ ನೋಟೀಸನ್ನು ಪಡೆಯುವ ಪಕ್ಷಕಾರನು ಅದನ್ನು ರವಾನಿಸತಕ್ಕದ್ದು.–** ಅನಾದರದ ನೋಟೀಸನ್ನು ಪಡೆಯುವ ಯಾವನೇ ಪಕ್ಷಕಾರನು, ಹಿಂದಿನ ಪಕ್ಷಕಾರನನ್ನು ತನಗೆ ಹೊಣೆಗಾರನನ್ನಾಗಿ ಮಾಡಿಕೊಳ್ಳಲು ಅಂಥ ಪಕ್ಷಕಾರನಿಗೆ ಯುಕ್ತ ಕಾಲದೊಳಗಾಗಿ ಅನಾದರದ ನೋಟೀಸನ್ನು ಕೊಡತಕ್ಕದ್ದು.

**96. ಹಾಜರುಪಡಿಸುವ ಅಭಿಕರ್ತ.–** ಲಿಖಿತವನ್ನು ಹಾಜರುಪಡಿಸುವುದಕ್ಕಾಗಿ ಅಭಿಕರ್ತನಲ್ಲಿ ಇಟ್ಟಿರುವಾಗ, ಅಭಿಕರ್ತನು ತನ್ನ ಮೂಲಕರ್ತನಿಗೆ ನೋಟೀಸು ಕೊಡಲು ತಾನು ಅನಾದರದ ನೋಟೀಸನ್ನು ಕೊಡುವ ಧಾರಕನಾಗಿದ್ದರೆ ಎಷ್ಟು ಸಮಯಕ್ಕೆ ಹಕ್ಕುದಾರನಾಗಿರುತ್ತಿದ್ದನೋ ಅಷ್ಟೇ ಸಮಯಕ್ಕೆ ಹಕ್ಕುದಾರನಾಗಿರುತ್ತಾನೆ ಮತ್ತು ಅನಾದರದ ನೋಟೀಸನ್ನು ಕೊಡಲು ಮೂಲಕರ್ತನು ಅಂಥದೇ ಆದ ಮತ್ತಷ್ಟು ಅವಧಿಗೆ ಹಕ್ಕುಳ್ಳವನಾಗಿರುತ್ತಾನೆ.

**97. ನೋಟೀಸನ್ನು ಕೊಡಲಾಗಿರುವ ವ್ಯಕ್ತಿಯು ಮೃತನಾಗಿರುವಾಗ.–** ಅನಾದರದ ನೋಟೀಸನ್ನು ಯಾರಿಗೆ ರವಾನಿಸಲಾಗಿದೆಯೋ ಅವನು ಮೃತನಾಗಿದ್ದಲ್ಲಿ, ಆದರೆ ನೋಟೀಸು ರವಾನಿಸುವ ಪಕ್ಷಕಾರನಿಗೆ ಅವನ ಮರಣದ ಬಗ್ಗೆ ತಿಳಿವಳಿಕೆ ಇಲ್ಲದಿದ್ದಲ್ಲಿ ಆ ನೋಟೀಸು ಸಾಕೆನಿಸುವುದು.

**98. ಅನಾದರದ ನೋಟೀಸು ಯಾವ ಅನವಶ್ಯ.–** ಈ ಕೆಳಕಂಡ ಸಂದರ್ಭಗಳಲ್ಲಿ ಅನಾದರದ ಯಾವುದೇ ನೋಟೀಸಿನ ಅವಶ್ಯಕತೆಯಿಲ್ಲ:–

(ಎ) ನೋಟೀಸಿಗೆ ಹಕ್ಕು ದಾರನಾಗಿರುವ ಪಕ್ಷಕಾರನು ತನಗೆ ನೋಟೀಸು ಬೇಕಾಗಿಲ್ಲವೆಂದು ಹೇಳಿರುವಾಗ;

(ಬಿ) ಧನಾದೇಶಕನನ್ನು ಬಾದಿತಗೊಳಿಸುವ ಸಲುವಾಗಿ, ಅವನು ಸಂದಾಯ ಮಾಡಕೂಡದೆಂದು ಪ್ರತ್ಯಾದೇಶ ಮಾಡಿರುವಾಗ;

(ಸಿ) ನೋಟೀಸು ಇಲ್ಲದ ಕಾರಣದಿಂದಾಗಿ, ಭಾರಿತನಾದ ಪಕ್ಷಕಾರನಿಗೆ ಹಾನಿಯುಂಟಾಗದಿದ್ದಾಗ;

(ಡಿ) ನೋಟೀಸಿಗೆ ಹಕ್ಕುದಾರನಾಗಿರುವ ಪಕ್ಷಕಾರನು, ತಕ್ಕ ಶೋಧನೆಯ ಅನಂತರವೂ ಸಿಕ್ಕದಿದ್ದಾಗ; ಅಥವಾ ನೋಟೀಸು ಕೊಡಲು ಬದ್ಧನಾಗಿರುವ ಪಕ್ಷಕಾರನು, ಬೇರೆ ಯಾವುದೇ ಕಾರಣದಿಂದಾಗಿ, ತನ್ನ ಯಾವುದೇ ತಪ್ಪಿಲ್ಲದೇ ಅದನ್ನು ಕೊಡಲು ಅಶಕ್ತನಾಗಿದ್ದರೆ;

(ಇ) ಒಪ್ಪಿಗೆದಾರನು ಧನಾದೇಶಕನೂ ಆಗಿರುವಾಗ, ಧನಾದೇಶಕರನ್ನು ಭಾದಿತಗೊಳಿಸಲು;

(ಎಫ್) ವರ್ಗಾವಣೀಯವಲ್ಲದ ಪ್ರಾಮಿಸರಿ ನೋಟಿನ ಸಂದರ್ಭದಲ್ಲಿ;

(ಜಿ) ನೋಟೀಸಿಗೆ ಹಕ್ಕುದಾರನಾಗಿರುವ ಪಕ್ಷಕಾರನು ಸಂಗತಿಗಳನ್ನು ತಿಳಿದಿದ್ದೂ, ಲಿಖಿತದ ಮೇಲೆ ಸಂದೇಯವಿರುವ ಮೊಬಲಗನ್ನು ಷರತ್ತಿಲ್ಲದೆ ಸಂದಾಯ ಮಾಡಲು ವಾಗ್ದಾನ ಮಾಡಿದಾಗ.

**99. ಟಿಪ್ಪಣಿ ಮಾಡುವುದು.–** ಒಪ್ಪದಿರುವಿಕೆ ಅಥವಾ ಸಂದಾಯ ಮಾಡದೆ ಇರುವಿಕೆಯಿಂದಾಗಿ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವು ಅನಾದರಿತವಾಗಿರುವಾಗ, ಧಾರಕನು ಅಂಥ ಅನಾದರವನ್ನು ಲಿಖಿತದ ಮೇಲೆ ಅಥವಾ ಅದಕ್ಕೆ ಲಗತ್ತಿಸಿದ ಕಾಗದದ ಮೇಲೆ ಅಥವಾ ಭಾಗಶಃ ಪ್ರತಿಯೊಂದರ ಮೇಲೆ ವಿಪತ್ರ ಪ್ರಮಾಣಿಕನಿಂದ ಟಿಪ್ಪಣಿ ಮಾಡಿಸಬಹುದು.

ಅಂಥ ಟಿಪ್ಪಣಿಯು ಅನಾದರದ ಅನಂತರದ ಯುಕ್ತ ಸಮಯದೊಳಗಾಗಿ ಮಾಡಲ್ಪಡತಕ್ಕದ್ದು ಮತ್ತು ಅನಾದರದ ದಿನಾಂಕ, ಅಂಥ ಅನಾದರಣೆಗೆ ಕೊಡಲಾದ ಕಾರಣ, ಏನಾದರೂ ಇದ್ದರೆ, ಅಥವಾ ಲಿಖಿತವು ವ್ಯಕ್ತವಾಗಿ ಅನಾದರಿತವಾಗದಿರುವಲ್ಲಿ, ಧಾರಕನು ಅದನ್ನು ಏಕೆ ಅನಾದರಿತವಾಗಿದೆ ಎಂದು ಪರಿಗಣಿಸುತ್ತಾನೆಯೋ ಅದರ ಕಾರಣವನ್ನು ಮತ್ತು ವಿಪತ್ರ ಪ್ರಮಾಣಿಕನ ಖರ್ಚುಗಳನ್ನು ಅದು ಉಲ್ಲೇಖಿಸತಕ್ಕದ್ದು.

**100. ಪ್ರಸಾಕ್ಷ್ಯ.–** ಒಪ್ಪದಿರುವಿಕೆ ಅಥವಾ ಸಂದಾಯ ಮಾಡದಿರುವಿಕೆಯಿಂದಾಗಿ ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವು ಅನಾದರಿತವಾಗಿರುವಾಗ, ಧಾರಕನು ಯುಕ್ತ ಸಮಯದೊಳಗಾಗಿ

ವಿಪತ್ರ ಪ್ರಮಾಣಿಕನಿಂದ ಅಂಥ ಅನಾದರದ ಟಿಪ್ಪಣಿಯನ್ನು ಮತ್ತು ಪ್ರಮಾಣನವನ್ನು ಮಾಡಿಸಬಹುದು. ಅಂಥ ಪ್ರಮಾಣಪತ್ರದಲ್ಲಿ ಪ್ರಸಾಕ್ಷ್ಯವೆಂದು ಕರೆಯಲಾಗುತ್ತದೆ.

ಇನ್ನೂ ಉತ್ತಮವಾದ ಭದ್ರತೆಗಾಗಿ ಪ್ರಸಾಕ್ಷ್ಯ.– ವಿನಿಮಯಪತ್ರದ ಒಪ್ಪಿಗೆದಾರನು ದಿವಾಳಿಯಾಗಿರುವಾಗ, ಅಥವಾ ವಿನಿಮಯದ ಪತ್ರ ಅವಧಿಪೂರ್ಣವಾಗುವುದಕ್ಕಿಂತ ಮುಂಚೆಯೇ ಅವನ ಸ್ವತ್ತು ಬಹಿರಂಗವಾಗಿ ದೋಷಾರೋಪಿತವಾಗಿರುವಾಗ, ಧಾರಕನು ಯುಕ್ತ ಸಮಯದೊಳಗಾಗಿ ಒಪ್ಪಿಗೆದಾರನಿಂದ ಹೆಚ್ಚಿನ ಭದ್ರತೆಯನ್ನು ಪಡೆದುಕೊಳ್ಳಲು ವಿಪತ್ರ ಪ್ರಮಾಣಿಕನ ಮೂಲಕ ತಗಾದೆ ಮಾಡಿಸಬಹುದು ಮತ್ತು ಅದು ನಿರಾಕರಿಸಲ್ಪಟ್ಟಲ್ಲಿ ಯುಕ್ತ ಸಮಯದೊಳಗಾಗಿ ಅಂಥ ಸಂಗತಿಗಳನ್ನು ಹಿಂದೆ ಹೇಳಿದ ರೀತಿಯಲ್ಲಿ ಟಿಪ್ಪಣಿ ಮತ್ತು ಪ್ರಮಾಣದ ಮಾಡಿಸಬಹುದು. ಅಂಥ ಪ್ರಮಾಣ ಪತ್ರವು ಹೆಚ್ಚಿನ ಭದ್ರತೆಗಾಗಿ ಮಾಡಿದ ಪ್ರಸಾಕ್ಷ್ಯವೆಂದು ಕರೆಯಲ್ಪಡುತ್ತದೆ.

**101. ಪ್ರಸಾಕ್ಷ್ಯದ ಒಳಾಂಶಗಳು.–** 100ನೇ ಪ್ರಕರಣದ ಮೇರೆಗಿನ ಪ್ರಸಾಕ್ಷ್ಯದಲ್ಲಿ ಕೆಳಕಂಡವುಗಳು ಇರತಕ್ಕದ್ದು:

(ಎ) ಲಿಖಿತವೇ ಆಬಗಲಿ ಅಥವಾ ಲಿಖಿತದ ಮತ್ತು ಅದರ ಮೇಲೆ ಬರೆದಿರುವ ಅಥವಾ ಮುದ್ರಿಸಿರುವ ಪ್ರತಿಯೊಂದು ಲಿಪ್ಯಂತರವೇ ಆಗಲಿ;

(ಬಿ) ಯಾರಿಗಾಗಿ ಮತ್ತು ಯಾರ ವಿರುದ್ಧವಾಗಿ ಲಿಖಿತವನ್ನು ಪ್ರಸಾಕ್ಷ್ಯಮಾಡಲಾಗಿದೆಯೋ ಆ ವ್ಯಕ್ತಿಯ ಹೆಸರು;

(ಸಿ) ವಿಪತ್ರ ಪ್ರಮಾಣಿಕನು ಅಂಥ ವ್ಯಕ್ತಿಯಿಂದ ಸಂದರ್ಭಾನುಸಾರ ಸಂದಾಯ ಅಥವಾ ಒಪ್ಪುವಿಕೆ ಅಥವಾ ಹೆಚ್ಚಿನ ಭದ್ರತೆಯನ್ನು ತಗಾದೆ ಮಾಡಿದ ಬಗ್ಗೆ ಹೇಳಿಕೆ, ಅವನ ಉತ್ತರವೇನಾದರೂ ಇದ್ದರೆ ಅದರ ಶಬ್ದಗಳು ಅಥವಾ ಅವನು ಉತ್ತರ ಕೊಡಲಿಲ್ಲ, ಅಥವಾ ಅವನು ದೊರೆಯಲಿಲ್ಲ ಎಂಬ ಬಗ್ಗೆ ಹೇಳಿಕೆ;

(ಡಿ) ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವು ಅನಾದರಿತವಾಗಿರುವಾಗ, ಅನಾದರದ ಸ್ಥಳ ಮತ್ತು ಸಮಯ ಮತ್ತು ಹೆಚ್ಚಿನ ಭದ್ರತೆಯನ್ನು ಕೊಡಲು ನಿರಾಕರಿಸಲಾಗಿರುವಾಗ, ನಿರಾಕರಣೆಯ ಸ್ಥಳ ಮತ್ತು ಸಮಯ;

(ಇ) ಪ್ರಸಾಕ್ಷ್ಯವನ್ನು ಮಾಡುವ ವಿಪತ್ರ ಪ್ರಮಾಣಿಕನ ಸಹಿ;

(ಎಫ್) ಪತ್ತಿಗಾಗಿ ಒಪ್ಪುವಿಕೆಯ ಅಥವಾ ಪತ್ತಿಗಾಗಿ ಸಂದಾಯದ ಸಂದರ್ಭದಲ್ಲಿ, ಅಂಥ ಒಪ್ಪುವಿಕೆಯು ಅಥವಾ ಸಂದಾಯವು ಯಾವ ವ್ಯಕ್ತಿಯಿಂದ ಅಥವಾ ಯಾವ ವ್ಯಕ್ತಿಗಾಗಿ ಮತ್ತು ಯಾವ ರೀತಿಯಲ್ಲಿ ನೀಡಲಾಯಿತೋ ಮತ್ತು ಕಾರ್ಯರೂಪಕ್ಕೆ ತರಲಾಯಿತೋ ಆ ವ್ಯಕ್ತಿಯ ಹೆಸರು.

ವಿಪತ್ರ ಪ್ರಮಾಣಿಕನು (ಗ)ಖಂಡದಲ್ಲಿ ಹೇಳಲಾದ ತಗಾದೆಯನ್ನು ಖುದ್ದಾಗಿ ಅಥವಾ ಅವನ ಗುಮಾಸ್ತನ ಮೂಲಕ ಅಥವಾ ಒಪ್ಪಂದದ ಅಥವಾ ರೂಢಿಯ ಮೂಲಕ ಹಾಗೆ ಪ್ರಾಧಿಕೃತಗೊಳಿಸಲಾಗಿರುವಲ್ಲಿ, ನೋಂದಾಯಿತ ಪತ್ರದ ಮೂಲಕ ಮಾಡಬಹುದು.

**102. ಪ್ರಸಾಕ್ಷ್ಯದ ನೋಟೀಸು.–** ಪ್ರಾಮಿಸರಿ ನೋಟು ಅಥವಾ ವಿನಿಮಯ ಪತ್ರವನ್ನು ಪ್ರಸಾಕ್ಷಿಸಬೇಕೆಂದು ಕಾನೂನು ಅಗತ್ಯಪಡಿಸಿರುವಾಗ ಅನಾದರದ ನೋಟೀಸಿನ ಬದಲಾಗಿ ಅಂಥ ಪ್ರಸಾಕ್ಷ್ಯದ ನೋಟೀಸನ್ನು, ಅದೇ ರೀತಿಯಲ್ಲಿ ಮತ್ತು ಅದೇ ಷರತ್ತುಗಳಿಗೊಳಪಟ್ಟು ಕೊಡತಕ್ಕದ್ದು; ಆದರೆ ಪ್ರಸಾಕ್ಷ್ಯವನ್ನು ಮಾಡುವ ವಿಪತ್ರ ಪ್ರಮಾಣಿಕನೇ ನೋಟೀಸು ಕೊಡಬಹುದು.

**103. ಒಪ್ಪದಿರುವಿಕೆಯಿಂದಾಗಿ ಅನಾದರವಾದ ತರುವಾಯ ಅಸಂದಾಯದ ಪ್ರಸಾಕ್ಷ್ಯ.–** ಧನಾದೇಶಿತನ ನಿವಾಸವೆಂದು ಹೇಳಿದ ಸ್ಥಳವಲ್ಲದ ಬೇರೆ ಸ್ಥಳದಲ್ಲಿ ಸಂದಾಯವಾಗುವಂತೆ ಧನಾದೇಶಿಸಲ್ಪಟ್ಟ ಮತ್ತು ಒಪ್ಪದಿರುವಿಕೆಯಿಂದಾಗಿ ಅನಾದರಿತವಾದ ಎಲ್ಲ ವಿನಿಮಯ ಪತ್ರಗಳು, ಅವು ಅವಧಿಪೂರ್ಣವಾದಾಗ ಅಥವಾ ಅದಕ್ಕೂ ಮುಂಚಿತವಾಗಿ ಸಂದಾಯ ಮಾಡಲ್ಪಟ್ಟಿದ್ದ ಹೊರತು, ಧನಾದೇಶಿತನಿಗೆ ಮತ್ತೆ ಒಪ್ಪಿಸದೆ ಸಂದಾಯಕ್ಕಾಗಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಆ ಸಂದಾಯಕ್ಕಾಗಿ ಪ್ರಸಾಕ್ಷ್ಯಗೊಳಿಸಲ್ಪಡಬಹುದು.

**104. ವಿದೇಶೀ ವಿನಿಮಯ ಪತ್ರಗಳ ಪ್ರಸಾಕ್ಷ್ಯ.–** ವಿದೇಶೀ ವಿನಿಮಯ ಪತ್ರಗಳನ್ನು ಧನಾದೇಶಿಸಿದ ಸ್ಥಳದ ಕಾನೂನಿನ ಮೇರೆಗೆ ಅಂಥ ಪ್ರಸಾಕ್ಷ್ಯವನ್ನು ಅಗತ್ಯಪಡಿಸಲಾಗಿದ್ದರೆ ಅವುಗಳನ್ನು ಅನಾದರಕ್ಕಾಗಿ ಪ್ರಸಾಕ್ಷ್ಯಗೊಳಿಸಬೇಕು.

**104ಕ. ಟಿಪ್ಪಣಿಯು ಯಾವಾಗ ಪ್ರಸಾಕ್ಷ್ಯಕ್ಕೆ ಸಮವಾಗುವುದು.–** ಈ ಅಧಿನಿಯಮದ ಉದ್ದೇಶಗಳಿಗಾಗಿ, ಒಂದು ವಿನಿಮಯ ಪತ್ರವನ್ನು ಅಥವಾ ಪ್ರಾಮಿಸರಿ ನೋಟನ್ನು ಒಂದು ನಿರ್ದಿಷ್ಟ ಅವಧಿಯೊಳಗಾಗಿ ಅಥವಾ ಮುಂದಿನ ವ್ಯವಹರಣೆ ನಡೆಯುವುದಕ್ಕೆ ಮುಂಚೆ ಪ್ರಸಾಕ್ಷ್ಯಗೊಳಿಸುವುದು ಅಗತ್ಯವಾಗಿರುವಲ್ಲಿ, ಅಂಥ ನಿರ್ದಿಷ್ಟ ಅವಧಿಯು ಮುಗಿಯುವುದರೊಳಗಾಗಿ ಅಥವಾ ಆ ವ್ಯವಹರಣೆ ಹೂಡುವುದಕ್ಕೆ ಮುಂಚಿತವಾಗಿ ಆ ವಿನಿಮಯಪತ್ರವನ್ನು ಪ್ರಸಾಕ್ಷ್ಯಕ್ಕಾಗಿ ಟಿಪ್ಪಣಿಗೊಳಿಸುವುದಷ್ಟೇ ಸಾಕಾಗುತ್ತದೆ; ಮತ್ತು ಆ ತರುವಾಯ ಯಾವುದೇ ಕಾಲದಲ್ಲಿ ಟಿಪ್ಪಣಿಯ ದಿನಾಂಕದಿಂದಲೇ ಎಂಬಂತೆ ಔಪಚಾರಿಕ ಪ್ರಸಾಕ್ಷ್ಯವನ್ನು ಕೊಡಬಹುದು.

## ಅಧ್ಯಾಯ –X

## ಯುಕ್ತ ಕಾಲದ ವಿಷಯದಲ್ಲಿ

**105. ಯುಕ್ತ ಕಾಲ.–** ಒಪ್ಪಿಗೆಗಾಗಿ ಅಥವಾ ಸಂದಾಯಕ್ಕಾಗಿ ಹಾಜರುಪಡಿಸಲು ಅನಾದರಣೆಯ ನೋಟೀಸನ್ನು ಕೊಡಲು ಮತ್ತು ಟಿಪ್ಪಣಿ ಮಾಡಲು ಯುಕ್ತ ಕಾಲವು ಯಾವುದು ಎಂಬುದನ್ನು ನಿರ್ಧರಿಸುವಲ್ಲಿ, ಲಿಖಿತದ ಸ್ವರೂಪವನ್ನು ಮತ್ತು ಅಂಥವೇ ಲಿಖಿತಗಳ ಸಂಬಂಧದಲ್ಲಿ ವ್ಯವಹರಿಸುವ ವಾಡಿಕೆಯ ಕ್ರಮವನ್ನು ಗಮನಿಸತಕ್ಕದ್ದು; ಮತ್ತು ಅಂಥ ಕಾಲವನ್ನು ಲೆಕ್ಕ ಹಾಕುವಲ್ಲಿ ಸರಕಾರಿ ರಜಾ ದಿನಗಳನ್ನು ಹೊರತುಪಡಿಸತಕ್ಕದ್ದು.

**106. ಅನಾದರದ ನೋಟೀಸು ಕೊಡುವುದಕ್ಕೆ ಯುಕ್ತ ಕಾಲ.–** ಧಾರಕನು ಮತ್ತು ಅನಾದರಣೆಯ ನೋಟೀಸು ಕೊಡಲ್ಪಟ್ಟ ಪಕ್ಷಕಾರನು ಸಂದರ್ಭಾನುಸಾರ ಬೇರೆ ಬೇರೆ ಸ್ಥಳಗಳಲ್ಲಿ ವ್ಯವಹಾರ ನಡೆಸುತ್ತಿದ್ದರೆ ಅಥವಾ ವಾಸಿಸುತ್ತಿದ್ದರೆ ಅಂಥ ನೋಟೀಸನ್ನು ಮರು ಟಪಾಲಿನ ಮೂಲಕ ಅಥವಾ ಅನಾದರಣೆಯ ದಿನದ ಮರುದಿನವೇ ಕಳಿಸಿದ್ದರೆ ಅಂಥ ನೋಟೀಸನ್ನು ಯುಕ್ತ ಕಾಲದೊಳಗೆ ಕೊಡಲಾಗಿದೆ.

ಸದರಿ ಪಕ್ಷಕಾರರು ಒಂದೇ ಸ್ಥಳದಲ್ಲಿ ವ್ಯವಹಾರ ನಡೆಸುತ್ತಿದ್ದರೆ ಅಥವಾ ವಾಸಿಸುತ್ತಿದ್ದರೆ, ಅನಾದರಣೆಯ ದಿನದ ಮರುದಿನವೇ ಉದ್ದಿಷ್ಟ ಸ್ಥಳಕ್ಕೆ ತಲುಪುವಂತೆ ಆ ನೋಟೀಸನ್ನು ಕಳಿಸಿದ್ದರೆ ಅಂಥ ನೋಟೀಸನ್ನು ಯುಕ್ತ ಕಾಲದೊಳಗೆ ಕೊಡಲಾಗಿದೆ.

**107. ಅಂಥ ನೋಟೀಸನ್ನು ಕಳಿಸಲು ಯುಕ್ತ ಕಾಲ.–** ಅನಾದರಣೆಯ ನೋಟೀಸನ್ನು ಸ್ವೀಕರಿಸುವ ಮತ್ತು ತತ್ಪೂರ್ವದ ಪಕ್ಷಕಾರನ ವಿರುದ್ಧ ತನ್ನ ಅಧಿಕಾರವನ್ನು ಜಾರಿಗೊಳಿಸಲಿಚ್ಚಿಸುವ ಪಕ್ಷಕಾರನು ಅದು ತನಗೆ ತಲುಪಿದ ಕೂಡಲೇ ತಾನು ಧಾರಕನಾಗಿದ್ದರೆ ನೋಟೀಸ್ ಕೊಡಬೇಕಾಗಿದ್ದ ಸಮಯದೊಳಗಾಗಿ ಅದನ್ನು ಕಳಿಸಿದರೆ ಅಂಥ ನೋಟೀಸನ್ನು ಯುಕ್ತ ಕಾಲದೊಳಗೆ ಕಳಿಸಿದ್ದಾನೆ ಎಂದಾಗುವುದು.

## ಅಧ್ಯಾಯ –XI

### ಪತ್ತಿಗಾಗಿ ಒಪ್ಪಿಗೆ ಮತ್ತು ಸಂದಾಯ ಮತ್ತು ಅವಶ್ಯವಿದ್ದ ಸಂದರ್ಭದಲ್ಲಿ ನಿರ್ದೇಶನಗಳ ವಿಷಯದಲ್ಲಿ

**108. ಪತ್ತಿಗಾಗಿ ಒಪ್ಪುವಿಕೆ.–** ವಿನಿಮಯ ಪತ್ರ ಒಪ್ಪದಿರುವಿಕೆಗಾಗಿ ಅಥವಾ ಹೆಚ್ಚಿನ ಭದ್ರತೆಗಾಗಿ ಟಿಪ್ಪಣಿಗೊಳಿಸಲ್ಪಟ್ಟಾಗ ಅಥವಾ ಪ್ರಸಾಕ್ಷ್ಯಗೊಳಿಸಲ್ಪಟ್ಟಾಗ, ಆ ಬಗ್ಗೆ ಈಗಾಗಲೇ ಹೊಣೆಯುಳ್ಳ ಪಕ್ಷಕಾರನಾಗಿರದ ಯಾವನೇ ವ್ಯಕ್ತಿಯು, ಧಾರಕನ ಸಮ್ಮತಿಯೊಂದಿಗೆ, ವಿನಿಮಯ ಪತ್ರದ ಮೇಲೆ ಬರೆಯುವ ಮೂಲಕ, ಅದರ ಯಾವನೇ ಪಕ್ಷಕಾರನ ಪತ್ತಿಗಾಗಿ ಅದನ್ನು ಒಪ್ಪಬಹುದು.

**109. ಪತ್ತಿಗಾಗಿ ಒಪ್ಪಿಗೆಯನ್ನು ಮಾಡುವುದು ಹೇಗೆ.–** ಪತ್ತಿಗಾಗಿ ಒಪ್ಪಿಕೊಳ್ಳಲು ಇಚ್ಚಿಸುವ ವ್ಯಕ್ತಿಯು ತನ್ನ ಸಹಿಯೊಂದಿಗೆ ವಿನಿಮಯ ಪತ್ರದ ಮೇಲೆ ಬರೆಯುವ ಮೂಲಕ ಧನಾದೇಶಕನ ಅಥವಾ ತಾನು ಹೆಸರಿಸುವ ನಿರ್ದಿಷ್ಟ ಹಿಂಬರಹಗಾರನ ಪತ್ತಿಗಾಗಿ ಅಥವಾ ಸಾಮಾನ್ಯವಾಗಿ ಪತ್ತಿಗಾಗಿ ಆ ಪ್ರಸಾಕ್ಷ್ಯಗೊಳಿಸಲಾದ ವಿನಿಮಯ ಪತ್ರವನ್ನು ಆಕ್ಷೇಪಿಸಿ ತಾನು ಒಪ್ಪಿಕೊಳ್ಳುವುದಾಗಿ ಘೋಷಿಸತಕ್ಕದ್ದು.

**110. ಒಪ್ಪಿಗೆಯು ಯಾರ ಪತ್ತಿಗಾಗಿ ಮಾಡಲಾಗಿದೆ ಎಂಬುದನ್ನು ನಿರ್ದಿಷ್ಟಪಡಿಸದೆ ಇರುವಾಗ.–** ಒಪ್ಪಿಗೆಯಲ್ಲಿ ಯಾವ ಪತ್ತಿಗಾಗಿ ಮಾಡಲಾಗಿದೆ ಎಂಬುದನ್ನು ವ್ಯಕ್ತಪಡಿಸದಿದ್ದರೆ ಧನಾದೇಶಕನ ಪತ್ತಿಗಾಗಿ ಅದು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

**111. ಪತ್ತಿಗಾಗಿ ಒಪ್ಪುವವನ ಹೊಣೆ.–** ಪತ್ತಿಗಾಗಿ ಒಪ್ಪುವವನು ತಾನು ಯಾರ ಪತ್ತಿಗಾಗಿ ಒಪ್ಪುತ್ತಾನೋ ಅವನ ತರುವಾಯದ ಎಲ್ಲ ಪಕ್ಷಕಾರರಿಗೆ ಧನಾದೇಶಿತನು ವಿನಿಮಯ ಪತ್ರದ ಹಣ ಸಂದಾಯ ಮಾಡದಿದ್ದರೆ ತಾನು ಸಂದಾಯ ಮಾಡಲು ಬದ್ಧನಾಬಗಿರುವನು ಮತ್ತು ಅಂಥ ಒಪ್ಪಿಗೆಯ ಪರಿಣಾಮವಾಗಿ ಪತ್ತಿಗಾಗಿ ಒಪ್ಪುವವನಿಗೆ ಉಂಟಾದ ಎಲ್ಲ ನಷ್ಟಗಳ ಅಥವಾ ಹಾನಿಯ ಬಗ್ಗೆ ಅಂಥ ಪಕ್ಷಕಾರನು ಮತ್ತು ಹಿಂದಿನ ಎಲ್ಲ ಪಕ್ಷಕಾರರು ಅವರವರ ಸ್ಥಾನಕ್ಕನುಸಾರವಾಗಿ ಪರಿಹಾರ ಒದಗಿಸಲು ಹೊಣೆಗಾರರಾಗಿರುವರು.

**112. ಪತ್ತಿಗಾಗಿ ಒಪ್ಪುವವನನ್ನು ಯಾವಾಗ ಭಾದಿತಗೊಳಿಸಬಹುದು.–** ವಿನಿಮಯ ಪತ್ರವನ್ನು ಅದರ ಅವಧಿ ಪೂರ್ಣವಾದಾಗ ಸಂದಾಯಕ್ಕಾಗಿ ಧನಾದೇಶಿತನಿಗೆ ಹಾಜರುಪಡಿಸಲಾಗಿದ್ದ ಮತ್ತು ಅವನಿಂದ ಅನಾದರಿತವಾಗಿದ್ದ ಮತ್ತು ಅಂಥ ಅನಾದರಣೆಗಾಗಿ ಟಿಪ್ಪಣಿ ಅಥವಾ ಪ್ರಸಾಕ್ಷ್ಯಗೊಳಿಸಲಾಗಿದ್ದ ಹೊರತು ಪತ್ತಿಗಾಗಿ ಒಪ್ಪುವವನನ್ನು ಭಾರಿತಗೊಳಿಸಲಾಗುವುದಿಲ್ಲ.

**113. ಪತ್ತಿಗಾಗಿ ಸಂದಾಯ.–** ವಿನಿಮಯ ಪತ್ರವನ್ನು ಒಪ್ಪಿದಿರುವಿಕೆಗಾಗಿ ಟಿಪ್ಪಣಿ ಮಾಡಿದಾಗ ಅಥವಾ ಪ್ರಸಾಕ್ಷ್ಯಗೊಳಿಸಿದಾಗ ಅದರ ಹಣವನ್ನು ಸಂದಾಯ ಮಾಡಲು ಹೊಣೆಗಾರನಾದ ಯಾವನೇ ಪಕ್ಷಕಾರನ ಪತ್ತಿಗಾಗಿ ಅದನ್ನು ಯಾವನೇ ವ್ಯಕ್ತಿಯು ಸಂದಾಯ ಮಾಡಬಹುದು; ಪರಂತು, ಹಾಗೆ ಸಂದಾಯಮಾಡುವ ವ್ಯಕ್ತಿಯು ಅಥವಾ ಈ ಸಂಬಂಧದಲ್ಲಿನ ಅವನ ಅಭಿಕರ್ತನು ತಾನು ಯಾವ ಪಕ್ಷಕಾರನ ಪತ್ತಿಗಾಗಿ ಸಂದಾಯ ಮಾಡುತ್ತಿರುವನೆಂಬುದನ್ನು ವಿಪತ್ರ ಪ್ರಮಾಣಿಕನ ಮುಂಚೆ ಆ ಮುಂಚೆಯೇ ಘೋಸಿರಬೇಕು, ಮತ್ತು ವಿಪತ್ರ ಪ್ರಮಾಣಿಕನು ಅಂಥ ಘೋಷಣೆಯನ್ನು ಅಭಿಲೇಖಿಸಿರಬೇಕು.

**114. ಪತ್ತಿಗಾಗಿ ಸಂದಾಯ ಮಾಡುವವನ ಅಧಿಕಾರ.–** ಹಾಗೆ ಸಂದಾಯ ಮಾಡುವ ಯಾವನೇ ವ್ಯಕ್ತಿಯು ಆ ವಿನಿಮಯ ಪತ್ರದ ಸಂಬಂಧದಲ್ಲಿ ಅಂಥ ಸಂದಾಯ ಮಾಡುವ ಸಮಯದಲ್ಲಿ ಧಾರಕನಿಗಿರುವ ಎಲ್ಲ ಅಧಿಕಾರಗಳಿಗೆ ಹಕ್ಕುಳ್ಳವನಾಗಿರುತ್ತಾನೆ, ಮತ್ತು ತಾನು ಯಾವ ಪಕ್ಷಕಾರನ ಪತ್ತಿಗಾಗಿ ಸಂದಾಯ ಮಾಡುವನೋ ಅವನಿಂದ ಹಾಗೆ ಸಂದಾಯ ಮಾಡಿದ ಎಲ್ಲ ಹಣವನ್ನು ಅದರ ಮೇಲಿನ ಬಡ್ಡಿ ಮತ್ತು ಅಂಥ ಸಂದಾಯವನ್ನು ಮಾಡುವಲ್ಲಿ ತಗುಲಿದ ಎಲ್ಲ ಯೋಗ್ಯ ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಬಹುದು.

**115. ಅವಶ್ಯಕ ಸಂದರ್ಭದ ಧನಾದೇಶಿತ.–** ಯಾವುದೇ ವಿನಿಮಯ ಪತ್ರದಲ್ಲಿ ಅಥವಾ ಅದರ ಮೇಲಿನ ಯಾವುದೇ ಹಿಂಬರಹದಲ್ಲಿ ಅವಶ್ಯಕ ಸಂದರ್ಭದ ಧನಾದೇಶಿತನನ್ನು ಹೆಸರಿಸಲಾಗಿರುವಲ್ಲಿ ಆ ವಿನಿಮಯ ಪತ್ರವು ಅಂಥ ಧನಾದೇಶಿತನಿಂದ ಅನಾದರಿತವಾಗುವವರೆಗೆ ಅನಾದರಿತವಾಗುವುದಿಲ್ಲ.

**116. ಪ್ರಸಾಕ್ಷ್ಯವಿಲ್ಲದೆ ಒಪ್ಪಿಗೆ ಮತ್ತು ಸಂದಾಯ.–** ಅವಶ್ಯಕ ಸಂದರ್ಭದ ಧನಾದೇಶಿತನು ಮುಂಚಿತವಾಗಿ ಪ್ರಸಾಕ್ಷ್ಯಗೊಳಿಸದೆ ವಿನಿಮಯ ಪತ್ರವನ್ನು ಒಪ್ಪಿಕೊಳ್ಳಬಹುದು ಮತ್ತು ಅದನ್ನು ಸಂದಾಯ ಮಾಡಬಹುದು.

## ಅಧ್ಯಾಯ –XII

## ನಷ್ಟ ಪರಿಹಾರದ ವಿಷಯದಲ್ಲಿ

**117. ನಷ್ಟ ಪರಿಹಾರದ ಬಗೆಗಿನ ನಿಯಮಗಳು.**–ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚೆಕ್ಕಿನ ಧಾರಕನಿಗೆ ಅಥವಾ ಯಾವನೇ ಹಿಂಬರಹಗಾರನಿಗೆ ಹೊಣೆಗಾರನಾಗಿರುವ ಯಾವನೇ ಪಕ್ಷಕಾರನಿಂದ ಅವು ಅನಾದರಿತವಾದ ಸಂದರ್ಭದಲ್ಲಿ ಸಂದೇಯವಿರುವ ನಷ್ಟ ಪರಿಹಾರವನ್ನು ಈ ಕೆಳಕಂಡ ನಿಯಮಾನುಸಾರ ನಿರ್ಧರಿಸತಕ್ಕದ್ದು:–

(ಎ) ಲಿಖಿತದ ಮೇಲೆ ಬರಬೇಕಾದ ಮೊಬಲಗನ್ನು ಆ ಲಿಖಿತವನ್ನು ಹಾಜರುಪಡಿಸುವ, ಟಿಪ್ಪಣಿ ಮಾಡುವ ಮತ್ತು ಪ್ರಸಾಕ್ಷ್ಯಗೊಳಿಸುವ ಸಂಬಂಧದಲ್ಲಿ ತಗುಲಿದ ಯೋಗ್ಯ ವೆಚ್ಚಗಳೊಂದಿಗೆ ಪಡೆಯಲು ಧಾರಕನು ಹಕ್ಕುಳ್ಳವನಾಗಿರುವನು;

(ಬಿ) ಲಿಖಿತವು ಸಂದೇಯವಿರುವ ಸ್ಥಳವಲ್ಲದ ಬೇರೆ ಸ್ಥಳದಲ್ಲಿ ಭಾರಿತ ವ್ಯಕ್ತಿಯು ವಾಸಿಸುವಾಗ ಧಾರಕನು ಆ ಎರಡು ಸ್ಥಳಗಳಲ್ಲಿ ಚಾಲ್ತಿಯಲ್ಲಿರುವ ಪರಸ್ಪರ ವಿನಿಮಯ ದರದ ಪ್ರಕಾರ ಅಂಥ ಹಣವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ;

(ಸಿ) ಹಿಂಬರಹಗಾರನು ಹೊಣೆಗಾರನಾಗಿದ್ದು ಅದರ ಮೇಲೆ ಸಲ್ಲಬೇಕಾದ ಹಣವನ್ನು ಸಲ್ಲಿಸಿದ್ದರೆ, ಅದನ್ನು ಸಂದಾಯ ಮಾಡಿದ ದಿನಾಂಕದಿಂದ ಅದರ ನೀಡಿಕೆಯ ಅಥವಾ ವಸೂಲಿಯ ದಿನಾಂಕದವರೆಗೆ ಅದಕ್ಕೆ ಸಾಲಿಯಾನ ಶೇಕಡಾ ಆರರಂತೆ ಬಡ್ಡಿ ಸೇರಿಸಿ ಅನಾದರಣೆ ಮತ್ತು ಸಂದಾಯದಿಂದ ಉಂಟಾದ ಎಲ್ಲ ವೆಚ್ಚಗಳೊಂದಿಗೆ ಅವನು ಹಾಗೆ ಸಂದಾಯ ಮಾಡಿದ ಮೊಬಲಗಿಗೆ ಹಕ್ಕುಳ್ಳವನಾಗಿರುತ್ತಾನೆ;

(ಡಿ) ಬಾಧಿತ ವ್ಯಕ್ತಿಯು ಮತ್ತು ಅಂಥ ಹಿಂಬರಹಗಾರನು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಿದ್ದಾಗ ಹಿಂಬರಹದಾರನು ಆ ಎರಡೂ ಸ್ಥಳಗಳಲ್ಲಿ ಚಾಲ್ತಿಯಲ್ಲಿರುವ ಪರಸ್ಪರ ವಿನಿಮಯ ದರದ ಮೇರೆಗೆ ಅಂಥ ಹಣವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ;

(ಇ) ನಷ್ಟ ಪರಿಹಾರಕ್ಕೆ ಹಕ್ಕುದಾರನಾದ ಪಕ್ಷಕಾರನು ತನಗೆ ಬರಬೇಕಾದ ಹಣಕ್ಕಾಗಿ ತಾನು ವಹಿಸಿದ ಎಲ್ಲ ಯೋಗ್ಯ ವೆಚ್ಚಗಳೊಂದಿಗೆ ನೋಡಿದ ಕೂಡಲೇ ಅಥವಾ ತಗಾದೆಯ ಮೇಲೆ ಸಂದೇಯವಾಗುವಂತೆ ತನಗೆ ನಷ್ಟ ಪರಿಹಾರ ಕೊಡಲು ಹೊಣೆಗಾರನಾದ ಪಕ್ಷಕಾರನ ಮೇಲೆ ವಿನಿಮಯ ಪತ್ರವನ್ನು ಧನಾದೇಶಿಸಬಹುದು. ಅನಾದರಿತವಾದ ಲಿಖಿತವು ಮತ್ತು ಅದರ ಪ್ರಸಾಕ್ಷ್ಯವು (ಯಾವುದಾದರೂ ಇದ್ದರೆ) ಅಂಥ ವಿನಿಮಯ ಪತ್ರದೊಂದಿಗೆ ಇರತಕ್ಕದ್ದು. ಅಂಥ ವಿನಿಮಯ ಪತ್ರವು

ಅನಾದರಿತವಾದರೆ ಅದನ್ನು ಅನಾದರಿಸುವ ಪಕ್ಷಕಾರನು ಮೂಲ ವಿನಿಮಯ ಪತ್ರದ ರೀತಿಯಲ್ಲಿಯೇ ಆ ಬಗ್ಗೆ ನಷ್ಟ ಪರಿಹಾರ ಕೊಡಲು ಹೊಣೆಗಾರನಾಗಿರುವನು.

## ಅಧ್ಯಾಯ –XIII

## ಸಾಕ್ಷ್ಯದ ವಿಶೇಷ ನಿಯಮಗಳು

**1118. ವಗಾವಣೀಯ ಲಿಖಿತಗಳ ಬಗ್ಗೆ ಪೂರ್ವ ಭಾವನೆಗಳು.**–ತದ್ವಿರುದ್ಧ ರುಜುವಾತು ಆಗುವವರೆಗೆ ಕೆಳಕಂಡ ಪೂರ್ವ ಭಾವನೆಗಳನ್ನು ಮಾಡತಕ್ಕದ್ದು.

(ಎ) **ಪ್ರತಿಫಲದ ವಿಷಯದಲ್ಲಿ.**– ಪ್ರತಿಯೊಂದು ವರ್ಗಾವಣೀಯ ಲಿಖಿತವು ಪ್ರತಿಫಲಕ್ಕಾಗಿ ಬರೆಯಲಾಗಿದ್ದಿತು ಅಥವಾ ಪ್ರತಿಯೊಂದು ಲಿಖಿತವು ಅದನ್ನು ಒಪ್ಪಿಕೊಂಡಾಗ, ಹಿಂಬರಹ ಮಾಡಿದಾಗ, ವರ್ಗಾವಣೆ ಮಾಡಿದಾಗ ಅಥವಾ ವರ್ಗಾಯಿಸಿದಾಗ ಅದನ್ನು ಪ್ರತಿಫಲಕ್ಕಾಗಿ ಒಪ್ಪಿಕೊಳ್ಳಲಾಗಿದ್ದಿತು, ಹಿಂಬರಹ ಮಾಡಲಾಗಿದ್ದಿತು, ವರ್ಗಾವಣೆ ಮಾಡಲಾಗಿದ್ದಿತು ಅಥವಾ ವರ್ಗಾಯಿಸಲಾಗಿದ್ದಿತು.

(ಬಿ) **ದಿನಾಂಕದ ಬಗ್ಗೆ.**– ದಿನಾಂಕವನ್ನು ಹೊಂದಿರುವ ಪ್ರತಿಯೊಂದು ವರ್ಗಾವಣೀಯ ಲಿಖಿತವು ಅಂಥ ದಿನಾಂಕದಂದು ಬರೆಯಲಾಗಿದ್ದಿತು ಅಥವಾ ಧನಾದೇಶಿಸಲಾಗಿದ್ದಿತು;

(ಸಿ) ಒಪ್ಪಿಗೆ ಸಮಯದ ಬಗ್ಗೆ.– ಒಪ್ಪಿಗೆಯಾದ ಪ್ರತಿಯೊಂದು ವಿನಿಮಯ ಪತ್ರವೂ ಅದರ ದಿನಾಂಕದ ಅನಂತರ ಯುಕ್ತ ಸಮಯದೊಳಗಾಗಿ ಮತ್ತು ಅದರ ಅವಧಿ ಪೂರ್ಣವಾಗುವುದಕ್ಕೆ ಮುಂಚೆಯೇ ಒಪ್ಪಲಾಗಿದ್ದತು;

(ಡಿ) ವರ್ಗಾಯಿಸುವ ಸಮಯದ ಬಗ್ಗೆ.– ವರ್ಗಾವಣೀಯ ಲಿಖಿತದ ಪ್ರತಿಯೊಂದು ವರ್ಗಾಯಿಸುವಿಕೆಯನ್ನು ಅದರ ಅವಧಿಪೂರ್ಣವಾಗುವುದಕ್ಕೆ ಮುಂಚೆಯೇ ಮಾಡಲಾಗಿದ್ದಿತು;

(ಇ) ಹಿಂಬರಹಗಳ ಕ್ರಮದ ಬಗ್ಗೆ.– ವರ್ಗಾವಣೀಯ ಲಿಖಿತದ ಮೇಲೆ ಕಾಣಬರುವ ಹಿಂಬರಹಗಳನ್ನು ಅವು ಕಾಣಬರುವ ಕ್ರಮದಲ್ಲಿಯೇ ಮಾಡಲಾಗಿದ್ದಿತು;

(ಎಫ್) **ಸ್ಟಾಂಪಿನ ಬಗ್ಗೆ.–** ಕಳೆದು ಹೋದ ಪ್ರಾಮಿಸರಿ ನೋಟು, ವಿನಿಮಯಪತ್ರ ಅಥವಾ ಚೆಕ್ಕಿಗೆ ಸರಿಯಾಗಿ ಸ್ಟಾಂಪ್ ಹಾಕಲಾಗಿದ್ದಿತು;

(ಜಿ) **ಧಾರಕನು ಸಮ್ಯಕ್ ಅನುಕ್ರಮ ಧಾರಕನಾಗಿರುತ್ತಾನೆಂದು.–** ವರ್ಗಾವಣೀಯ ಲಿಖಿತದ ಧಾರಕನು ಸಮ್ಯಕ್ ಅನುಕ್ರಮ ಧಾರಕನಾಗಿರುತ್ತಾನೆ; ಪರಂತು, ಒಂದು ಅಪರಾಧ ಅಥವಾ ಮೋಸದಿಂದ ಲಿಖಿತವನ್ನು ಅದರ ಕಾನೂನುಬದ್ಧ ಮಾಲೀಕನಿಂದ ಅಥವಾ ಅದನ್ನು ಕಾನೂನುಬದ್ಧ ಅಭಿರಕ್ಷೆಯಲ್ಲಿಟ್ಟುಕೊಂಡಿರುವ ಯಾವನೇ ವ್ಯಕ್ತಿಯಿಂದ ಪಡೆದುಕೊಳ್ಳಲಾಗಿರುವಲ್ಲಿ, ಅಥವಾ ಅಪರಾಧ ಅಥವಾ ಮೋಸದಿಂದ ಅಥವಾ ಕಾನೂನು ವಿರುದ್ಧವಾದ ಪ್ರತಿಫಲಕ್ಕಾಗಿ ಅದನ್ನು ಬರೆದುಕೊಟ್ಟವನಿಂದ ಅಥವಾ ಅದರ ಒಪ್ಪಿಗೆದಾರನಿಂದ ಪಡೆದುಕೊಳ್ಳಲಾಗಿರುವಲ್ಲಿ, ಧಾರಕನು ಸಮ್ಯಕ್ ಅನುಕ್ರಮಧಾರಕನಾಗಿದ್ದಾನೆಂದು ರುಜುವಾತು ಪಡಿಸುವ ಭಾರವು ಅವನ ಮೇಲೆ ಇರುತ್ತದೆ.

**119. ಪ್ರಸಾಕ್ಷ್ಯದ ರುಜುವಾತಿನ ಮೇಲೆ ಪೂರ್ವ ಭಾವನೆ.–** ಅನಾದರಿತವಾದ ಲಿಖಿತದ ಮೇಲಿನ ದಾವೆಯಲ್ಲಿ, ಪ್ರಸಾಕ್ಷ್ಯದ ಬಗ್ಗೆ ರುಜುವಾತಾದ ಮೇಲೆ ಅನಾದರದ ಸಂಗತಿಯು ನಾಸಾಬೀತು ಆದ ಹೊರತು ಮತ್ತು ಅವರೆಗೆ ಅಂಥ ಅನಾದರದ ಸಂಗತಿಯನ್ನು ನ್ಯಾಯಾಲಯವು ಪೂರ್ವ ಭಾವನೆ ಮಾಡತಕ್ಕದ್ದು.

**120. ಲಿಖಿತದ ಮೂಲ ಕಾನೂನು ಮಾನ್ಯತೆಯನ್ನು ನಿರಾಕರಿಸುವುದರ ವಿರುದ್ಧ ವಿಬಂಧ.–** ಪ್ರಾಮಿಸರಿ ನೋಟನ್ನು ಬರೆದುಕೊಟ್ಟ ಯಾವ ವ್ಯಕ್ತಿಗೂ ಮತ್ತು ವಿನಿಮಯ ಪತ್ರದ ಅಥವಾ ಚೆಕ್ಕಿನ ಯಾವನೇ ಧನಾದೇಶಕನಿಗೂ, ಮತ್ತು ಧನಾದೇಶಕನ ಪತ್ತಿಗಾಗಿ ವಿನಿಮಯ ಪತ್ರವನ್ನು, ಒಪ್ಪುವ ಯಾವನೇ ವ್ಯಕ್ತಿಗೂ ಅದರ ಮೇಲೆ ಸಮ್ಯಕ್ ಅನುಕ್ರಮ ಧಾರಕನು ಹೂಡಿದ ದಾವೆಯಲ್ಲಿ ಮೂಲತಃ ಮಾಡಲಾದ ಅಥವಾ ಧನಾದೇಶಿಸಲಾದ ಲಿಖಿತದ ಕಾನೂನು ಮಾನ್ಯತೆಯನ್ನು ನಿರಾಕರಿಸಲು ಅವಕಾಶವಿರತಕ್ಕದ್ದಲ್ಲ.

**121. ಹಿಂಬರಹ ಮಾಡಲು ಧನಗ್ರಾಹಿಯ ಸಾಮರ್ಥ್ಯದ ನಿರಾಕರಣೆಯ ವಿರುದ್ಧ ವಿಬಂಧ.–** ಪ್ರಾಮಿಸರಿ ನೋಟನ್ನು ಬರೆದುಕೊಟ್ಟ ಯಾವ ವ್ಯಕ್ತಿಗೂ ಮತ್ತು ಆದೇಶಾನುಸಾರ ಸಂದೇಯವಿರುವ ವಿನಿಮಯಪತ್ರದ ಯಾವ ಒಪ್ಪಿಗೆದಾರನಿಗೂ, ಸಮ್ಯಕ್ ಅನುಕ್ರಮಧರಕನು ಅದರ ಮೇಲೆ ಹೂಡಿದ

ದಾವೆಯಲ್ಲಿ, ಪ್ರಾಮಿಸರಿ ನೋಟಿನ ಅಥವಾ ವಿಮಯ ಪತ್ರದ ದಿನಾಂಕದಂದು ಅದನ್ನು ಹಿಂಬರಹ ಮಾಡಲು ಇರುವ ಧನಗ್ರಾಹಿಯ ಸಾಮರ್ಥ್ಯವನ್ನು ನಿರಾಕರಿಸಲು ಅವಕಾಶವಿರತಕ್ಕದ್ದಲ್ಲ.

**122. ಹಿಂದಿನ ಪಕ್ಷಕಾರನ ಸಹಿ ಅಥವಾ ಸಾಮರ್ಥ್ಯದ ನಿರಾಕರಣೆಯ ವಿರುದ್ಧ ವಿಬಂಧ.–** ವರ್ಗಾವಣೆಯ ಲಿಖಿತದ ಯಾವ ಹಿಂಬರಹಗಾರನಿಗೂ, ಅದರ ಮೇಲೆ ತರುವಾಯದ ಧಾರಕನು ಹೂಡಿದ ದಾವೆಯಲ್ಲಿ, ಯಾವನೇ ಹಿಂದಿನ ಪಕ್ಷಕಾರನ ಸಹಿಯನ್ನು ಅಥವಾ ಕರಾರು ಮಾಡಿಕೊಳ್ಳುವ ಸಾಮರ್ಥ್ಯವನ್ನು ನಿರಾಕರಿಸಲು ಅವಕಾಶವಿರತಕ್ಕದ್ದಲ್ಲ.

## ಅಧ್ಯಾಯ –XIV

## ಅಡ್ಡಗೆರೆ ಹಾಕಿದ ಚೆಕ್ಕುಗಳ ವಿಷಯಗಳಲ್ಲಿ

**123. ಸಾಮಾನ್ಯವಾಗಿ ಅಡ್ಡಗೆರೆ ಹಾಕಿದ ಚೆಕ್ಕುಗಳು.–** ಚೆಕ್ಕಿನ ಮುಖಭಾಗದ ಮೇಲೆ ಅಡ್ಡವಾದ ಎರಡು ಸಮಾಂತರ ರೇಖೆಗಳ ನಡುವೆ "ಮತ್ತು ಕಂಪೆನಿ" ಎಂಬ ಶಬ್ದಗಳನ್ನು ಅಥವಾ ಅದರ ಸಂಕ್ಷೇಪಾಕ್ಷರಗಳನ್ನು ಸೇರಿಸಿದ್ದರೆ ಅಥವಾ "ವರ್ಗಾವಣೀಯವಲ್ಲ" ಎಂಬ ಶಬ್ದಗಳ ಸಹಿತವಾಗಿ ಅಥವಾ ರಹಿತವಾಗಿ ಕೇವಲ ಎರಡು ಸಮಾಂತರ ಅಡ್ಡ ರೇಖೆಗಳನ್ನು ಹಾಕಿದ್ದರೆ ಅಂಥ ಸೇರ್ಪಡೆಯನ್ನು ಅಡ್ಡಗೆರೆ ಹಾಕಲಾದುದು ಎಂದು ಭಾವಿಸತಕ್ಕದ್ದು ಮತ್ತು ಆ ಚೆಕ್ಕು ಸಾಮಾನ್ಯವಾಗಿ ಅಡ್ಡಗೆರೆ ಹಾಕಲಾದುದು ಎಂದು ಭಾವಿಸತಕ್ಕದ್ದು.

**124. ವಿಶೇಷವಾಗಿ ಅಡ್ಡಗೆರೆ ಹಾಕಿದ ಚೆಕ್ಕು.–** ಚೆಕ್ಕಿನ ಮುಖಭಾಗದ ಮೇಲೆ ಅಡ್ಡವಾಗಿ "ವರ್ಗಾವಣೀಯವಲ್ಲ" ಎಂಬ ಶಬ್ದಗಳ ಸಹಿತವಾಗಿ ಅಥವಾ ರಹಿತವಾಗಿ ಬ್ಯಾಂಕರನ ಹೆಸರನ್ನು ಸೇರಿಸಿದ್ದರೆ, ಸೇರ್ಪಡೆಯನ್ನು ಅಡ್ಡಗೆರೆ ಎಂದು ಭಾವಿಸಲಾಗುವುದು ಮತ್ತು ಆ ಚೆಕ್ಕು ವಿಶೇಷವಾಗಿ ಅಡ್ಡಗೆರೆ ಹಾಕಲಾದುದು ಎಂದು ಮತ್ತು ಆ ಬ್ಯಾಂಕರನ ಪರವಾಗಿ ಆ ಅಡ್ಡಗೆರೆ ಹಾಕಲಾಗಿದೆ ಎಂದು ಭಾವಿಸತಕ್ಕದ್ದು.

**125. ಬರೆದುಕೊಟ್ಟ ಅನಂತರ ಅಡ್ಡಗೆರೆ ಹಾಕುವುದು.–** ಚೆಕ್ಕಿಗೆ ಅಡ್ಡಗೆರೆ ಹಾಕದಿರುವಾಗ, ಧಾರಕನು ಅದಕ್ಕೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಡ್ಡಗೆರೆ ಹಾಕಬಹುದು.

ಚೆಕ್ಕಿಗೆ ಸಾಮಾನ್ಯವಾಗಿ ಅಡ್ಡಗೆರೆ ಹಾಕಿರುವಾಗ, ಧಾರಕನು ಅದಕ್ಕೆ ವಿಶೇಷ ಅಡ್ಡಗೆರೆಯನ್ನು ಹಾಕಬಹುದು.

ಚೆಕ್ಕಿಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಡ್ಡಗೆರೆ ಹಾಕಿರುವಾಗ ಧಾರಕನು "ವರ್ಗಾವಣೀಯವಲ್ಲ" ವೆಂಬ ಶಬ್ದಗಳನ್ನು ಅದಕ್ಕೆ ಸೇರಿಸಬಹುದು.

ಚೆಕ್ಕಿಗೆ ವಿಶೇಷವಾಗಿ ಅಡ್ಡಗೆರೆ ಹಾಕಿರುವಾಗ, ಯಾವ ಬ್ಯಾಂಕರನ ಪರವಾಗಿ ಅದಕ್ಕೆ ಅಡ್ಡಗೆರೆ ಹಾಕಲಾಗಿದೆಯೋ ಅವನು ಹಣ ವಸೂಲಿಗೆ ತನ್ನ ಅಭಿಕರ್ತನೆಂದು, ಇನ್ನೊಬ್ಬ ಬ್ಯಾಂಕರನಿಗೆ ಪುನಃ ವಿಶೇಷವಾಗಿ ಅಡ್ಡಗೆರೆ ಹಾಕಿಕೊಡಬಹುದು.

**126**. **ಸಾಮಾನ್ಯವಾಗಿ ಅಡ್ಡಗೆರೆ ಹಾಕಲಾದ ಚೆಕ್ಕಿನ ಸಂದಾಯ.**– ಚೆಕ್ಕಿಗೆ ಸಾಮಾನ್ಯವಾಗಿ ಅಡ್ಡಗೆರೆ ಹಾಕಲಾಗಿರುವಲ್ಲಿ, ತತ್ಸಂಬಂಧದಲ್ಲಿ ಧನಾದೇಶಿತನಾದ ಬ್ಯಾಂಕರನು, ಬ್ಯಾಂಕರನಲ್ಲದ ಮ––– ಅದನ್ನು ಸಂದಾಯ ಮಾಡತಕ್ಕದ್ದಲ್ಲ.

ವಿಶೇಷವಾಗಿ ಅಡ್ಡಗೆರೆ ಹಾಕಿದ ಚೆಕ್ಕಿನ ಸಂದಾಯ.– ಚೆಕ್ಕಿಗೆ ವಿಶೇಷವಾಗಿ ಅಡ್ಡಗೆರೆ ಹಾಕಲಾಗಿರುವಲ್ಲಿ, ತತ್ಸಂಬಂಧದಲ್ಲಿ ಧನಾದೇಶಿತನಾದ ಬ್ಯಾಂಕರನು, ಹಣ ವಸೂಲಿಗಾಗಿ ಯಾವ ಬ್ಯಾಂಕರನ ಪರವಾಗಿ ಅಡ್ಡಗೆರೆ ಹಾಕಲಾಗಿದೆಯೋ ಅವನಿಗೆ ಅಥವಾ ಅವನ ಅಭಿಕರ್ತನಿಗಲ್ಲದೆ ಅನ್ಯಥಾ ಅದನ್ನು ಸಂದಾಯ ಮಾಡತಕ್ಕದ್ದಲ್ಲ.

**127**. **ಒಂದಕ್ಕಿಂತ ಹೆಚ್ಚು ಸಲ ವಿಶೇಷವಾಗಿ ಅಡ್ಡಗೆರೆ ಹಾಕಲಾದ ಚೆಕ್ಕುಗಳ ಸಂದಾಯ.**– ಒಬ್ಬನಿಗಿಂತ ಹೆಚ್ಚು ಬ್ಯಾಂಕರರ ಪರವಾಗಿ ಚೆಕ್ಕಿಗೆ ವಿಶೇಷವಾಗಿ ಅಡ್ಡಗೆರೆ ಹಾಕಲಾಗಿರುವಲ್ಲಿ, ವಸೂಲಿಯ ಉದ್ದೇಶಕ್ಕಾಗಿ ಅಭಿಕರ್ತನ ಪರವಾಗಿ ಅಡ್ಡಗೆರೆ ಹಾಕಿಕೊಟ್ಟಿದ್ದ ಹೊರತು, ತತ್ಸಂಬಧದಲ್ಲಿ ಧನಾದೇಶಿತನಾದ ಬ್ಯಾಂಕರನು ಅದನ್ನು ಸಂದಾಯ ಮಾಡಲು ನಿರಾಕರಿಸತಕ್ಕದ್ದು.

**128**. **ಅಡ್ಡಗೆರೆ ಹಾಕಿದ ಚೆಕ್ಕಿನ ಸಮ್ಯಕ್ ಅನುಕ್ರಮದ ಸಂದಾಯ.**– ಧನಾದೇಶಿತನಾದ ಬ್ಯಾಂಕರನು ಸಮ್ಯಕ್ ಅನುಕ್ರಮದಲ್ಲಿ ಅಡ್ಡಗೆರೆ ಹಾಕಿದ ಚೆಕ್ಕನ್ನು ಸಂದಾಯ ಮಾಡಿರುವಲ್ಲಿ ಚೆಕ್ಕಿನ ಮೊಬಲಗನ್ನು ಸಂದಾಯ ಮಾಡುವ ಬ್ಯಾಂಕರನು ಮತ್ತು (ಅಂಥ ಚೆಕ್ಕು ಧನಗ್ರಾಹಿಯ ಕೈಸೇರಿರುವ ಸಂದರ್ಭದಲ್ಲಿ) ಅದರ ಧನಾದೇಶಕನು, ಚೆಕ್ಕಿನ ಮೊಬಲಗನ್ನು ಅದರ ನಿಜವಾದ ಮಾಲೀಕನಿಗೆ ಸಂದಾಯ ಮಾಡಿದ್ದರೆ ಮತ್ತು ಅವನು ಅದನ್ನು ಪಡೆದಿದ್ದರೆ ಅವರು ಅನುಕ್ರಮವಾಗಿ ಯಾವ

ಅಧಿಕಾರಗಳಿಗೆ ಮತ್ತು ಸ್ಥಾನಕ್ಕೆ ಹಕ್ಕು ಹೊಂದಿರುತ್ತಿದ್ದರೋ ಅಂಥವೇ ಅಧಿಕಾರಗಳನ್ನು ಹೊಂದಲು ಮತ್ತು ಸ್ಥಾನವನ್ನು ಅನುಕ್ರಮವಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**129. ಅಡ್ಡಗೆರೆ ಹಾಕಿದ ಚೆಕ್ಕುಗಳಿಗೆ ಸಮ್ಯಕ್ ಅನುಕ್ರಮ ಬಾಹಿರವಾಗಿ ಸಂದಾಯ.–** ಸಾಮಾನ್ಯವಾಗಿ ಅಡ್ಡಗೆರೆ ಹಾಕಿದ ಚೆಕ್ಕಿನ ಮೊಬಲಗನ್ನು ಬ್ಯಾಂಕರನಿಗೆ ಅಲ್ಲದೆ ಅನ್ಯಥಾ ಸಂದಾಯ ಮಾಡುವ ಅಥವಾ ವಿಶೇಷವಾಗಿ ಅಡ್ಡಗೆರೆ ಹಾಕಿರುವ ಚೆಕ್ಕಿನ ಮೊಬಲಗನ್ನು ಅಡ್ಡಗೆರೆಯಲ್ಲಿ ನಮೂದಿಸಿದ ಬ್ಯಾಂಕರನಿಗೆ ಅಥವಾ ವಸೂಲಿಗಾಗಿ ಅವನ ಅಭಿಕರ್ತನಾಗಿರುವ ಬ್ಯಾಂಕರನಿಗೆ ಅಲ್ಲದೆ ಅನ್ಯಥಾ ಸಂದಾಯ ಮಾಡುವ ಯಾವನೇ ಬ್ಯಾಂಕರನು, ಚೆಕ್ಕು ಹಾಗೆ ಸಂದಾಯವಾದುದರ ಕಾರಣದಿಂದಾಗಿ ಚೆಕ್ಕಿನ ನಿಜವಾದ ಮಾಲೀಕನಿಗೆ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ ಹೊಣೆಗಾರನಾಗತಕ್ಕದ್ದು.

**130. "ವರ್ಗಾವಣೀಯವಲ್ಲ" ಎಂಬುದನ್ನುಳ್ಳ ಚೆಕ್ಕು.–** ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಡ್ಡಗೆರೆ ಹಾಕಿದ, ಪ್ರತಿ ಸಂದರ್ಭದಲ್ಲೂ 'ವರ್ಗಾವಣೀಯವಲ್ಲ' ಎಂಬ ಶಬ್ದಗಳನ್ನುಳ್ಳ ಚೆಕ್ಕನ್ನು ತೆಗೆದುಕೊಳ್ಳುವ ವ್ಯಕ್ತಿಯು, ತಾನು ಯಾವ ವ್ಯಕ್ತಿಯಿಂದ ಅದನ್ನು ತೆಗೆದುಕೊಂಡಿದ್ದನೋ ಅವನಿಗೆ ಚೆಕ್ಕಿನ ಬಗ್ಗೆ ಇದ್ದುದ್ದಕ್ಕಿಂತ ಹೆಚ್ಚಿನ ಹಕ್ಕನ್ನು ಹೊಂದತಕ್ಕದ್ದಲ್ಲ, ಮತ್ತು ಹೆಚ್ಚಿನ ಹಕ್ಕನ್ನು ಕೊಡಲು ಸಮರ್ಥನಾಗಿರತಕ್ಕದ್ದಲ್ಲ.

**131. ಚೆಕ್ಕಿನ ಸಂದಾಯವನ್ನು ಪಡೆಯುವ ಬ್ಯಾಂಕರನು ಹೊಣೆಗಾರನಾಗದಿರುವಿಕೆ.–** ಸಾಮಾನ್ಯವಾಗಿ ಅಥವಾ ವಿಶೇಷವಾಗಿ ತನಗೆ ಅಡ್ಡಗೆರೆ ಹಾಕಿಕೊಡಲಾದ ಚೆಕ್ಕಿನ ಮೊಬಲಗನ್ನು ಬ್ಯಾಂಕರನು ಸದ್ಭಾವನೆಯಿಂದ ಮತ್ತು ನಿರ್ಲಕ್ಷ್ಯವಿಲ್ಲದೆ, ಗಿರಾಕಿಯ ಪರವಾಗಿ ಸ್ವೀಕರಿಸಿದ್ದರೆ ಚೆಕ್ಕಿನ ಹಕ್ಕು ದೋಷಪೂರಿತವಾಗಿದೆ ಎಂದು ಸಾಬೀತಾದಲ್ಲಿ ಅಂಥ ಸಂದಾಯವನ್ನು ಸ್ವೀಕರಿಸಿದ್ದನೆಂಬ ಕಾರಣಮಾತ್ರದಿಂದಲೇ ಅವನು ಚೆಕ್ಕಿನ ನಿಜವಾದ ಮಾಲೀಕನಿಗೆ ಯಾವ ರೀತಿಯಲ್ಲಿಯೂ ಹೊಣೆಗಾರನಾಗತಕ್ಕದ್ದಲ್ಲ.

ವಿವರಣೆ.– ಬ್ಯಾಂಕರನು ತನ್ನ ಗಿರಾಕಿಯ ಖಾತೆಗೆ ಚೆಕ್ಕಿನ ಮೊಬಲಗನ್ನು ಆ ಬಗ್ಗೆ ಸಂದಾಯವನ್ನು ಸ್ವೀಕರಿಸುವುದಕ್ಕಿಂತ ಮೊದಲೇ ಜಮೆ ಮಾಡಿದ್ದರೂ ಅವನು ಈ ಪ್ರಕರಣದ ಅರ್ಥದಲ್ಲಿ ಗಿರಾಕಿಯ ಪರವಾಗಿ, ಅಡ್ಡಗೆರೆ ಹಾಕಿದ ಚೆಕ್ಕಿನ ಮೊಬಲಗನ್ನು ಸ್ವೀಕರಿಸಿರುತ್ತಾನೆ.

**131ಕ. ಡ್ರಾಫ್ಟುಗಳಿಗೆ ಈ ಅಧ್ಯಾಯದ ಅನ್ವಯ.–** 85ಕ ಪ್ರಕರಣದಲ್ಲಿ ಪರಿಭಾಷಿಸಿದಂತೆ ಇರುವ ಯಾವುದೇ ಡ್ರಾಫ್ಟಿಗೆ ಈ ಅಧ್ಯಾಯದ ಉಪಬಂಧಗಳು ಡ್ರಾಫ್ಟು ಒಂದು ಚೆಕ್ಕು ಎಂಬ ಹಾಗೆ ಅನ್ವಯಿಸತಕ್ಕದ್ದು.

## ಅಧ್ಯಾಯ –XV

## ವಿನಿಮಯ ಪತ್ರ ಸಮುಚ್ಚಯದ ವಿಷಯದಲ್ಲಿ

**132. ವಿನಿಮಯ ಪತ್ರ ಸಮುಚ್ಚಯ.–** ವಿನಿಮಯ ಪತ್ರಗಳನ್ನು ಭಾಗಗಳಲ್ಲಿ, ಆ ಪ್ರತಿಯೊಂದು ಭಾಗವು ಅಂಕಿಸಲ್ಪಟ್ಟಿದ್ದು ಮತ್ತು ಅದು ಇತರ ಭಾಗಗಳು ಸಂದಾಯವಾಗದೆ ಇರುವವರೆಗೆ ಮಾತ್ರ ಸಂದೇಯವಿರುತ್ತದೆ ಎಂಬ ಉಪಬಂಧದೊಂದಿಗೆ, ಧನಾದೇಶಿಸಬಹುದು. ಎಲ್ಲ ಭಾಗಗಳೂ ಸೇರಿ ಒಂದು ಸಮುಚ್ಚಯವಾಗುತ್ತದೆ; ಆದರೆ ಸಂಪೂರ್ಣ ಸಮುಚ್ಚಯವು ಒಂದೇ ವಿನಿಮಯ ಪತ್ರ ಮಾತ್ರವಾಗಿರುತ್ತದೆ ಮತ್ತು ಅದು ಅವುಗಳಲ್ಲಿ ಒಂದು ಭಾಗವು ಪವ್ರತ್ಯೇಕ ವಿನಿಮಯ ಪತ್ರವಾಗಿದ್ದರೆ ಹೇಗೆ ಕೊನೆಗೊಳ್ಳುತ್ತಿತ್ತೋ ಹಾಗೆ ಕೊನೆಗೊಳ್ಳುತ್ತದೆ.

ಅಪವಾದ.– ವಿನಿಮಯ ಪತ್ರದ ವಿವಿಧ ಭಾಗಗಳನ್ನು ಒಬ್ಬ ವ್ಯಕ್ತಿಯು ವಿವಿಧ ವ್ಯಕ್ತಿಗಳ ಪರವಾಗಿ ಒಪ್ಪಿಕೊಂಡಾಗ ಅಥವಾ ಹಿಂಬರಹ ಮಾಡಿದಾಗ, ಅವನು ಮತ್ತು ಪ್ರತಿಯೊಂದು ಭಾಗದ ತರುವಾಯದ ಹಿಂಬರಹಗಾರರು ಅಂಥ ಭಾಗದ ಮೇಲೆ ಅದು ಪ್ರತ್ಯೇಕ ಪತ್ರವಾಗಿದ್ದರೆ ಹೇಗೋ ಹಾಗೆ ಹೊಣೆಗಾರರಾಗಿರುತ್ತಾರೆ.

**133. ಮೊದಲು ಪಡೆದುಕೊಂಡ ಭಾಗದ ಧಾರಕನು ಎಲ್ಲಕ್ಕೂ ಹಕ್ಕುದಾರನಾಗುವುದು.–** ಒಂದೇ ಸಮುಚ್ಚಯದ ವಿವಿಧ ಭಾಗಗಳ ಸಮ್ಯಕ್ ಅನುಕ್ರಮಧಾರಕರ ನಡುವೆ ಯಾವನು ಮೊದಲು ತನ್ನ ಭಾಗಕ್ಕೆ ಹಕ್ಕುದಾರನಾದನೋ ಅವನು ಇತರ ಭಾಗಗಳಿಗೆ ಮತ್ತು ವಿನಿಮಯ ಪತ್ರದ ಹಣಕ್ಕೆ ಹಕ್ಕುದಾರನಾಗುತ್ತಾನೆ.

## ಅಧ್ಯಾಯ –XVI

## ಅಂತರ ರಾಷ್ಟ್ರೀಯ ಕಾನೂನು ವಿಷಯದಲ್ಲಿ

**134. ವಿದೇಶಿ ಲಿಖಿತವನ್ನು ಬರೆದು ಕೊಡುವವನ, ಒಪ್ಪಿಗೆದಾರನ ಅಥವಾ ಹಿಂಬರಹಗಾರನ ಹೊಣೆಗೆ ಅನ್ವಯಿಸುವ ಕಾನೂನು.–** ತದ್ವಿರುದ್ಧ ಕರಾರು ಇರದಿದ್ದಲ್ಲಿ, ವಿದೇಶಿ ಪ್ರಾಮಿಸರಿ ನೋಟು,

ವಿನಿಮಯ ಪತ್ರ ಅಥವಾ ಚೆಕ್ಕನ್ನು ಬರೆದು ಕೊಡುವವನ ಅಥವಾ ಧನಾದೇಶಕನ ಹೊಣೆಗಾರಿಕೆಯನ್ನು ಎಲ್ಲ ಮುಖ್ಯ ವಿಷಯಗಳಲ್ಲಿ, ಅವನು ಲಿಖಿತವನ್ನು ಬರೆದುಕೊಟ್ಟ ಸ್ಥಳದ ಕಾನೂನಿನ ಮೇರೆಗೆ ಮತ್ತು ಒಪ್ಪಿಗೆದಾರನ ಮತ್ತು ಹಿಂಬರಹಗಾರನ ಅನುಕ್ರಮವಾದ ಹೊಣೆಗಾರಿಕೆಗಳನ್ನು ಲಿಖಿತವನ್ನು ಸಂದೇಯವನ್ನಾಗಿ ಮಾಡಲಾದ ಸ್ಥಳದ ಕಾನೂನಿನ ಮೇರೆಗೆ ವಿನಿಮಯನಗೊಳಿಸಲಾಗುತ್ತದೆ.

**ದೃಷ್ಟಾಂತ**

'ಎ'ನು ಕ್ಯಾಲಿಫೋರ್ನಿಯದಲ್ಲಿ ಒಂದು ವಿನಿಮಯ ಪತ್ರವನ್ನು ಧನಾದೇಶಿಸಿದನು. ಅಲ್ಲಿನ ಬಡ್ಡಿ ದರವು ಶೇಕಡಾ 25 ಇದೆ. ಮತ್ತು ಶೇಕಡಾ 6 ರಂತೆ ಬಡ್ಡಿ ದರ ಇರುವ ವಾಷಿಂಗ್‌ಟನ್ನಿನಲ್ಲಿ ಅದು ಸಂದೇಯವಿರುವುದೆಂಬುದನ್ನು 'ಬಿ' ಬಯ ಒಪ್ಪಿದ್ದಾನೆ. ವಿನಿಮಯ ಪತ್ರದ ಮೇಲೆ ಭಾರತದಲ್ಲಿ ಹಿಂಬರಹ ಮಾಡಲಾಗಿದೆ. ಮತ್ತು ಅದು ಅನಾದರಿತವಾಗಿದೆ. ವಿನಿಮಯ ಪತ್ರದ ಮೇಲೆ 'ಖ'ನ ವಿರುದ್ಧವಾಗಿ ಭಾರತದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಅವನು ಶೇಕಡಾ 6 ರಂತೆ ಮಾತ್ರ ಬಡ್ಡಿಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುತ್ತಾನೆ. ಆದರೆ 'ಕ'ನನ್ನು ಧನಾದೇಶಕನೆಂದು ಭಾರಿತಗೊಳಿಸುವುದಾದರೆ ಅವನು ಶೇಕಡಾ 25 ರಂತೆ ಬಡ್ಡಿಯನ್ನು ಸಂದಾಯ ಮಾಡಲು ಹೊಣೆಗಾರನಾಗುತ್ತಾನೆ.

**135. ಸಂದಾಯದ ಸ್ಥಳದ ಕಾನೂನು ಅನಾದರಕ್ಕೆ ಅನ್ವಯಿಸುತ್ತದೆ.–** ಪ್ರಾಮಿಸರಿ ನೋಟು, ವಿನಿಮಯ ಪತ್ರ ಅಥವಾ ಚಕ್ಕನ್ನು ಬರೆದು ಕೊಡಲಾದ ಅಥವಾ ಹಿಂಬರಹ ಮಾಡಲಾದ ಸ್ಥಳದಲ್ಲಿ ಬೇರೆ ಸ್ಥಳದಲ್ಲಿ ಸಂದೇಯವೆಂದು ಮಾಡಲಾಗಿರುವಲ್ಲಿ ಆ ಸ್ಥಳದ ಕಾನೂನು ಯಾವಾಗ ಅನಾದರವು ಘಟಿತವಾಗುತ್ತದೆ ಮತ್ತು ಅನಾದರದ ಯಾವ ನೋಟೀಸು ಸಾಕಾಗುತ್ತದೆ ಎನ್ನುವುದನ್ನು ನಿರ್ಧರಿಸುತ್ತದೆ.

ಭಾರತದಲ್ಲಿ ಧನಾದೇಶಿಸಲಾದ ಮತ್ತು ಹಿಂಬರಹ ಮಾಡಲಾದ ಆದರೆ ಫ್ರಾನ್ಸಿನಲ್ಲಿ ಸಂದೇಯವೆಂದು ಒಪ್ಪಿಕೊಳ್ಳಲಾದ ವಿನಿಮಯ ಪತ್ರವು ಅನಾದರಿತವಾಗಿದೆ. ಹಿಂಬರಹದಾರನು ಅಂಥ ಅನಾದರಕ್ಕಾಗಿ ಪ್ರಸಾಕ್ಷ್ಯ ಮಾಡಿಸುತ್ತಾನೆ ಮತ್ತು ವಿದೇಶೀಯವಲ್ಲದ ವಿನಿಮಯ ಪತ್ರಗಳ ಸಂಬಂಧದಲ್ಲಿ ಇದರಲ್ಲಿರುವ ನಿಯಮಗಳಿಗನುಸಾರವಾಗಿಯಲ್ಲದೆ ಆ ಬಗ್ಗೆ ನೋಟೀಸನ್ನು ಫ್ರಾನ್ಸಿನ ಕಾನೂನಿಗನುಸಾರವಾಗಿ ಕೊಡುತ್ತಾನೆ. ಆ ನೋಟಿಸು ಸಾಕಾಗುತ್ತದೆ.

**136. ಭಾರತದ ಹೊರಗೆ, ಭಾರತದ ಕಾನೂನಿಗನುಸಾರವಾಗಿ ಬರೆದುಕೊಟ್ಟ ಲಿಖಿತ ಇತ್ಯಾದಿ.–** ವರ್ಗಾವಣೀಯ ಲಿಖಿತವನ್ನು ಭಾರತದ ಹೊರಗೆ, ಆದರೆ ಭಾರತದ ಕಾನೂನಿಗನುಸಾರವಾಗಿ ಬರೆದು ಧನಾದೇಶಿಸಿ, ಒಪ್ಪಿ ಅಥವಾ ಹಿಂಬರಹ ಮಾಡಿಕೊಟ್ಟಿದ್ದರೆ, ಅಂಥ ಲಿಖಿತಕ್ಕೆ ಸಾಕ್ಷ್ಯವಾದ ಒಪ್ಪಂದವು ಅದನ್ನು ಮಾಡಿಕೊಂಡ ದೇಶದ ಕಾನೂನಿಗನುಸಾರವಾಗಿ ಕಾನೂನು ಮಾನ್ಯವಾಗಿಲ್ಲವೆಂಬ ಸನ್ನಿವೇಶವು ಅದರ ಮೇಲೆ ಭಾರತದೊಳಗೆ ಮಾಡಿದ ತರುವಾಯದ ಯಾವುದೇ ಒಪ್ಪಿಗೆ ಅಥವಾ ಹಿಂಬರಹವನ್ನು ಅಮಾನ್ಯಗೊಳಿಸುವುದಿಲ್ಲ.

## ಅಧ್ಯಾಯ –XVII

## ಖಾತೆಗಳಲ್ಲಿ ನಿಧಿಗಳು ಸಾಕಷ್ಟಿಲ್ಲದಿರುವ ಕಾರಣದಿಂದ ಕೆಲವು ಚೆಕ್ಕುಗಳ ಅನಾಧರಣೆಯ ಸಂದರ್ಭದಲ್ಲಿ ದಂಡಗಳು

**138. ಖಾತೆಯಲ್ಲಿ ನಿಧಿಗಳು ಸಾಕಷ್ಟಿಲ್ಲದಿರುವುದು, ಇತ್ಯಾದಿ ಕಾರಣಕ್ಕಾಗಿ ಚೆಕ್ಕು ಅನಾದರಿತವಾಗುವುದು.–** ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯನ್ನು ಪೂರ್ಣವಾಗಿ ಅಥವಾ ಭಾಗಶಃ ತೀರಿಸುವುದಕ್ಕಾಗಿ ಒಬ್ಬ ವ್ಯಕ್ತಿಯು ಒಬ್ಬ ಬ್ಯಾಂಕರ್‌ನಲ್ಲಿ ತಾನು ಇಟ್ಟ ಖಾತೆಯಿಂದ ಯಾವುದೇ ಮೊಬಲಗನ್ನು ಇನ್ನೊಬ್ಬ ವ್ಯಕ್ತಿಗೆ ಸಂದಾಯ ಮಾಡುವುದಕ್ಕಾಗಿ ಬರೆದ ಯಾವುದೇ ಚೆಕ್ಕನ್ನು, ಆ ಖಾತೆಯಲ್ಲಿ ಜಮೆ ಇರುವ ಮೊಬಲಗು ಸಾಕಷ್ಟಿಲ್ಲದಿರುವ ಅಥವಾ ಅದು ಆ ಬ್ಯಾಂಕಿನೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಆ ಖಾತೆಯಿಂದ ಸಂದಾಯ ಮಾಡಲು ವ್ಯವಸ್ಥೆ ಮಾಡಿರುವ ಮೊಬಲಗನ್ನು ಮೀರಿರುವ ಕಾರಣದಿಂದಾಗಿ ಬ್ಯಾಂಕು ಸಂದಾಯ ಮಾಡದೆ ಹಿಂದಿರುಗಿಸಿರುವಲ್ಲಿ ಅಂಥ ವ್ಯಕ್ತಿಯು ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಅವನು ಈ ಅಧಿನಿಯಮದ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಆ ಚೆಕ್ಕಿನ ಮೊಬಲಗಿನ ಎರಡರಷ್ಟಕ್ಕೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ.–

(ಎ) ಆ ಚೆಕ್ಕನ್ನು ಬರೆದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಅಥವಾ ಅದರ ಸಿಂಧುತ್ವ ದ ಅವಧಿಯೊಳಗೆ ಇವುಗಳಲ್ಲಿ ಯಾವುದು ಮುಂಚಿತವೋ ಆ ಅವಧಿಯೊಳಗೆ ಬ್ಯಾಂಇಗೆ ಅದನ್ನು ಹಾಜರುಪಡಿಸಿದ ಹೊರತು;

(ಬಿ) ಸಂದರ್ಭಾನುಸಾರ, ಸ್ವೀಕರ್ತನು ಅಥವಾ ಆ ಚೆಕ್ಕಿನ ತರುವಾಯದ ಧಾರಕನು ಸಂದಾಯ ಮಾಡದೇ ಚೆಕ್ಕನ್ನು ಹಿಂದಿರುಗಿಸಿರುವ ಬಗ್ಗೆ ಬ್ಯಾಂಕಿನಿಂದ ಮಾಹಿತಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಚೆಕ್ಕು ಬರೆದವನಿಗೆ ಬರವಣಿಗೆಯಲ್ಲಿ ನೋಟೀಸನ್ನು ಕೊಡುವ ಮೂಲಕ ಸದರಿ ಮೊಬಲಗನ್ನು ಸಂದಾಯ ಮಾಡುವಂತೆ ತಗಾದೆ ಮಾಡಿದ ಹೊರತು ಮತ್ತು;

(ಸಿ) ಅಂಥ ಚೆಕ್ಕನ್ನು ಬರೆದವನು, ಸದರಿ ನೋಟೀಸನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಸ್ವೀಕರ್ತನಿಗೆ ಅಥವಾ ಸಂದರ್ಭಾನುಸಾರ ಆ ಚೆಕ್ಕಿನ ತರುವಾಯದ ಧಾರಕನಿಗೆ ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದ್ದ ಹೊರತು

–ಅನ್ವಯವಾಗತಕ್ಕದ್ದಲ್ಲ.

ವಿವರಣೆ.– ಈ ಪ್ರಕರಣದ ಉದ್ದೇಶಗಳಿಗಾಗಿ, "ಋಣ ಅಥವಾ ಇತರ ಹೊಣೆಗಾರಿಕೆ" ಎಂದರೆ ಕಾನೂನಿನ ಮೂಲಕ ಜಾರಿಗೊಳಿಸಬಹುದಾದ ಋಣ ಅಥವಾ ಇತರ ಹೊಣೆಗಾರಿಕೆ.

**139. ಧಾರಕನ ಪರವಾಗಿ ಪೂರ್ವಭಾವನೆ.–** ತದ್ವಿರುದ್ಧವಾದುದು ರುಜುವಾತಾದ ಹೊರತು, ಚೆಕ್ಕಿನ ಧಾರಕನು, ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯ ಪೂರ್ಣ ಅಥವಾ ಭಾಗಶಃ ತೀರಿಕೆಗಾಗಿ 138ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಸ್ವರೂಪದ ಚೆಕ್ಕನ್ನು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು.

**140. 138 ನೇ ಪ್ರಕರಣದ ಮೇರೆಗೆ ಯಾವುದೇ ಪ್ರಾಸಿಕ್ಯೂಷನ್‌ನಲ್ಲಿ ಅನುಮತಿಸಲಾಗದ ಪ್ರತಿರಕ್ಷೆ.–** ಚೆಕ್ಕು ಬರೆದವನು, ಅವನು ಚೆಕ್ಕನ್ನು ನೀಡಿದಾಗ, ಆ ಚೆಕ್ಕನ್ನು ಹಾಜರುಪಡಿಸಿದಾಗ ಆ ಪ್ರಕರಣದಲ್ಲಿ ಹೇಳಿದ ಕಾರಣಗಳಿಗಾಗಿ ಅನಾದರಗೊಳಿಸಬಹುದೆಂದು ನಂಬಲು ಯಾವುದೇ ಕಾರಣವಿರಲಿಲ್ಲವೆಂಬುದು 138ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ನಡೆಯುವ ಪ್ರಾಸಿಕ್ಯೂಷನ್ನಿನಲ್ಲಿ ಪ್ರತಿರಕ್ಷೆಯಾಗತಕ್ಕದ್ದಲ್ಲ.

**141. ಕಂಪನಿಗಳಿಂದ ಅಪರಾಧಗಳು.–** 138ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿದ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಸಮಯದಲ್ಲಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಆ ಕಂಪನಿಯ ವ್ಯವಹಾರವನ್ನು ನಡೆಸುವ ಬಗ್ಗೆ ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ತಿಳುವಳಿಕಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆ ವಹಿಸಿದ್ದೆನೆಂದು ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಉಪ-ಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು, ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾಗಿದೆ ಎಂದು ರುಜುವಾತಾದರೆ, ಅಂಥ ನಿರ್ದೇಶಕ ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ**.- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಕ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**142. ಅಪರಾಧಗಳ ಸಂಜ್ಞಾನ**.- ದಂಡ ಪ್ರಕ್ರಿಯಾ ಸಂಹಿತೆ 1973ರಲ್ಲಿ ಏನೇ ಇದ್ದರೂ,-

(ಎ) ಯಾವುದೇ ನ್ಯಾಯಾಲಯವು ಚೆಕ್ಕಿನ ಸ್ವೀಕರ್ತನು ಅಥವಾ ಸಂದರ್ಭಾನುಸಾರ ತರುವಾಯದ ಧಾರಕನು ಬರವಣಿಗೆಯಲ್ಲಿ ಒಂದು ದೂರನ್ನು ನೀಡಿದ್ದ ಹೊರತು, 138ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಸಂಜ್ಞೇಯತೆಯನ್ನು ಕೈಗೊಳ್ಳತಕ್ಕದ್ದಲ್ಲ.

(ಬಿ) ಅಂಥ ದೂರನ್ನು 138ನೇ ಪ್ರಕರಣದ ಪರಂತುಕದ (ಸಿ)ಖಂಡದ ಮೇರೆಗೆ ಉಂಟಾಗುವ ವ್ಯಾಜ್ಯ ಕಾರಣದ ದಿನಾಂಕದಿಂದ ಒಂದು ತಿಂಗಳೊಳಗೆ ಸಲ್ಲಿಸಿರಬೇಕು;

(ಸಿ) 138ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು ಅಧಿವಿಚಾರಣೆ ನಡೆಸತಕ್ಕದ್ದಲ್ಲ.

ಅನುಸೂಚಿ (ನಿರಸಿತ)

ಕೆ.ಎಲ್. ಮೋಹನ್ ಪುರಿಯಾ